Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–13 ಮಾರ್ಚ್ 27–ಏಪ್ರಿಲ್ 2, 2023 ಪುಟ 16 ರೂ. 10/–
Volume-17 Issue-13 March 27-April 2, 2023 Pages:16 Price: 10/-





ಗಂಗಯ್ಯನಪಾಳ್ಯ : ಬಗರ್ ಹುಕುಂ ಭೂಮಿಯಿಂದ ಅರಣ್ಯ ಇಲಾಖೆಯನ್ನು ಹೊರದಬ್ಬಿದ ರೈತರು

ಈರುಳ್ಳಿ ಬೆಲೆ ಕುಸಿತ! ರಸಗೊಬ್ಬರ ಬೆಲೆ ಏರಿಕೆ!

ಅಂಜನಾದ್ರಿ ಅಭಿವೃದ್ಧಿಗೇಕೆ ಇಷ್ಟು ಅವಸರ?

ಉರಿಗೌಡ, ನಂಜೇಗೌಡ ಐತಿಹಾಸಿಕ ವ್ಯಕ್ತಿಗಳೋ ಕಾಲ್ಪನಿಕವೋ?






ಹೆಸರಿಸಲಾಗದ ಆ ಒಬ್ಬ...

‘ವೀರ’ ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ ‘ಸಾವರ್ಕರ್ ಅನ್‌ಮಾಸ್ಕ್ಡ್’ ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.

ಡಾ. ಶಮ್ಸುಲ್‌ಇಸ್ಲಾಂ
ಅನು: ಟಿ.ಸುರೇಂದ್ರರಾವ್



ಭಾಗ–22

ಇದುವರೆಗೆ ಮೂರು ಮಿಥ್ಯೆಗಳ ವಿಶ್ಲೇಷಣೆಗಳನ್ನು ಓದಿರುವಿರಿ_
ಮಿಥ್ಯೆ 1: ‘ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ’!?
ಮಿಥ್ಯೆ 2: ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!?
ಮಿಥ್ಯೆ 3–ಸಾವರ್ಕರ್ ಅವರ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವಷ್ಟೆ!?
ಈಗ ಮಿಥ್ಯೆ 4ರ ಬಗ್ಗೆ ಓದಿ...
ಮುಸ್ಲಿಂ ಲೀಗಿನ ವಿರುದ್ಧ ಸಾವರ್ಕರ್ ಬಂಡೆಯಂತೆ ನಿಂತಿದ್ದರು ಎಂಬುದೇ ಆ ಮಿಥ್ಯೆ.

ಜಿನ್ನಾರ ಮುಸ್ಲಿಂಲೀಗಿನ ಪ್ರತ್ಯೇಕತಾವಾದಕ್ಕೆ ಸಮರ್ಥನೆ ದೊರೆತದ್ದು ಸಾವರ್ಕರರಿಂದಲೇ

ಮುಸ್ಲಿಂ ಲೀಗಿನ ಮೊಹಮ್ಮದ್ ಆಲಿ ಜಿನ್ನಾ ಮತ್ತಿತರ ಮುಸ್ಲಿಂ ಕೋಮುವಾದಿಗಳಂತೆ ಸಾವರ್ಕರ್ ಕೂಡ ದ್ವಿರಾಷ್ಟ್ರ ಸಿದ್ಧಾಂತದಲ್ಲಿ ನಂಬಿಕೆ ಇಟ್ಟುಕೊಂಡಿದ್ದರು. 1937 ರಲ್ಲಿ ಅಹಮದಾಬಾದಿನಲ್ಲಿ ನಡೆದ ಹಿಂದೂ ಮಹಾಸಭಾದ 19 ನೇ ಅಧಿವೇಶನದ ಅಧ್ಯಕ್ಷೀಯ ಭಾಷಣ ಮಾಡುವಾಗ ಸಾವರ್ಕರ್ ಅವರು ನಿಸ್ಸಂದಿಗ್ಧವಾಗಿ ಹೀಗೆ ಘೋಷಿಸಿದ್ದರು. ಮೂರು ವರ್ಷಗಳ ನಂತರ 1940ರಲ್ಲಿ ಮುಸ್ಲಿಂ ಲೀಗ್ ಪ್ರತ್ಯೇಕ ಪಾಕಿಸ್ತಾನ ಬೇಕೆಂಬ ನಿರ್ಣಯವನ್ನು ಲಾಹೋರಿನಲ್ಲಿ ಅಂಗೀಕರಿಸಿದಾಗ ಜಿನ್ನಾ ಅವರು ಸಾವರ್ಕರ್ ಮಾತುಗಳನ್ನೇ ನಿರ್ದಿಷ್ಟವಾಗಿ ಉಲ್ಲೇಖಿಸಿ ತಮ್ಮದೇ ಬ್ರಾಂಡಿನ ದ್ವಿರಾಷ್ಟ್ರ ಸಿದ್ಧಾಂತಕ್ಕೆ ಸಮರ್ಥನೆ ಮಾಡಿಕೊಂಡರು ಎಂಬ ಸಂಗತಿ ಗಮನಾರ್ಹವಾದುದು. ಅಲ್ಲದೆ ಮುಸ್ಲಿಂ ಲೀಗಿನೊಂದಿಗೆ ಯಾವುದೇ ರೀತಿಯ ವ್ಯವಹಾರವನ್ನು ವಿರೋಧಿಸುತ್ತೇವೆ ಎಂದು ಕಾಂಗ್ರೆಸ್ ಪಕ್ಷ 1942 ರಲ್ಲಿ ಹೇಳುತ್ತಿದ್ದಾಗ, ಸಿಂಧ್ ಮತ್ತು ಬಂಗಾಳಗಳಲ್ಲಿ ಹಿಂದೂ ಮಹಾಸಭಾ ಮತ್ತು ಮುಸ್ಲಿಂ ಲೀಗ್ ಮೈತ್ರಿ ಸರ್ಕಾರಗಳನ್ನು ನಡೆಸಿದ್ದವು ಎಂಬ ವಿಷಯ ಬಹಳ ಜನಕ್ಕೆ ಗೊತ್ತಿರಲಿಕ್ಕಿಲ್ಲ.

ಸಾವರ್ಕರ್ ಮುಸ್ಲಿಂ ಲೀಗಿನ ಕೋಮುವಾದಿ ರಾಜಕೀಯದ ವಿರುದ್ಧ ಇದ್ದರು

ನೆಹರೂ–ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷವು ಮುಖ್ಯವಾಗಿ ಮುಸ್ಲಿಂ ಲೀಗಿನ ಮುಸ್ಲಿಂ ಕೋಮುವಾದಕ್ಕೆ ಪದೇ ಪದೇ ಶರಣಾಗುತ್ತಿದೆ ಎಂದು ನಂಬಿದ್ದ ಸಾವರ್ಕರ್ ಅವರು ಕಾಂಗ್ರೆಸ್ಸನ್ನು ವಿರೋಧಿಸಿದರು ಎಂದು ಸಾವರ್ಕರ್ ಹಾಗೂ ಹಿಂದುತ್ವ ಬೆಂಬಲಿಗರು ಪ್ರತಿಪಾದಿಸುತ್ತಾರೆ. ಈ ರೀತಿ ಹೆಚ್ಚುತ್ತಿರುವ ಮುಸ್ಲಿಂ ತುಷ್ಟೀಕರಣವನ್ನು ತಡೆಯಲು ಬೇರಾವುದೇ ರಾಷ್ಟ್ರೀಯ ಸಂಘಟನೆಯು ಇಲ್ಲದೇ ಇದ್ದುದರಿಂದ ಹಿಂದೂಗಳನ್ನು ಹುರುಪಿನಿಂದ ಸಂಘಟಿಸದೇ ಬೇರಾವುದೇ ಮಾರ್ಗ ಅವರಿಗಿರಲಿಲ್ಲ.

ವಾಸ್ತವಾಂಶಗಳು

ಸಾವರ್ಕರ್‌ವಾದಿಗಳ ಈ ಸಮರ್ಥನೆ ಒಂದು ವಂಚನೆಯಷ್ಟೆ. ನಿಜ ಹೇಳಬೇಕೆಂದರೆ ದ್ವಿರಾಷ್ಟ್ರ ಸಿದ್ಧಾಂತಕ್ಕೆ ತಾತ್ವಿಕ ನೆಲೆಯನ್ನು ಅತ್ಯಂತ ಉತ್ಕಟವಾಗಿ ಒದಗಿಸಿದವರು ಸಾವರ್ಕರ್ ಅವರೇ ಆಗಿದ್ದಾರೆ. ಅಷ್ಟೇ ಅಲ್ಲದೆ, ಸಾವರ್ಕರ್ ನೇತೃತ್ವದ ಹಿಂದೂ ಮಹಾಸಭಾವು ಮುಸ್ಲಿಂ ಲೀಗಿನೊಂದಿಗೆ ಮೈತ್ರಿ ಸರ್ಕಾರ ರಚಿಸಿದ್ದು; ಹಿಂದೂ ಮಹಾಸಭಾದ ಪತ್ರಾಗಾರದಲ್ಲೇ ಸಿಗುವ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಅವಲೋಕನ ಮಾಡಿದರೆ ಆ ಮಾಹಿತಿ ಲಭ್ಯವಾಗುತ್ತದೆ. ವಾಸ್ತವದಲ್ಲಿ, ಸಾವರ್ಕರ್ ಮತ್ತು ಹಿಂದೂ ಮಹಾಸಭಾವು ಹಿಂದೂ ಪ್ರತ್ಯೇಕತಾವಾದಕ್ಕೆ ಮುಂದಾಗಿದ್ದರಿಂದಲೇ ಮುಸ್ಲಿಂ ಪ್ರತ್ಯೇಕತಾವಾದಕ್ಕೆ ನ್ಯಾಯಸಮ್ಮತ ಎಂಬ ಸಮರ್ಥನೆ ದೊರಕಿತು.

ದ್ವಿರಾಷ್ಟ್ರ ಸಿದ್ಧಾಂತವನ್ನು ಸಾವರ್ಕರ್ ಅವರು ಬಹಿರಂಗವಾಗಿಯೇ ಬೆಂಬಲಿಸಿದರು

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ದ್ವಿರಾಷ್ಟ್ರ ಸಿದ್ಧಾಂತವನ್ನು ಪ್ರತಿಪಾದಿಸುವಲ್ಲಿ ಅವರ ಪಾತ್ರವನ್ನು ಸಂಪೂರ್ಣವಾಗಿ ಅಂದಾಜು ಮಾಡಲು ಅವರು 1937 ರಿಂದ 1942 ರವರೆಗೆ ಒಬ್ಬ ಸ್ವತಂತ್ರ ವ್ಯಕ್ತಿಯಾಗಿ ಹಿಂದೂ ಮಹಾಸಭಾಕ್ಕೆ ಮಾರ್ಗದರ್ಶನ ಮಾಡುವಾಗಿನ ಅವರ ಮಾತುಗಳು ಹಾಗೂ ಕೆಲಸಗಳನ್ನು ಪರಿಚಯ ಮಾಡಿಕೊಳ್ಳಬೇಕು. ಹಿಂದೂ ರಾಷ್ಟ್ರ ದರ್ಶನ ಎಂಬ ಶಿರೋನಾಮೆಯಡಿಯಲ್ಲಿ ಮಹಾರಾಷ್ಟ್ರದ ಹಿಂದೂ ಮಹಾಸಭಾ ಪ್ರಕಟಿಸಿದ್ದ ಪುಸ್ತಕವೊಂದು ಲಭ್ಯವಿದೆ. ಆ ಪಸ್ತಕದ ಪ್ರಕಾರ ಮುಸ್ಲಿಂ ಲೀಗಿನ ಮೊಹಮ್ಮದ್ ಆಲಿ ಜಿನ್ನಾ ಮತ್ತಿತರ ಮುಸ್ಲಿಂ ಕೋಮುವಾದಿಗಳಂತೆ ಸಾವರ್ಕರ್ ಕೂಡ ದ್ವಿರಾಷ್ಟ್ರ ಸಿದ್ಧಾಂತದಲ್ಲಿ ನಂಬಿಕೆ ಇಟ್ಟುಕೊಂಡಿದ್ದರು. 1937 ರಲ್ಲಿ ಅಹಮದಾಬಾದಿನಲ್ಲಿ ನಡೆದ ಹಿಂದೂ ಮಹಾಸಭಾದ 19 ನೇ ಅಧಿವೇಶನದ ಅಧ್ಯಕ್ಷೀಯ ಭಾಷಣ ಮಾಡುವಾಗ ಸಾವರ್ಕರ್ ಅವರು ನಿಸ್ಸಂದಿಗ್ಧವಾಗಿ ಹೀಗೆ ಘೋಷಿಸಿದರು:

ಭಾರತದಲ್ಲಿ ಈಗಾಗಲೇ ಎರಡು ಪರಸ್ಪರ ವಿರುದ್ಧವಾಗಿ ಕೆಲಸ ಮಾಡುವ ರಾಷ್ಟ್ರಗಳು ಅಕ್ಕಪಕ್ಕದಲ್ಲಿ ನೆಲೆಸಿವೆ; ಭಾರತವು ಈಗಾಗಲೇ ಒಂದು ಸಮರಸವಾದ ದೇಶವಾಗಿ ಬೆರೆತುಹೋಗಿದೆ, ಅಥವಾ ಹಾಗೆ ಬಯಸುವ ಮಾತ್ರದಿಂದಲೇ ಬೆಸೆಯಬಹುದು ಎಂದು ಭಾವಿಸುವ ಗಂಭೀರ ಪ್ರಮಾದವನ್ನು ಬಗೆಬಗೆಯ ಶೈಶವಾವಸ್ಥೆಯಲ್ಲಿರುವ ರಾಜಕಾರಣಿಗಳು ಎಸಗುತ್ತಿದ್ದಾರೆ. ಇವೆಲ್ಲವೂ ಮಹತ್ವದ ವಿಚಾರಗಳೇ ಹೌದು ಆದರೆ ಯೋಚನೆಯನ್ನೇ ಮಾಡದ ಗೆಳೆಯರು ತಮ್ಮ ಕನಸುಗಳನ್ನು ವಾಸ್ತವವೆಂದು ತಿಳಿಯುತ್ತಿದ್ದಾರೆ. ಆದ ಕಾರಣ ಅವರು ಕೋಮುವಾದಿ ಗೋಜಲುಗಳ ಬಗ್ಗೆ ತಾಳ್ಮೆ ಕಳೆದುಕೊಳ್ಳುತ್ತಿದ್ದಾರೆ ಮತ್ತು ಅವುಗಳನ್ನು ಕೋಮುವಾದಿ ಸಂಘಟನೆಗಳೆಂದು ಆರೋಪಿಸುತ್ತಿದ್ದಾರೆ. ಆದರೆ ದೃಢವಾದ ಸತ್ಯವೇನೆಂದರೆ ಈ ಕೋಮು ಪ್ರಶ್ನೆಗಳು ಎನ್ನಲಾಗುವ ಇವು ಹಿಂದೂಗಳು ಮತ್ತು ಮುಸ್ಲಿಮರ ನಡುವಿನ ಶತಶತಮಾನಗಳ ಸಾಂಸ್ಕೃತಿಕ, ಧಾರ್ಮಿಕ ಹಾಗೂ ರಾಷ್ಟ್ರೀಯ ವೈಷಮ್ಯಗಳಾಗಿದ್ದು ಪರಂಪರಾಗತವಾಗಿ ಹರಿದು ಬಂದಿವೆ. ಆ ಅಹಿತಕರ ವಾಸ್ತವವನ್ನು ಅವು ಹೇಗಿದೆಯೋ ಹಾಗೆ ನಾವು ಧೈರ್ಯದಿಂದ ಎದುರಿಸಬೇಕು. ಭಾರತವನ್ನು ಒಂದು ಏಕಘಟಕ ಹಾಗೂ ಸಮರಸದ ದೇಶವೆಂದು ಇವತ್ತು ಭಾವಿಸಲು ಸಾಧ್ಯವಿಲ್ಲ; ಅದಕ್ಕೆ ಪ್ರತಿಯಾಗಿ, ಭಾರತದಲ್ಲಿ ಪ್ರಧಾನವಾಗಿ ಎರಡು ದೇಶಗಳಿವೆ: ಹಿಂದೂಗಳು ಮತ್ತು ಮುಸ್ಲಿಮರು.

ಮುಸ್ಲಿಂ ಲೀಗ್ ತನ್ನ ಪಾಕಿಸ್ತಾನ ನಿರ್ಣಯವನ್ನು ಲಾಹೋರಿನಲ್ಲಿ (1940) ಅಂಗೀಕರಿಸಿದಾಗ ಜಿನ್ನಾ ಅವರು ಸಾವರ್ಕರ್ ಅವರ ಈ ಮೇಲಿನ ಮಾತುಗಳನ್ನೇ ನಿರ್ದಿಷ್ಟವಾಗಿ ಉಲ್ಲೇಖಿಸಿ ತಮ್ಮದೇ ಬ್ರಾಂಡಿನ ದ್ವಿರಾಷ್ಟ್ರ ಸಿದ್ಧಾಂತಕ್ಕೆ ಸಮರ್ಥನೆ ಮಾಡಿಕೊಂಡರು ಎಂಬ ಸಂಗತಿ ಗಮನಾರ್ಹವಾದುದು. ಸಾವರ್ಕರ್ ಅವರೂ ಕೂಡ ಇದೇ ರೀತಿಯಲ್ಲಿ ತಮ್ಮ ಮಾತಿನ ಸಮರ್ಥನೆ ಮಾಡಿಕೊಂಡರು. ಆಗಸ್ಟ್ 15, 1943 ರಂದು ನಾಗಪುರದಲ್ಲಿ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುವಾಗ “ಜಿನ್ನಾರವರ ದ್ವಿರಾಷ್ಟ್ರ ಸಿದ್ಧಾಂತದೊಂದಿಗೆ ನನಗೇನೂ ಜಗಳವಿಲ್ಲ. ನಾವು ಹಿಂದೂಗಳು ಒಂದು ದೇಶವಾಗಿದ್ದೇವೆ ಮತ್ತು ಹಿಂದೂಗಳು ಮತ್ತು ಮುಸ್ಲಿಮರು ಎರಡು ದೇಶಗಳು ಎನ್ನುವುದು ಚಾರಿತ್ರಿಕ ಸತ್ಯ" ಎಂದು ಹೇಳುವ ಮಟ್ಟಕ್ಕೂ ಅವರು ಹೋದರು. ಒಂದು ಪ್ರತ್ಯೇಕ ಹಿಂದೂ ರಾಷ್ಟ್ರದ ಸೃಷ್ಟಿಯನ್ನು ಸಮರ್ಥಿಸುವಾಗ ಅವರು ಹೇಳಿದರು “ಈ ಸೌರ ಮಂಡಲದಲ್ಲಿ ನಾವು ಹಿಂದೂಗಳಾಗಿ ನಮ್ಮದೇ ಆದ ದೇಶವನ್ನು ಹೊಂದಲೇಬೇಕು ಮತ್ತು ಒಂದು ಬಲಿಷ್ಠ ಜನರ ವಂಶಜರಾಗಿ ಹಿಂದೂಗಳು ಅಲ್ಲಿ ಪ್ರವರ್ಧಮಾನರಾಗಿ ಮುಂದುವರಿಯಬೇಕು.” ಹಿಂದೂ ಕೋಮುವಾದವನ್ನು ಭಾರತೀಯ ರಾಷ್ಟ್ರೀಯತೆಗೆ ಸಮಾನವೆಂದು ಹೋಲಿಸುವಾಗ ಅವರು ಹೀಗೆ ಘೋಷಿಸಿದರು: “ವಾಸ್ತವದಲ್ಲಿ, ಹಿಂದೂ ಮಹಾಸಭಾದ ಸಿದ್ಧಾಂತವನ್ನು ಅಂಗೀಕರಿಸಿರುವ ಹಿಂದೂಗಳಿಗೆ ಹಿಂದೂ ಹಿತಾಸಕ್ತಿ ಹಾಗೂ ತನ್ನ ರಾಷ್ಟ್ರೀಯ ಹಿತಾಸಕ್ತಿಯ ನಡುವೆ ಯಾವುದೇ ವ್ಯತ್ಯಾಸ ಇರಲಾರದು.”

ದ್ವಿರಾಷ್ಟ್ರ ಸಿದ್ಧಾಂತದಲ್ಲಿನ ಸಾವರ್ಕರ್ ಅವರ ನಂಬಿಕೆಯು ಅವರನ್ನು ಮುಸ್ಲಿಂ ಲೀಗ್ ಪ್ರತ್ಯೇಕವಾಗಿ ಎಲ್ಲಾ ಮುಸ್ಲಿಮರನ್ನು ಪ್ರತಿನಿಧಿಸುತ್ತದೆ ಮತ್ತು ಹಿಂದೂ ಮಹಾಸಭಾವು ಪ್ರತ್ಯೇಕವಾಗಿ ಎಲ್ಲಾ ಹಿಂದೂಗಳನ್ನು ಪ್ರತಿನಿಧಿಸುತ್ತದೆ ಎಂಬ ನಂಬಿಕೆಯತ್ತ ಕೂಡ ಕೊಂಡೊಯ್ಯಿತು. ಮದುರಾದಲ್ಲಿ ಹಿಂದೂ ಮಹಾಸಬಾದ 22 ನೇ ಅಧಿವೇಶನವನ್ನು ಉದ್ದೇಶಿಸಿ ತಮ್ಮ ಅಧ್ಯಕ್ಷೀಯ ಭಾಷಣ ಮಾಡುವಾಗ ಅವರು ಈ ರೀತಿ ಧನ್ಯವಾದಗಳನ್ನು ಸಲ್ಲಿಸಿದರು:

> “ಹಿಂದೂ ಸಂಸ್ಥೆಯ ಅತ್ಯಂತ ಮಹೋನ್ನತ ಪ್ರತಿನಿಧಿಯಾಗಿ ಹಿಂದೂ ಮಹಾಸಭಾಕ್ಕೆ ವಿವೇಚನೆಯಿಂದ ಹಾಗೂ ನಿರ್ಣಾಯಕವಾಗಿ ಮಾನ್ಯತೆ ನೀಡುವ ಮೂಲಕ ಘನತೆವತ್ತ ವೈಸ್‌ರಾಯ್‌ರವರು ಅಂತಿಮವಾಗಿ ಮುಸ್ಲಿಂ ಲೀಗ್ ಮುಸ್ಲಿಂ ಹಿತಾಸಕ್ತಿಯನ್ನು ಮತ್ತು ಹಿಂದೂ ಮಹಾಸಭಾವು ಹಿಂದೂಗಳ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತದೆ ಎಂಬ ತೀರ್ಮಾನಕ್ಕೆ ಬಂದಿರುತ್ತಾರೆ . .”

‘ಮುಸ್ಲಿಂ ಲೀಗ್ ಸಾಮಾನ್ಯವಾಗಿ ಮುಸ್ಲಿಮರ ಅಭಿಪ್ರಾಯವನ್ನು ವ್ಯಕ್ತಮಾಡುತ್ತದೆ ಎಂದು ಸರಿಯಾಗಿಯೇ ಪರಿಗಣಿಸಿದೆ” ಎಂದು ಬ್ರಿಟಿಷರ ನೀತಿಯನ್ನು ಹಿಂದೂ ಮಹಾಸಭಾದ ಮುಖಂಡರಾಗಿ ಸಾವರ್ಕರ್ ಅವರು ಯಾವಾಗಲೂ ಹಾಡಿ ಹೊಗಳಿದ್ದಾರೆ. ಅದೇ ರೀತಿಯಲ್ಲಿ, ಹಿಂದೂ ಮಹಾಸಭಾವನ್ನು ಹಿಂದೂಗಳ ಏಕೈಕ ಪ್ರತಿನಿಧಿಯಾಗಿ ಒಪ್ಪಿಕೊಳ್ಳಬೇಕೆಂದು ಸಾವರ್ಕರ್ ಒತ್ತಾಯಿಸಿದರು. ಭಾರತವು ‘ಎರಡು ಪರಸ್ಪರ ವಿರುದ್ಧ ಕೆಲಸ ಮಾಡುವ ದೇಶಗಳ’ ಒಂದು ದೇಶವಾಗಿ ಉಳಿದಿದೆ ಎಂಬ ತರ್ಕದ ಆಧಾರದಲ್ಲಿ ಈ ನಂಬಿಕೆಯನ್ನು ಅವರು ಬೆಳೆಸಿಕೊಂಡಿದ್ದಾರೆ.

ತಮ್ಮ ದ್ವಿರಾಷ್ಟ್ರ ಸಿದ್ಧಾಂತವನ್ನು ಸಾವರ್ಕರ್ ಅವರು ಭಾಷೆಗಳ ಲೋಕಕ್ಕೂ ಅನ್ವಯಿಸುತ್ತಾರೆ. ಮುಸ್ಲಿಂ ಲೀಗಿನವರಂತೆ ಹಿಂದಿ ಹಿಂದೂಗಳ ಭಾಷೆ ಮತ್ತು ಉರ್ದು ಮುಸ್ಲಿಮರ ಭಾಷೆ ಎಂದು ಅವರು ನಂಬುತ್ತಾರೆ ಮತ್ತು ಬೋಧಿಸುತ್ತಾರೆ ಕೂಡ. ಸೆಪ್ಟೆಂಬರ್ 1, 1939 ರಂದು ‘ಹಿಂದೂ ಪಕ್ಷದ ನೀತಿ’ಯ ಸ್ಥೂಲಚಿತ್ರ ನೀಡುತ್ತಾ ನೀಡಿದ ಹೇಳಿಕೆಯಲ್ಲಿ ಅವರು ಘೋಷಿಸುತ್ತಾರೆ:

> “ಅಪ್ಪಟ ಹಾಗೂ ಸಂಸ್ಕೃತವನ್ನು ಆಧರಿಸಿದ ಹಿಂದಿ ಭಾಷೆಯು ಹಿಂದೂಗಳ ರಾಷ್ಟ್ರೀಯ ಭಾಷೆಯಾಗಿರಬೇಕು ಮತ್ತು ನಾಗರಿಯು ರಾಷ್ಟ್ರೀಯ ಲಿಪಿಯಾಗಿರಬೇಕು. ಮುಸ್ಲಿಮರು ಅವರದೇ ಆದ ಉರ್ದು ಶಾಲೆಗಳನ್ನು ಹೊಂದಲು ಅವಕಾಶವಿರುತ್ತದೆ ಮತ್ತು ಅದನ್ನು ಅವರ ಸಮುದಾಯದ ಭಾಷೆಯಾಗಿ ಅಳವಡಿಸಿಕೊಳ್ಳುತ್ತಾರೆ ಮತ್ತು ತೆರಿಗೆಗಳಲ್ಲಿ ಅವರ ಕೊಡುಗೆ ಮತ್ತು ಆ ಪ್ರದೇಶಗಳಲ್ಲಿ ಅವರ ಜನಸಂಖ್ಯೆಯ ಅನುಪಾತದಲ್ಲಿ ಸರ್ಕಾರವು ಮುಸ್ಲಿಂ ಶಾಲೆಗಳಿಗೆ ಅನುದಾನ ಮತ್ತು ಸ್ಕಾಲರ್‌ಷಿಪ್‌ಗಾಗಿ ವೆಚ್ಚಮಾಡುತ್ತದೆ.”

ಹಿಂದೂ ಮಹಾಸಭಾದ ಪ್ರತಿಯೊಂದು ಸಭೆ ಮತ್ತು ಕಾರ್ಯಕ್ರಮಗಳ ಕೊನೆಯಲ್ಲಿ ‘ಹಿಂದೂ ಧರ್ಮಕ್ಕೆ ಜೈ, ಹಿಂದೂ ಮಹಾಸಭಾಕ್ಕೆ ಜೈ, ಹಿಂದೂಸ್ತಾನ ಹಿಂದೂಗಳದ್ದು’ (ಲಾಂಗ್ ಲಿವ್ ಹಿಂದೂ ರೆಲಿಜಿಯನ್, ಲಾಂಗ್ ಲಿವ್ ಹಿಂದೂ ಮಹಾಸಭಾ, ಇಂಡಿಯಾ ಬಿಲಾಂಗ್ಸ್ ಟು ಹಿಂದೂಸ್) ಎಂಬ ಘೋಷಣೆಗಳನ್ನು ನೀಡುವುದು ಕಡ್ಡಾಯವಾಗಿತ್ತು ಎಂಬುದನ್ನು ಬಹಳ ಮುಖ್ಯವಾಗಿ ತಿಳಿದುಕೊಳ್ಳಬೇಕಾಗಿದೆ.

1942 ರಲ್ಲಿ ಸಾವರ್ಕರ್ ನೇತೃತ್ವದ ಹಿಂದೂ ಮಹಾಸಭಾವು
ಮುಸ್ಲಿಂ ಲೀಗಿನೊಂದಿಗೆ ಮೈತ್ರಿ ಸರ್ಕಾರಗಳನ್ನು ನಡೆಸಿತ್ತು

ಮುಸ್ಲಿಂ ಲೀಗಿನೊಂದಿಗೆ ಯಾವುದೇ ರೀತಿಯ ವ್ಯವಹಾರವನ್ನು ವಿರೋಧಿಸುತ್ತೇವೆ ಎಂದು ಕಾಂಗ್ರೆಸ್ ಪಕ್ಷ 1942 ರಲ್ಲಿ ಹೇಳುತ್ತಿದ್ದಾಗ, ಸಿಂಧ್ ಮತ್ತು ಬಂಗಾಳಗಳಲ್ಲಿ ಹಿಂದೂ ಮಹಾಸಭಾ ಮತ್ತು ಮುಸ್ಲಿಂ ಲೀಗ್ ಮೈತ್ರಿ ಸರ್ಕಾರಗಳನ್ನು ನಡೆಸಿದ್ದವು ಎಂಬ ವಿಷಯ ಬಹಳ ಜನಕ್ಕೆ ಗೊತ್ತೇ ಇಲ್ಲ. 1942 ರಲ್ಲಿ ಕಾನ್ಪುರದಲ್ಲಿ ನಡೆದ ಹಿಂದೂ ಮಹಾಸಭಾದ 24 ನೇ ಅಧಿವೇಶನದಲ್ಲಿ ಅಧ್ಯಕ್ಷೀಯ ಭಾಷಣ ಮಾಡುವಾಗ ಸಾವರ್ಕರ್ ಅವರು ಈ ನಂಟನ್ನು ಸಮರ್ಥಿಸಿಕೊಂಡಿದ್ದಾರೆ:

> “ಪ್ರಾಯೋಗಿಕ ರಾಜಕೀಯದಲ್ಲಿ ಕೂಡ ವಿವೇಕಯುಕ್ತ ರಾಜಿ ಒಪ್ಪಂದ ಮಾಡಿಕೊಳ್ಳುವ ಮೂಲಕ ನಾವು ಮುನ್ನಡೆ ಸಾಧಿಸಬೇಕಾಗುತ್ತದೆ ಎಂದು ಮಹಾಸಭಾಗೆ ಗೊತ್ತಿದೆ. ತೀರ ಇತ್ತೀಚೆಗೆ ಸಿಂಧ್‌ನಲ್ಲಿ ಸಿಂಧ್ ಹಿಂದೂ ಮಹಾಸಭಾವು ಮುಸ್ಲಿಂ ಲೀಗಿನ ಆಹ್ವಾನವನ್ನು ಮನ್ನಿಸಿ ಅವರೊಂದಿಗೆ ಕೈಜೋಡಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಯಿತು ಮತ್ತು ಅವರೊಂದಿಗೆ ಮೈತ್ರಿ ಸರ್ಕಾರವನ್ನು ನಡೆಸುತ್ತಿದೆ. ಬಂಗಾಳದ ಪ್ರಕರಣ ಎಲ್ಲರಿಗೂ ಗೊತ್ತೇ ಇದೆ. ತನ್ನೆಲ್ಲಾ ವಿಧೇಯ ಮನೋವೃತ್ತಿಯೊಂದಿಗೆ ಕಾಂಗ್ರೆಸ್ ಕೂಡ ಅನಾಗರಿಕ ಲೀಗಿನವರ ಜತೆ ಒಡಂಬಡಿಕೆ

ಪುಟ 5 ಕ್ಕೆ

ಅಂಜನಾದ್ರಿ ಅಭಿವೃದ್ಧಿಗೇಕೆ ಇಷ್ಟು ಅವಸರ?

ಈ ವಾರ

ಎಸ್.ವೈ. ಗುರುಶಾಂತ್

ಕಳೆದ ವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಯವರು ಗಂಗಾವತಿಯ ಬಳಿಯ ಅಂಜನಾದ್ರಿ ಬೆಟ್ಟದ ಪ್ರದೇಶದಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳಿಗೆ ಅಡಿಗಲ್ಲು ಹಾಕಿದ್ದಾರೆ. ಆ ಪ್ರದೇಶದ ಜನರ ಸಲಹೆಗಳು, ತೀವ್ರ ವಿರೋಧವನ್ನು ಲೆಕ್ಕಿಸದೇ, ಭೂಸ್ವಾಧೀನದಂತಹ ಪ್ರಕ್ರಿಯೆಯನ್ನು ನಡೆಸದೇ 'ಕಂಡ' ಭೂಮಿಯಲ್ಲಿ ಪೂಜೆ ಮಾಡಿ ಎದ್ದು ಹೋಗಿದ್ದರ ವಿರುದ್ಧ ಆಕ್ರೋಶ ಸಿಡಿದಿದೆ. ಜೊತೆಗೆ ಅಭಿವೃದ್ಧಿಯನ್ನು ವಿರೋಧಿಸುವುದಿಲ್ಲವಾದರೂ ಅಲ್ಲಿಯ ಪ್ರಾಚೀನ ಪಾರಂಪಾರಿಕ ಸಂಸ್ಕೃತಿ ಪರಿಸರಕ್ಕೇ ಧಕ್ಕೆಯಾಗಬಾರದು ಎನ್ನುವ ತಜ್ಞರು, ಗಣ್ಯರ ಅಭಿಪ್ರಾಯಗಳಿಗೆ ಕವಡೆ ಕಿಮ್ಮತ್ತನ್ನೂ ನೀಡಿಲ್ಲ ಎಂಬ ಆಕ್ರೋಶವೂ ವ್ಯಕ್ತವಾಗಿದೆ. ತನ್ನದೂ ಸಹ ಉತ್ತರ ಪ್ರದೇಶದ 'ಬುಲ್ಡೋಜರ್ ಆಡಳಿತ ಎನ್ನುವುದನ್ನು ಬ.ಬೊಮ್ಮಾಯಿ ಪ್ರದರ್ಶಿಸಿದ್ದಾರೆ. ಏಕಿಷ್ಟು ತರಾತುರಿ ಅವರಿಗೆ? ಚುನಾವಣೆಗೂ ಮೊದಲು ಕಾಮಗಾರಿ ಯಾಕೆ ಮಾಡಿಲ್ಲವೆಂದು ಹನುಮಂತರಾಯ ಸಿಟ್ಟಾಗುವನೇ?

ಈ ಪ್ರದೇಶದ ಅಭಿವೃದ್ಧಿಗೆಂದು ಬಜೆಟ್ ನಲ್ಲಿ ಸರಕಾರ 125 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ. ಮೊದಲ ಹಂತದಲ್ಲಿ ರೂ.21.51 ಕೋಟಿ ಬಿಡುಗಡೆ ಮಾಡಿದೆ ನಿಜ. ಆದರೆ ಇನ್ನೇನು ಚುನಾವಣೆಗಳು ಘೋಷಿತವಾಗುವ ಹೊಸ್ತಿಲಿನಲ್ಲಿ ಕರ್ನಾಟಕ ನಿಂತಿದೆ. ಈ ಅಭಿವೃದ್ಧಿ 'ಕಾಮಗಾರಿ'ಗೂ ಚುನಾವಣೆಗೂ ಇರುವ 'ಪರ್ಸೆಂಟೇಜ್' ಸಂಬಂಧ ಎಷ್ಟು? ರಾಜಕೀಯ ಮೈಲಿಗಲ್ಲಿನ ನಿರೀಕ್ಷೆ ಇಲ್ಲಿದೆಯೇ?

ಒಂದಂತೂ ಸ್ಪಷ್ಟ. ಸರಕಾರ ಮತ್ತು ಆಡಳಿತ ಪಕ್ಷದ ನಡುವೆ ಇರುವ, ಇರಬೇಕಾಗಿಉವ ಸಾಂವಿಧಾನಿಕ ಹಾಗೂ ಪ್ರಾಯೋಗಿಕ ವ್ಯತ್ಯಾಸಗಳು ಇಲ್ಲವಾಗುತ್ತಿವೆ. ಬ. ಬೊಮ್ಮಾಯಿಯವರು ಆ ಪ್ರಕ್ರಿಯೆಯನ್ನು ಮತ್ತಷ್ಟು ಹೆಚ್ಚಿಸಿದ್ದಾರೆ. ಕಳೆದ ವರ್ಷಗಳಿಗೆ ಅಥವಾ ಆ ಅವಧಿಗೆ ಹೋಲಿಸಿದರೆ ಬಿಜೆಪಿ ಅಧಿಕಾರದ ಈ (ಯಡಿಯೂರಪ್ಪ, ಬೊಮ್ಮಾಯಿ ಅವರ) ಅವಧಿಯಲ್ಲಿ ಕರ್ನಾಟಕವನ್ನು 'ಗುಜರಾತ' ನ್ನಾಗಿಸುವ ಪ್ರಕ್ರಿಯೆ ತೀವ್ರಗೊಂಡಿದೆ. ಅದರಲ್ಲೂ ಯಡ್ಯೂರಪ್ಪನವರನ್ನು ಪದಚ್ಯುತಿಗೊಳಿಸಿ, ಬೊಮ್ಮಾಯಿಯವರನ್ನು ಕೂಡಿಸಿದ ಮೇಲೆ ಹಂತ ಹಂತವಾಗಿ ಅದು ವಿಸ್ತರಿಸುತ್ತಿದೆ. ಆರಂಭದಲ್ಲಿ ಬೊಮ್ಮಾಯಿ ಅವರ ತಂದೆಯವರ ವಿಚಾರ ಧಾರೆಯ ನೆರಳಿನಲ್ಲಿ ಇರುತ್ತಾರೆಂದು ಕೆಲವರು ನಿರೀಕ್ಷಿಸಿದ್ದರು. ಸಂಘದ ಕೈಗೊಂಬೆ ತಾನಲ್ಲ, ಯಡ್ಯೂರಪ್ಪನವರಿಗೂ ನಿಷ್ಠ ಎಂಬಂತೆ ಬ. ಬೊಮ್ಮಾಯಿ ಆಗೀಗ ತೋರಿಸಿಕೊಳ್ಳುತ್ತಿದ್ದರು. ಆದರೆ ಅಲ್ಪ ಕಾಲದಲ್ಲೇ ಬಿ.ಎಸ್.ವೈ.ಯ ಹಸ್ತಕ್ಷೇಪ ತಡೆಯುವುದರ ಜೊತೆಗೆ ತನ್ನ ಅಣತಿಯಂತೆ ನಡೆಯದಿದ್ದರೆ ಬೊಮ್ಮಾಯಿಯವರನ್ನೂ ಪದಚ್ಯುತಗೊಳಿಸುವ ಬೆದರಿಕೆಯನ್ನೂ 'ಸಂಘ' ಸೃಷ್ಟಿಸಿತ್ತು. ನಂತರದಲ್ಲಿ ಬ.ಬೊಮ್ಮಾಯಿಯವರು ಸಂಘದ ನಿಷ್ಠ ಸ್ವಯಂ ಸೇವಕರಾಗಿ ಬದಲಾಗಿದ್ದರು. ಆರಂಭದಲ್ಲಿ ಎರಡು ವ್ಯಕ್ತಿತ್ವಗಳ ಅಭಿವ್ಯಕ್ತರಾಗಿ, ನಂತರದಲ್ಲಿ ಪೂರ್ಣ ಸಂಘದ ಕಟ್ಟಾಳುವಿನಂತೆ ಆಗಿ ಹೋಗಿದ್ದಾರೆ. ಪ್ರಸಕ್ತವಾಗಿ, ಚುನಾವಣಾ ಲಾಭ ನಿರೀಕ್ಷೆಯಲ್ಲಿರುವ ಅವರ ಪರಿವಾರ ಜನರ ಭಕ್ತಿ ಬಳಕೆಯ ನಿರೀಕ್ಷೆಯಲ್ಲಿದೆ. ಅಂಜನಾದ್ರಿ ಕಾಮಗಾರಿಗಳಿಗೆ ತರಾತುರಿಯಲ್ಲಿ ಚಾಲನೆ ನೀಡಿರುವಲ್ಲಿ ವಿವೇಕ ಮತ್ತು ವಿವೇಚನೆಗಳನ್ನು ಕಳೆದುಕೊಂಡಿದೆ.

ಒಟ್ಟು ಸರಕಾರ ಗುರುತಿಸಿದ ಯೋಜನೆಯಲ್ಲಿ ಅಂಜನಾದ್ರಿ ಪ್ರದೇಶದಲ್ಲಿನ ಸುಮಾರು 20 ಹಳ್ಳಿಗಳಿವೆ. ಇವೆಲ್ಲಾ ಅತ್ಯಂತ ಫಲವತ್ತಾದ ನೀರಾವರಿ ಭೂಮಿಗಳು. ಆನೆಗುಂದಿ ರಾಜರು ಆಳಿದ ಪ್ರದೇಶಕ್ಕೆ ಸೇರಿದ ಊರುಗಳು. ನೂರಾರು ವರ್ಷಗಳಿಂದ ಆನೆಗುಂದಿ ಸಂಸ್ಥಾನಕ್ಕೂ, ವಿಜಯನಗರ ಸಾಮ್ರಾಜ್ಯಕ್ಕೂ ಅವುಗಳ ಖಜಾನೆ ತುಂಬಿಸಲು, ಇತರೆ ಬಹುಮುಖಿ ಕೊಡುಗೆ ನೀಡಿದ ಹಳ್ಳಿಗಳಿವು. ಇದರೊಟ್ಟಿಗೆ ಹಂಪಮ್ಮ, ಪಂಪಾಪತಿ ಸರೋವರ ಅನೇಕ ಪ್ರಮುಖ್ಯತೆವುಳ್ಳ ಸಾಂಸ್ಕೃತಿಕ ಕುರುಹುಗಳು ಇರುವ ಪ್ರದೇಶ. ಈ ಎಲ್ಲಾ ಕಾರಣಗಳಿಂದಲೇ ಅಂಜನಾದ್ರಿ ಬೆಟ್ಟ ಮತ್ತು ಸುತ್ತಲಿನ ಪರಿಸರವನ್ನು ಈಗಿರುವಂತೆ, ಸಹಜ ನೈಸರ್ಗಿಕತೆಯನ್ನು ಹಾಗೇ ಉಳಿಸಿಕೊಳ್ಳುವಂತೆ ಪ್ರಮುಖರು ಮನವಿ ಮಾಡಿದ್ದರು. ಮಾನವ ಕುಲ ನಡೆದ ಹೆಜ್ಜೆ ಗುರುತಿಸಲು, ಗತಕಾಲದ ಬಗ್ಗೆ ತಿಳಿವು ಪಡೆಯಲು ಇವುಗಳ ಸಂರಕ್ಷಣೆಯ ಮಹತ್ವವನ್ನು ಅರುಹಿದ್ದರು. ರಸ್ತೆ, ವಾಣಿಜ್ಯ ಸಂಕೀರ್ಣ, ಲಾಡ್ಜಿಂಗ್, ಇತ್ಯಾದಿಗಳ ನಿರ್ಮಾಣಕ್ಕೆ ಬೆಟ್ಟದ ಹಿಂಬದಿಯ ಸರಕಾರಿ ಬಂಜರು ಭೂಮಿಯನ್ನು ಬಳಸಿಕೊಳ್ಳಲು ಸೂಚಿಸಲಾಗಿತ್ತು. ಆದರೆ ಸರಕಾರ ಅಲ್ಲಿಯ ಸ್ಥಳೀಯರನ್ನು ಒಕ್ಕಲೆಬ್ಬಿಸದೇ ಅಭಿವೃದ್ಧಿ ಸಾಧಿಸಲಾಗದು ಎಂದು ಹಠಕ್ಕೆ ಬಿದ್ದವರಂತೆ ವರ್ತಿಸುತ್ತಿದೆ!

ಅಡಿಗಲ್ಲು ಹಾಕಿರುವುದು ಸರಕಾರಕ್ಕೆ ಸೇರಿದ ಜಮೀನಲ್ಲಿ ಎಂದು ಹೇಳಲಾಗುತ್ತಿದೆ. ಆದರೆ ಅಂಜನಾದ್ರಿಯ ಅಭಿವೃದ್ಧಿ ಎನ್ನುವುದು ಒಂದು ತುಂಡು ಗುತ್ತಿಗೆಯ ಕಾಮಗಾರಿಯಲ್ಲ. ಸರಕಾರವೇ ಪ್ರಕಟಿಸಿದಂತೆ ಅದೊಂದು ಸಮಗ್ರವಾದ ವಿಸ್ತೃತ ಯೋಜನೆ. ಅಯೋಧ್ಯೆಗೂ ಅಂಜನಾದ್ರಿಗೂ ನಂಟು ಬೆಸೆವ ಪೌರಾಣಿಕ ಕೆಲಸವೂ ಆರಂಭಗೊಂಡಿದೆ. ಈಗಿನ ಒಂದೆರಡು ಕಟ್ಟಡಗಳ ಕಾಮಗಾರಿ ಸತಕಾರಿ ಜಮೀನಿನಲ್ಲಿ ಮಾಡಿದರೂ ಅದು ಮುಂದಿನ ಯೋಜನೆಗೆ ಅಂಟಿಕೊಂಡದ್ದು ಮಾತ್ರವಲ್ಲ ಸ್ಥಳೀಯ ಗಣ್ಯ ನಾಗರೀಕರು, ಗ್ರಾಮಸ್ಥರು ಸೂಚಿಸುವಂತೆ ಸಾಂಸ್ಕೃತಿಕ, ಧಾರ್ಮಿಕ ಪರಿಸರ ಕಾಯುವ, ಬದುಕಿನ ನೆಲೆ ಉಳಿಸಿಕೊಳ್ಳುವುದಕ್ಕೆ ವ್ಯತಿರಿಕ್ತವಾದುದು. ಸರಕಾರವೊಂದಕ್ಕೆ ಒಂದಿಷ್ಟು ಅಧಿಕಾರ ಇದೆಯೆಂದ ಮಾತ್ರಕ್ಕೆ ಮನಸ್ಸಿಗೆ ಬಂದಂತೆ ವರ್ತಿಸಬಹುದು ಎನ್ನುವುದು ಸರ್ವಾಧಿಕಾರೀ ದುಂಡಾವರ್ತನೆ. ತೋರುಂಭ ಲಾಭದ ಧಾವಂತದಲ್ಲಿರುವ 40 ಪರ್ಸೆಂಟ್ ಸರಕಾರಕ್ಕೆ ಈ ಸಂವೇದನೆ, ಸೂಕ್ಷ್ಮಗಳು ಅರ್ಥವಾಗುವುದು ಹೇಗೆ?



ಮಂಗಳೂರು ಪರಿಸರದಲ್ಲಿ ಡಿವೈಎಫ್‌ಐನಿಂದ ಭಗತ್‌ಸಿಂಗ್ ಸ್ಮರಣೆ

ಮಾರ್ಚ್ 23 ರಂದು ಭಗತ್‌ಸಿಂಗ್, ರಾಜಗುರು, ಸುಖ್‌ದೇನಾ ಅವರನ್ನು ಬ್ರಿಟಿಷ್ ವಸಾಹತುಶಾಹಿ ನೇಣುಗಂಬಕ್ಕೇರಿಸಿದ ದಿನ. ಪ್ರತಿವರ್ಷದಂತೆ ದೇಶಾದ್ಯಂತ ಹುತಾತ್ಮ ದಿನವನ್ನು ಆಚರಿಸಲಾಗುತ್ತಿದೆ. ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮಂಗಳೂರಿನಲ್ಲಿ ಮಾರ್ಚ್ 23ರ ಸಂಜೆ ಜಿಲ್ಲಾಧಿಕಾರಿ ಕಚೇರಿ ಎದುರಿನಿಂದ ಕ್ಲಾಕ್‌ಟವರ್ ವರೆಗೆ ಭಗತ್‌ಸಿಂಗ್ ಮುಖವಾಡ ಧರಿಸಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯ ಅಂತ್ಯದಲ್ಲಿ ಭಗತ್‌ಸಿಂಗ್ ಮತ್ತು ಸಂಗಾತಿಗಳು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದ ಪಾತ್ರ, ಸಮಾಜವಾದಿ ಸಮಾಜಕ್ಕಾಗಿ ಅವರ ಕಳಕಳಿ ಇವನ್ನು ನಿರೂಪಿಸಿ ಡಿವೈಎಫ್‌ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಜಿಲ್ಲಾ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ಡಿವೈಎಫ್‌ಐ ನಗರ ಸಮಿತಿ ಅಧ್ಯಕ್ಷ ಜಗದೀಶ್ ಬಜಾಲ್, ಕಾರ್ಯದರ್ಶಿ ನವೀನ್ ಕೊಂಚಾಡಿ ಮತ್ತು ನಗರ ಸಮಿತಿ ಸದಸ್ಯರು ಪ್ರದರ್ಶನದ ನೇತೃತ್ವ ವಹಿಸಿದ್ದರು.

ಮಂಗಳೂರು ನಗರದ ಹೊರವಲಯದ ಬಜಾಲು–ಪಕ್ಕಲಡ್ಕ, ಕೊಂಚಾಡಿ, ಬೆಂಗ್ರೆ, ಪಂಜಿಮೊಗರು ಅಲ್ಲದೆ, ಉಳ್ಳಾಲ ಪ್ರದೇಶದ ಕುತ್ತಾರು ಮೊದಲಾದೆಡೆ ಆ ದಿನ ಮುಂಜಾನೆ ಮೆರವಣಿಗೆ ನಡೆಸಿ ಭಗತ್‌ಸಿಂಗ್ ಹಾಗೂ ಸಂಗಾತಿಗಳ ತ್ಯಾಗಬಲಿದಾನವನ್ನು ನೆನಪಿಸಲಾಯಿತು.

–ವರದಿ:ವಾ.ಉ.

ಪೌರ ಕಾರ್ಮಿಕರ ಮುಷ್ಕರಕ್ಕೆ ಬೆಂಬಲಿಸಿ ಸಮಾನ ಮನಸ್ಕ ಸಂಘಟನೆಗಳ ಪ್ರದರ್ಶನ:

ರಾಜ್ಯಾದ್ಯಂತ ಪೌರಕಾರ್ಮಿಕರು ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಪ್ರತಿಭಟನಾ ಧರಣಿಯನ್ನು ನಡೆಸುತ್ತಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರೂ ನಡೆಸುತ್ತಿರುವ ಮುಷ್ಕರ 10ನೇ ದಿನಕ್ಕೆ ಕಾಲಿಟ್ಟ ಸಂದರ್ಭದಲ್ಲಿ ಮಾರ್ಚ್ 21 ರಂದು, ಸಮಾನ ಮನಸ್ಕರ ಸಂಘಟನೆಗಳು ನೇತೃತ್ವವಹಿಸಿ ಮಂಗಳೂರು ಮಹಾನಗರ ಪಾಲಿಕೆ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಿತ್ತು.

ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಇಮ್ತಿಯಾಜ್, ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಮಾಜಿ ಮೇಯರ್ ಕಾಂಗ್ರೆಸ್ಸಿನ ಅಶ್ರಫ್ ಮಾತನಾಡಿದರು.ಪ್ರತಿಭಟನೆಯಲ್ಲಿ ಡಿವೈಎಫ್‌ಐನ ನವೀನ್‌ಕೊಂಚಾಡಿ, ಜಗದೀಶ್ ಬಜಾಲ್, ಸಿಐಟಿಯುವಿನ ಯೋಗೀಶ್ ಜಪ್ಪಿನಮೊಗರು, ಮಹಮ್ಮದ್ ಮುಸ್ತಾಫ, ವಿಲ್ಲಿ ವಿಲ್ಸನ್, ಜೆಎಂಎಸ್‌ನ ಭಾರತಿ ಬೋಳಾರ್, ಪ್ರಮೀಳಾ ದೇವಾಡಿಗ, ಅಸುಂತಾ ಡಿಸೋಜ, ಎಸ್‌ಎಫ್‌ಐನ ವಿನೀತ್, ಮಾಜಿ ಕಾರ್ಪರೇಟರ್ ದಯಾನಂದ ಶೆಟ್ಟಿ ಮೊದಲಾದವರು ನೇತೃತ್ವ ವಹಿಸಿದ್ದರು.





ದಾವಣಗೆರೆ



ಕಲಬುರ್ಗಿ



ಕೆ.ಆರ್. ಪುರಂ

ರಾಜ್ಯದ ವಿವಿಧೆಡೆ ಸೌಹಾರ್ದ ಉಗಾದಿ:

ಸೌಹಾರ್ದ ಕರ್ನಾಟಕ ವೇದಿಕೆಯಿಂದ ಎಲ್ಲಾ ಧರ್ಮದ ಬಾಂದವರನ್ನು ಸೇರಿಸಿ ಸಾಮರ್ಸ್ಯದ ಯುಗಾದಿ ಆಚರಿಸಲಾಯಿತು. ಯುಗಾದಿ ಹಿಂದೂಗಳ ಹೊಸ ವರ್ಷದ ಮೊದಲ ಹಬ್ಬ. ರಾಜ್ಯದ ವಿವಿಧೆಡೆಗಳಲ್ಲಿ ಸೌಹಾರ್ದ ಉಗಾದಿ ಆಚರಣೆಗಳು ನಡೆದಿರುವ ವರದಿಗಳು ಬಂದಿವೆ. ಯುಗಾದಿ ಸಂಭ್ರಮವನ್ನು ಹಿಂದೂಗಳು ಮಾತ್ರವವಲ್ಲದೇ ಮುಸ್ಲಿಂ, ಕ್ರೈಸ್ತರು, ಬೌದ್ದರು ಜೊತೆಗೂಡಿ ಆಚರಿಸಿದ್ದಾರೆ. ಸಮಾನ ಮನಸ್ಕರು, ವಿವಿಧ ಸಮುದಾಯದ ಮುಖಂಡರು ಸೌಹಾರ್ದ ಮತ್ತು ಸಹಬಾಳ್ವೆಗಾಗಿ ಎಂಬ ಘೋಷ ವಾಕ್ಯದೊಂದಿಗೆ ಬೇವು ಬೆಲ್ಲವನ್ನು ಪರಸ್ಪರ ಹಂಚಿ ಸೇವಿಸಿದರು

ಎಲ್ಲಾರೂ ಒಟ್ಟಾಗಿ ಹಬ್ಬ ಸಂಭ್ರಮಿಸಿ ಬೇವು ಬೆಲ್ಲ ತಿಂದು, ಪಾನಕ ಸವಿದು ಸೌಹಾರ್ದತೆಗೆ ಸಾಕ್ಷಿಯಾಗಿದ್ದಾರೆ. ಹಬ್ಬವನ್ನು ವಿಶೇಷ ರೀತಿಯಲ್ಲಿ ಆಚರಿಸಲಾಗಿದೆ. ಈ ಮೂಲಕ ಕೋಮುಸಾಮರಸ್ಯದ ಸಂದೇಶವನ್ನು ಸಾರಿದ್ದಾರೆ. ಕೋಮು ದ್ವೇಷ ಹರಡುವ ಜಗಳಗಳ ಮಧ್ಯೆ ಸೌಹಾರ್ದತೆಗೆ ಈ ಕಾರ್ಯಕ್ರಮ ಸಾಕ್ಷಿಯಾಗಿದೆ.

ಕಲಬುರ್ಗಿ, ಆಳಂದ, ತುಮಕೂರು, ಮಂಗಳೂರು, ಬೆಂಗಳೂರು, ಮೈಸೂರು, ಮಂಡ್ಯ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಸೌಹಾರ್ದ ಉಗಾದಿ ಆಚರಿಸಲಾಗಿದೆ. ಪತ್ರಿಕೆಯ ಕಣ್ಣಿಗೆ ಬಿದ್ದ ಚಿತ್ರಗಳು ಇಲ್ಲಿವೆ.



ಆನೇಕಲ್



ಮೈಸೂರು



ವಿಜಯನಗರ



ತುಮಕೂರು



ವೈಟ್ ಬೋರ್ಡ್ ಬೈಕ್ ಟ್ಯಾಕ್ಸಿ ಕಾನೂನು ಕ್ರಮ ತೆಗೆದುಕೊಳ್ಳದಂತೆ ಸರ್ಕಾರದ ಕೈ ಕಟ್ಟಿರುವುದೇನು?





ಬೆಂಗಳೂರಿನ ಆಟೋರಿಕ್ಷಾ ಚಾಲಕರು ಮಾರ್ಚ್ 20ರಂದು ಒಂದು ದಿನದ ಮುಷ್ಕರಕ್ಕೆ ಕರೆನೀಡಿದ್ದರು. ಸಿಐಟಿಯು ಸಂಯೋಜಿತ ಆಟೋರಿಕ್ಷಾ ಚಾಲಕರ ಸಂಘ ಸೇರಿದಂತೆ ಈ ಮುಷ್ಕರಕ್ಕೆ ನಗರದ ಆಟೋಚಾಲಕರ ಬಹುತೇಕ ಸಂಘಟನೆಗಳು ಒಂದಾಗಿದ್ದುದು ಒಂದು ವಿಶೇಶ. ಅದಕ್ಕಿಂತಲೂ ವಿಶೇಶವೆಂದರೆ, ಇವರು ಆಟೋ ಪ್ರಯಾಣದರ ಹೆಚ್ಚು ಮಾಡಲೆಂದೋ, ತಮಗೆ ಕಲ್ಯಾಣ ಮಂಡಳಿ ಸ್ಥಾಪಿಸುವ ಮೂಲಕ ಸಾಮಾಜಿಕ ಸೌಲಭ್ಯಗಳನ್ನು ನೀಡಬೇಕು ಎಂದೋ, ಆಟೋ ಗ್ಯಾಸ್ ಮತ್ತು ಪೆಟ್ರೋಲ್ ಮೇಲೆ ವಿಧಿಸಿರುವ ಅಧಿಕ ತೆರಿಗೆಯನ್ನು ಕಡಿತಗೊಳಿಸಬೇಕು ಎಂದೋ, ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಕಡಿವಾಣ ಹಾಕಬೇಕು ಎಂದೋ, ತಮಗೆ ವಸತಿ ಬೇಕು, ತಮ್ಮ ಮಕ್ಕಳಿಗೆ ಉಚಿತ ಶಿಕ್ಷಣ ಬೇಕು, ಉಚಿತ ಆರೋಗ್ಯ ಸೇವೆ ಬೇಕು, ಎಂಬಿತ್ಯಾದಿ ಬೇಡಿಕೆಗಳನ್ನು ಚಾಲಕರು ಸರ್ಕಾರದ ಮುಂದಿಟ್ಟಿರಲಿಲ್ಲ. ಇವರ ಪ್ರಮುಖ ಬೇಡಿಕೆ ಇದ್ದುದು ಅನಧಿಕೃತ ಬೈಕ್ ಟ್ಯಾಕ್ಸಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಿ ಎಂಬುದಾಗಿತ್ತು. ಆಟೋ ಚಾಲಕರು ನಗರದ ರೈಲು ನಿಲ್ದಾಣದಿಂದ ಮುಖ್ಯಮಂತ್ರಿ ಮನೆಯ ಕಡೆಗೆ ಮೆರವಣಿಗೆ ಹೊರಡುತ್ತಿದ್ದಂತೆ ಪೊಲೀಸರು ನೂರಾರು ಚಾಲಕರನ್ನು ಬಂಧಿಸುವ ಮೂಲಕ ಚಾಲಕರ ಹೋರಾಟವನ್ನು ಹತ್ತಿಕ್ಕಿದರು. ಇವರ ಬೇಡಿಕೆಗಳಿಗೆ ಸರ್ಕಾರ ಕವಡೆಕಾಸಿನ ಕಿಮ್ಮತ್ತನ್ನೂ ಕೊಡಲಿಲ್ಲ.

ಕಾನೂನು ಎಲ್ಲರಿಗೂ ಒಂದೇ ಆಗಿದೆಯೇ?

ಸರ್ಕಾರದ ನಡೆಯನ್ನು ಗಮನಿಸಿದರೆ ಸಾಮಾನ್ಯವಾಗಿ ಇಂತಹ ಪ್ರಶ್ನೆ ಮೂಡುತ್ತದೆ. ಇಲ್ಲೊಂದು ವಿಚಿತ್ರ ನೋಡಿ. ಯಾರಾದರೂ ದ್ವಿಚಕ್ರ, ತ್ರಿಚಕ್ರ ಅಥವಾ ಇತರೆ ವಾಹನ ಚಾಲಕರು, ನೋಪಾರ್ಕಿಂಗ್ ನಲ್ಲಿ ನಿಲ್ಲಿಸಿದರೆ, ಸಿಗ್ನಲ್ ಜಂಪ್ ಮಾಡಿದರೆ, ಸಾರಿಗೆ ಇಲಾಖೆಯ ಪರವಾನಗಿ ಇಲ್ಲದೆ ಸಾರ್ವಜನಿಕರ ಸೇವೆ ಮಾಡಿದರೆ, ಆಟೋ ಚಾಲಕರು ಕರೆದ ಕಡೆ ಹೋಗಲು ನಿರಾಕರಿಸಿದರೆ, ಸಂಚಾರಿ ನಿಯಮ ಉಲ್ಲಂಘಿಸಿದರೆ ನಮ್ಮ ಪೊಲೀಸರು ತಕ್ಷಣ ದಂಡ ವಿಧಿಸುತ್ತಾರೆ. ಅಥವಾ ಕೇಸು ದಾಖಲಿಸುತ್ತಾರೆ. ಸಾರ್ವಜನಿಕರ ಸೇವೆ ಮಾಡಲು ಪರವಾನಗಿ ಪಡೆದ ಯಾವುದಾದರೂ ವಾಹನಗಳ ವಿಮೆ ಅವಧಿ ಮುಗಿದಿದ್ದರೆ, ಪರವಾನಗಿ ನವೀಕರಣದ ಅವಧಿ ಮುಗಿದಿದ್ದರೆ, ಫಿಟ್ನೆಸ್ ಸರ್ಟಿಫಿಕೆಟ್ ಅವಧಿ ಮುಗಿದಿದ್ದರೆ, ರಸ್ತೆ ತೆರಿಗೆ ಕಟ್ಟುವುದು ತಡವಾದರೆ ನಮ್ಮ ಆರ್.ಟಿ.ಓ. ಅಧಿಕಾರಿಗಳು ವಾಹನಗಳನ್ನು ರಸ್ತೆಯಲ್ಲೇ ಅಡ್ಡ ಹಾಕಿ ದಂಡ ವಿಧಿಸುತ್ತಾರೆ. ಇದು ಈ ಇಲಾಖೆಗಳಿಗೆ ನಮ್ಮ ವ್ಯವಸ್ಥೆ ಕೊಟ್ಟಿರುವ ಅಧಿಕಾರ. ಇದನ್ನು ಯಾರೂ ಪ್ರಶ್ನೆ ಮಾಡುವಂತಿಲ್ಲ.

ಪ್ರಶ್ನೆ ಇರುವುದು, ಜನಸಾಮಾನ್ಯರು ಮಾಡುವ ಇಂತಹ ತಪ್ಪುಗಳ ವಿರುದ್ಧ ತಕ್ಷಣ ಕ್ರಮ ತೆಗೆದುಕೊಳ್ಳುವ ಈ ಇಲಾಖೆಗಳು ದೊಡ್ಡ ಹೂಡಿಕೆದಾರರ ಮತ್ತು ವಿದೇಶಿ ಹೂಡಿಕೆದಾರರ ಇಂತದೇ ತಪ್ಪುಗಳ ವಿರುದ್ಧ ತಮ್ಮ ಅಧಿಕಾರ ಚಲಾಯಿಸುವುದಿಲ್ಲವೇಕೆ? ಹಣವಂತರೇ ಇರಲಿ, ಬಡವರೇ ಇರಲಿ, ಅವರು ಯಾವುದೇ ಉನ್ನತ ಸ್ಥಾನದಲ್ಲಿರಲಿ, ನಮ್ಮ ಕಾನೂನು ವ್ಯವಸ್ಥೆ ಎಲ್ಲರಿಗೂ ಒಂದೇ ಆಗಿರುತ್ತದೆ. ಪ್ರಧಾನಿ, ಮುಖ್ಯಮಂತ್ರಿ, ಸಚಿವರು, ಜನಪ್ರತಿನಿಧಿಗಳನ್ನು ಅವರು ಮಾಡಿದ ತಪ್ಪುಗಳಿಗಾಗಿ ಜೈಲಿಗಟ್ಟಿದ ಬಲಿಷ್ಠ ಕಾನೂನು ನಮ್ಮದು. ಕಾನೂನು ಕ್ರಮ ಜರುಗಿಸುವ ಅಧಿಕಾರವನ್ನು ಈ ಇಲಾಖೆಗಳ ಅಧಿಕಾರಿಗಳಿಗೆ ಕೊಟ್ಟಿದೆ. ಆದರೂ ಯಾಕೆ ಅನಧಿಕೃತ ಬೈಕ್ ಟ್ಯಾಕ್ಸಿಗಳ ವಿರುದ್ದ ಕಾನೂನು ಕ್ರಮ ಜರುಗಿಸಲು ಇವರು ಹಿಂಜರಿಯುತ್ತಿದ್ದಾರೆ? ಇವರಗೆ ಅಡ್ಡಿಯಾಗಿರುವುದೇನು?

ಏನಿದು ವೈಟ್ ಭೋರ್ಡ್ ಟ್ಯಾಕ್ಸಿ?

ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಮುನ್ನ ಆಟೋ ಚಾಲಕರು ಕಾನೂನು ಕ್ರಮ ಕೈಗೊಳ್ಳುವಂತೆ ಹೇಳುವ ವೈಟ್ ಭೋರ್ಡ್ ಟ್ಯಾಕ್ಸಿ ಬಗ್ಗೆ ತಿಳಿದುಕೊಳ್ಳೋಣ. ಬಹಳಷ್ಟು ಜನರು, ಕಡಿಮೆ ಹಣದಲ್ಲಿ ಪ್ರಯಾಣ ಮಾಡಬಹುದು ಎಂಬ ಕಾರಣ ಹೇಳಿ ವೈಟ್ ಭೋರ್ಡ್ ಟ್ಯಾಕ್ಸಿ ಪರವಾಗಿ ಇರುವುದರಿಂದ ಇವುಗಳ ಕುರಿತು ಇಲ್ಲಿ ಹೇಳಲೇ ಬೇಕಿದೆ.

ಯಾವುದೇ ವಾಹನಗಳಲ್ಲಿ ವೈಟ್ ಭೋರ್ಡ್ ಅಳವಡಿಸಿದ್ದರೆ (ವಾಹನದ ನೊಂದಣಿ ಸಂಖ್ಯೆ ಬರೆದಿರುವ ಭೋರ್ಡ್ ಬಿಳಿ ಬಣ್ಣದ್ದಾಗಿರುತ್ತದೆ), ಅದು ಸ್ವಂತಕ್ಕೆ ಬಳಕೆ ಮಾಡುವ ವಾಹನಗಳಾಗಿರುತ್ತವೆ. ಸಾರ್ವಜನಿಕ ಸೇವೆ ಮಾಡುವ ವಾಣಿಜ್ಯ ಬಳಕೆಯ ವಾಹನಗಳ ಭೋರ್ಡ್ ಹಳದಿ ಬಣ್ಣದ್ದಾಗಿರುತ್ತವೆ. ಇದು ವಾಹನಗಳನ್ನು ಗುರುತಿಸಲು ತಂದಿರುವ ಸಾರಿಗೆ ನಿಯಮ. ವೈಟ್ ಭೋರ್ಡ್ ಹೊಂದಿರುವ ಯಾವುದೇ ವಾಹನವನ್ನು ವಾಣಿಜ್ಯ ಬಳಕೆಗೆ ಬಳಕೆ ಮಾಡುವುದು ಅಪರಾಧವಾಗುತ್ತದೆ. ಇಂತಹ ವಾಹನಗಳನ್ನು ಪೊಲೀಸರು ಅಥವಾ ಸಾರಿಗೆ ಇಲಾಖೆ ತಮ್ಮ ವಶಕ್ಕೆ ಪಡೆದು ಅಧಿಕ ಮೊತ್ತದ ದಂಡ ವಿಧಿಸಬಹುದು.

ಇಲ್ಲಿ ಮತ್ತೊಂದು ವಿಷಯವಿದೆ. ಖಾಸಗಿ ವಾಹನಗಳ ವಿಮೆ ಅದರ ಮಾಲೀಕರಿಗೆ ಮತ್ತು ಮೂರನೇ ವ್ಯಕ್ತಿಗಳಿಗೆ (ಮೂರನೇ ವ್ಯಕ್ತಿ (ಥರ್ಡ್ ಪಾರ್ಟಿ) ಎಂದರೆ, ಅಪಘಾತ ಸಂಭವಿಸಿದರೆ, ಇದರಿಂದ ಬೇರೊಬ್ಬರಿಗೆ ಅಥವಾ ಬೇರೊಂದು ವಾಹನಕ್ಕೆ ಆಗುವ ನಷ್ಟ ಭರಿಸುವ ವಿಮೆ) ಮಾತ್ರ ವಿಮೆ ಇರುತ್ತದೆ. ಹಳದಿ ಭೋರ್ಡ್ ವಾಹನಗಳ ವಿಮೆಯಲ್ಲಿ ಇವೆಲ್ಲದರ ಜೊತೆಗೆ ಪ್ರಯಾಣಿಕರಿಗೂ ವಿಮೆ ಅನ್ವಯಿಸುತ್ತದೆ. ಇದರರ್ಥ, ವೈಟ್ ಭೋರ್ಡ್ ಟ್ಯಾಕ್ಸಿಯಲ್ಲಿ ಪ್ರಯಾಣ ಮಾಡುವಾಗ ಅಪಘಾತ ಸಂಭವಿಸಿ ಏನಾದರೂ ಅನಾವುತವಾದರೆ ವಿಮೆ ಪರಿಹಾರ ಸಿಗುವುದಿಲ್ಲ.

ಈ ಬೈಕ್ ಟ್ಯಾಕ್ಸಿಗಳಿಗೆ ಪರವಾನಗಿ ಇಲ್ಲ

ವಿದೇಶಿ ಮತ್ತು ಸ್ವದೇಶಿ ಹಣಕಾಸು ಸಂಸ್ಥೆಗಳಿಂದ ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆ ಮಾಡಿರುವ, ಈ ಅಗ್ರಿಗೇಟರ್ ಕಂಪನಿಗಳು ಮಾಡುತ್ತಿರುವ ವೈಟ್ ಭೋರ್ಡ್ ಬೈಕ್ ಟ್ಯಾಕ್ಸಿಗಳಿಗೆ ಪರವಾನಗಿ ಇಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದರೂ ಈ ಬೈಕ್ ಟ್ಯಾಕ್ಸಿಗಳನ್ನು ಅಗ್ರಿಗೇಟರ್ ಕಂಪನಿಗಳು ಕಾನೂನುಗಳಿಗೆ ಬೆಲೆಕೊಡದೆ, ನಿಯಮಪಾಲನೆ ಮಾಡದೆ, ಶಿಕ್ಷೆಯ ಭಯವಿಲ್ಲದೆ ಸಾರ್ವಜನಿಕರ ಸೇವೆ ಮಾಡುತ್ತಿವೆ! ಸರ್ಕಾರ, ಪೊಲೀಸರು, ಸಾರಿಗೆ ಇಲಾಖೆ ಕಾನೂನು ಕ್ರಮ ಕೈಗೊಳ್ಳಲು ಹಿಂಜರಿಯುತ್ತಾರೆ!! ಸಾವಿರಾರು ಆಟೋ ಚಾಲಕರು ಇದರ ಬಗ್ಗೆ ದ್ವನಿ ಎತ್ತಿದರೂ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳೂ ಈ ಕಂಪನಿಗಳ ಅಕ್ರಮದ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಆದೇಶ ನೀಡುವುದಿಲ್ಲ. ಏನಿದರ ಅರ್ಥ? ಇವರೆಲ್ಲಾ ಯಾಕೆ ಕಾನೂನು ಪಾಲನೆ ಮಾಡಲು ಮುಂದಾಗುತ್ತಿಲ್ಲ? ತಮ್ಮ ಅಧಿಕಾರ ಚಲಾಯಿಸಲು ಏಕಿಷ್ಟು ಹಿಂಜರಿಯುತ್ತಾರೆ?

ಭಾರತ ಸರ್ಕಾರದ ಮುಕ್ತ ಆರ್ಥಿಕ ನೀತಿ ಇವರ ಕೈಗಳನ್ನು ಕಟ್ಟಿಹಾಕಿದೆ. ಚಿಲ್ಲರೆ ವ್ಯಾಪಾರ, ವಿಮೆ, ಹಣಕಾಸು ವಲಯ, ರಸ್ತೆ ನಿರ್ಮಾಣ ಸೇರಿದಂತೆ ಭಾರತದ ಪ್ರತಿಯೊಂದು ವಲಯದಲ್ಲೂ ವಿದೇಶಿ ನೇರ ಬಂಡವಾಳ ಹೂಡಿಕೆಗೆ(ಎಫ್.ಡಿ.ಐ) ಕೇಂದ್ರ ಸರ್ಕಾರ ಮುಕ್ತ ಅವಕಾಶ ಕೊಟ್ಟಿದೆ. ನವೋದ್ಯಮದಲ್ಲೂ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಮುಕ್ತ ಅವಕಾಶ ಕೊಟ್ಟಿದೆ. ಇದರ ಒಂದು ಭಾಗವೇ ಬೈಕ್ ಟ್ಯಾಕ್ಸಿ ಸೇವೆ. ನಮ್ಮ ರಾಜ್ಯದ ಬಿಜೆಪಿ ಆಡಳಿತವೂ ಈ ನೀತಿಗಳನ್ನು ಮುಕ್ತವಾಗಿ ಒಪ್ಪಿಕೊಂಡಿದೆ. ನಮ್ಮ ನೆಲದ ಕಾನೂನುಗಳಿಗೆ ಬೆಲೆ ಇಲ್ಲದಂತಾಗಿದೆ.

ರಾಜ್ಯ ಸರ್ಕಾರ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಗಳಿಗೆ ಪರವಾನಗಿ ಕೊಡುತ್ತೇವೆ ಎಂದು ಹೇಳಿದೆ. ಆದರೆ, ಇಲ್ಲಿ ಸ್ವಂತಕ್ಕೆ ಬಳಕೆಮಾಡುವ ಮತ್ತು ಪೆಟ್ರೋಲ್ ಇಂಧನ ಬಳಸುವ ಬೈಕ್ ಗಳನ್ನು ಟ್ಯಾಕ್ಸಿ ಸೇವೆಗೆ ಬಳಕೆ ಮಾಡತೊಡಗಿದ್ದಾರೆ. ಬೈಕ್ ಟ್ಯಾಕ್ಸಿಗಳಿಂದ ಒಂದಷ್ಟು ನಿರುದ್ಯೋಗಿ ಯುವಕರಿಗೆ ಉದ್ಯೋಗ ಸಿಕ್ಕಿದೆ ಎಂದೋ, ಕಡಿಮೆ ವೇತನ ಪಡೆಯುತ್ತಿರುವ ಉದ್ಯೋಗಿಗಳು ಬೈಕ್ ಟ್ಯಾಕ್ಸಿ ಸೇವೆ ಮಾಡುವ ಮೂಲಕ ಮತ್ತೊಂದಷ್ಟು ಹಣ ಗಳಿಸುತ್ತಾರೆ ಎಂದೋ, ಕಡಿಮೆ ಪ್ರಯಾಣದರ ಪಡೆಯುವ ಬೈಕ್ ಟ್ಯಾಕ್ಸಿ ಬಳಕೆಯಿಂದ ಪ್ರಯಾಣಿಕರಿಗೆ ಒಂದಷ್ಟು ಲಾಭವಿದೆ ಎಂದೋ ವಾದಿಸುವ ಮುನ್ನ, ಇಂತಹ ಅನಧಿಕೃತ ವ್ಯವಹಾರಕ್ಕೆ ಬೆಂಬಲ ಕೊಡುವುದು ಎಷ್ಟು ಸರಿ ಎಂಬುದನ್ನು ಸಾರ್ವಜನಿಕರು ಚಿಂತಿಸಿದರೆ ಉತ್ತಮ. ಜೊತೆಗೆ ಇಂತಹ ನಿಯಮಬಾಹಿರ ಚಟುವಟಿಕೆಗಳಿಗೆ ಅವಕಾಶ ಕೊಟ್ಟಿರುವ, ನಿರುದ್ಯೋಗ ಹೆಚ್ಚಾಗಲು ಕಾರಣವಾಗಿರುವ ನವ–ಉದಾರವಾದಿ ನೀತಿಗಳ ಅಪಾಯದ ಬಗ್ಗೆಯೂ ಚಿಂತಿಸಬೇಕಿದೆ. ಎಲ್ಲಿ ಅಕ್ರಮ ನಡೆದರೂ ಅದರ ವಿರುದ್ಧ ದ್ವನಿ ಎತ್ತಬೇಕಿದೆ. ಯಾರೇ ಆದರೂ ಅಕ್ರಮಗಳ ವಿರುದ್ದ ದ್ವನಿಯೆತ್ತಿದರೆ ಅವರ ದ್ವನಿಗೆ ಎಲ್ಲರೂ ದ್ವನಿಗೂಡಿಸಬೇಕಿದೆ.



ಜಿನ್ನಾರ ಮುಸ್ಲಿಂಲೀಗಿನ ಪ್ರತ್ಯೇಕತಾವಾದಕ್ಕೆ ಸಮರ್ಥನೆ ದೊರೆತದ್ದು ಸಾವರ್ಕರರಿಂದಲೇ.......

ಪುಟ 2 ರಿಂದ

ಮಾಡಿಕೊಳ್ಳದಿದ್ದಾಗ, ಹಿಂದೂ ಮಹಾಸಭಾ ಜತೆ ಸಂಪರ್ಕ ಬೆಳೆಸಿದ ಕ್ಷಣವೇ ಮುಸ್ಲಿಂ ಲೀಗ್ ವಿವೇಕಯುತ ರಾಜಿ ಸಂಧಾನಕ್ಕೆ ಒಪ್ಪಿತು ಮತ್ತು ಫಜ್ಲುಲ್ ಹಕ್ ಅವರು ಪ್ರಧಾನಿಯಾಗಿ ಮತ್ತು ನಮ್ಮ ಮಹಾಸಭಾದ ಸಮರ್ಥ ಮುಖಂಡ ಡಾ.ಶ್ಯಾಮಪ್ರಸಾದ್ ಮುಖರ್ಜಿಯವರ ನೇತೃತ್ವದಲ್ಲಿ ಒಂದು ವರ್ಷ ಕಾಲ ಎರಡೂ ಸಮುದಾಯದವರ ಅನುಕೂಲಕ್ಕಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದೆ.

ಹಿಂದೂ ಮಹಾಸಭಾವು ಮುಸ್ಲಿಂ ಲೀಗಿನೊಂದಿಗೆ ಸಿಂಧ್ ಪ್ರಾಂತ ಹಾಗೂ ವಾಯುವ್ಯ ಗಡಿ ಪ್ರಾಂತ (ನಾರ್ಥ್‌ವೆಸ್ಟ್ ಫ್ರಾಂಟೈರ್ ಪ್ರಾವಿನ್ಸ್) ಗಳಲ್ಲಿ ಕೂಡ ಮೈತ್ರಿ ಸರ್ಕಾರ ಸೇರಿಕೊಂಡಿತ್ತು.

ಅತ್ಯಂತ ವಿಶ್ವಾಸಾರ್ಹ ಪುಸ್ತಕವೆಂದು ಸಾವರ್ಕರ್ ಅವರ ಅಭಿಮಾನಿಗಳು ಕೊಂಡಾಡುವ ಸಾವರ್ಕರ್ ಅವರ ಜೀವನ ವೃತ್ತಾಂತವನ್ನು ಬರೆದ ಧನಂಜಯ್ ಕೀರ್ ಅವರು ಹೀಗೆ ಒಪ್ಪಿಕೊಳ್ಳುತ್ತಾರೆ:

> ಮುಸ್ಲಿಂ ಬಹುಸಂಖ್ಯಾತರಿರುವ ಪ್ರಾಂತಗಳಲ್ಲಿ ಮುಸ್ಲಿಂ ಲೀಗ್ ರಚಿಸಿದ ಸಚಿವ ಸಂಪುಟಗಳಲ್ಲಿ ಹಿಂದೂ ಮುಖಂಡರು ಸೇರಿಕೊಳ್ಳಬಹುದು, ಆದರೆ ಹಿಂದೂಗಳ ಹಿತಾಸಕ್ತಿಗೆ ವಿರುದ್ಧವಾದ ಯಾವುದಾದರೂ ಯೋಜನೆಗಳಿದ್ದರೆ ಅದಕ್ಕೆ ಒಪ್ಪಿಕೊಳ್ಳದೆ ಮತ್ತು ಹಿಂದೂಸ್ತಾನದ ಸಮಗ್ರತೆಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕು ಎಂದು ಆ ಪ್ರದೇಶದ ಹಿಂದೂ ಮುಖಂಡರುಗಳಿಗೆ ಸಾವರ್ಕರ್ ಸಲಹೆ ನೀಡಿದ್ದರು.

ನಿಜ ಹೇಳಬೇಕೆಂದರೆ, ಪಂಜಾಬಿನಲ್ಲಿ ಕೂಡ ಮೈತ್ರಿ ಸರ್ಕಾರ ರಚಿಸಿ ಎಂದು ಹಿಂದೂ ಮಹಾಸಭಾದ ಮತ್ತೊಬ್ಬ ಪ್ರಮುಖ ಮುಖಂಡ ಬಿ ಎಸ್ ಮೂಂಜೆ ಮತ್ತು ಸಾವರ್ಕರ್ ಅವರು ಮುಸ್ಲಿಂ ಲೀಗಿನವರಲ್ಲಿ ಪ್ರಸ್ತಾಪ ಮಾಡಿದ್ದರು. ಮುಸ್ಲಿಂ ಲೀಗಿನ ನಿರ್ವಾಹಕ ಮೊಹಮ್ಮದ್ ಅಲಿ ಜಿನ್ನಾ ಸಿಯಾಲ್‌ಕೋಟಿನಲ್ಲಿ (ಈಗ ಪಾಕಿಸ್ತಾನದಲ್ಲಿದೆ) ಮುಸ್ಲಿಮರ ಸಭೆಯಲ್ಲಿ ಭಾಷಣ ಮಾಡುವಾಗ ಸಾವರ್ಕರ್ ಅವರ ಈ ಮೇಲಿನ ಮಾತುಗಳನ್ನು ಉಲ್ಲೇಖಿಸಿ ಹೇಳಿದ್ದರು: ಸಾವರ್ಕರ್ ಮತ್ತು ಮೂಂಜೆಯವರು ಪಂಜಾಬಿನ ಹಿಂದೂಗಳಿಗೆ ನಿರ್ದೇಶನ ನೀಡಿದ್ದಾರೆ – ಅನಿವಾರ್ಯವಾದರೆ ಮುಸ್ಲಿಂ ಲೀಗಿನೊಂದಿಗೆ ಮೈತ್ರಿ ಸರ್ಕಾರ ರಚಿಸಲು ಕೈಜೋಡಿಸಿ ಎಂದು.

ಡಬ್ಬಲ್ ಇಂಜೀನ್ ಸರಕಾರದ ಲಾಭ ನಷ್ಟಗಳು



ಎಂ.ಚಂದ್ರ ಪೂಜಾರಿ

ಡಬ್ಬಲ್ ಇಂಜೀನ್ ಸರಕಾರದ ಕಲ್ಪನೆ ಬಿಜೆಪಿ ಕೊಡುಗೆ. ಇದು ರಾಜ್ಯಗಳ ಚುನಾವಣೆ ಸಂದರ್ಭದಲ್ಲಿ ಬಳಕೆ ಆಗುವ ಪರಿಕಲ್ಪನೆ. ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ (ಬಿಜೆಪಿ) ಆಡಳಿತ ಇದ್ದರೆ ರಾಜ್ಯದ ಅಭಿವೃದ್ಧಿಗೆ ಅನುಕೂಲ ಎನ್ನುವ ಅರ್ಥ ನೀಡುತ್ತಿದೆ ಇದು. ಈ ಕುರಿತು ಮಾಧ್ಯಮಗಳಲ್ಲಿ ಚರ್ಚೆ ನಡೆಯುತ್ತಿದೆ. ಈ ಚರ್ಚೆಗಳಲ್ಲಿ ಎರಡು ನಿಲುವುಗಳು ಸ್ಪಷ್ಟವಾಗಿ ಮೂಡಿ ಬರುತ್ತಿವೆ. ಒಂದು, ಬಿಜೆಪಿ ಪಕ್ಷದ ನಿಲುವನ್ನು ಸಮರ್ಥಿಸುವ ನಿಲುವು. ಅದೇನೆಂದರೆ ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಆಡಳಿತ ಇದ್ದರೆ ಕೇಂದ್ರದಿಂದ ಹೆಚ್ಚಿನ ನೆರವು, ಸಂಪನ್ಮೂಲಗಳು ರಾಜ್ಯಕ್ಕೆ ಹರಿದು ಬರಬಹುದೆನ್ನುವ ನಿಲುವು. ಅಂದರೆ ಒಂದೇ ಪಕ್ಷದ ಆಡಳಿತ ಎರಡೂ ಕಡೆ ಇದ್ದರೆ ಅನುಕೂಲ ಎನ್ನುವ ನಿಲುವು. ಎರಡು, ಹಣಕಾಸು ಸಮಿತಿ ಒಂದು ಸಂವಿಧಾನಿಕ ಸೃಷ್ಟಿ. ಇದು ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂಪನ್ಮೂಲ ಹಂಚುವಿಕೆಯನ್ನು ನಿರ್ಣಯಿಸುತ್ತಿದೆ. ಇದು ನಿರ್ದಿಷ್ಟ ಮಾನದಂಡ ಬಳಸಿಕೊಂಡು ಕೇಂದ್ರ ಮತ್ತು ರಾಜ್ಯಗಳ ಪಾಲನ್ನು ಮತ್ತು ಪ್ರತಿ ರಾಜ್ಯದ ಪಾಲನ್ನು ನಿರ್ಣಯಿಸುತ್ತದೆ. ಹಣಕಾಸು ಸಮಿತಿ ಬಳಸುವ ಈ ಮಾನದಂಡಗಳು ರಾಜ್ಯದಲ್ಲಿ ಅಧಿಕಾರದಲ್ಲಿರುವ ರಾಜಕೀಯ ಪಕ್ಷದ ನೆಲೆಯಲ್ಲಿ ಬದಲಾಗುವುದಿಲ್ಲ. ಆದುದರಿಂದ ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷ ಅಧಿಕಾರದಲ್ಲಿ ಇದ್ದ ಕೂಡಲೇ ರಾಜ್ಯಕ್ಕೆ ಹೆಚ್ಚಿನ ಸಂಪನ್ಮೂಲ ಹರಿದು ಬರುವುದಿಲ್ಲ ಎನ್ನುವುದು ಎರಡನೇ ನಿಲುವು. ಇದೇ ಸಂದರ್ಭದಲ್ಲಿ ಗವರ್ನರ್‌ಗಳು ಸೃಷ್ಟಿಸುವ ಅಡ್ಡಿಗಳು, ಪಕ್ಷದ ಸದಸ್ಯರನ್ನು ಖರೀದಿಸಿ ವಿರೋಧಿ ಪಕ್ಷವನ್ನು ರಾಜ್ಯದ ಅಧಿಕಾರದಿಂದ ಇಳಿಸುವುದು, ಸಿಬಿಐ ಈಡಿ ದಾಳಿಯನ್ನು, ಇತ್ಯಾದಿ ಸಂವಿಧಾನೇತರ ಕಿರುಕುಳಗಳನ್ನು ಡಬ್ಬಲ್ ಇಂಜೀನ್ ಸರಕಾರ ತಪ್ಪಿಸಬಹುದೆನ್ನುವ ಅಭಿಪ್ರಾಯವೂ ಇದೆ. ಈ ನಿಲುವುಗಳನ್ನು ಲೇಖನದಲ್ಲಿ ವಿಶ್ಲೇಷಿಸಿದ್ದೇನೆ.

14ನೇ ಹಣಕಾಸು ಸಮಿತಿ

ಆದಾಯ ತೆರಿಗೆ, ಕಾರ್ಪೋರೇಟ್ ತೆರಿಗೆ, ಸೆಂಟ್ರಲ್ ಜಿಎಸ್‌ಟಿ, ಸೆಂಟ್ರಲ್ ಎಕ್ಸೈಸ್, ಕಷ್ಟಮ್ಸ್ ಇತ್ಯಾದಿ ಮೂಲಗಳಿಂದ ಕೇಂದ್ರ ಸಂಪನ್ಮೂಲ ಸಂಗ್ರಹಿಸುತ್ತದೆ. ಇವೆಲ್ಲ ರಾಜ್ಯಗಳಿಂದಲೇ ಬರುವ ಆದಾಯಗಳು. ಆದುದರಿಂದ ಇದರಲ್ಲಿ ಪಾಲು ಪಡೆಯುವುದು ರಾಜ್ಯಗಳ ಹಕ್ಕು. ಇದೇ ರೀತಿ ಇದರಲ್ಲಿ ಪಾಲು ಪಡೆಯಲು ಒಂದೇ ಪಕ್ಷದ ಸರಕಾರಗಳು ರಾಜ್ಯ ಮತ್ತು ಕೇಂದ್ರದಲ್ಲಿರುವ ಅವಶ್ಯಕತೆ ಇಲ್ಲ. ಏಕೆಂದರೆ ಕೇಂದ್ರ ಸಂಗ್ರಹಿಸುವ ತೆರಿಗೆಯಲ್ಲಿ ರಾಜ್ಯ ಮತ್ತು ಕೇಂದ್ರದ ಪಾಲನ್ನು ಹಣಕಾಸು ಸಮಿತಿ ತೀರ್ಮಾನಿಸುತ್ತಿದೆ. ಹಣಕಾಸು ಸಮಿತಿ ಸಂವಿಧಾನದ ಸೃಷ್ಟಿ. 5 ವರ್ಷಕ್ಕೊಮ್ಮೆ ಹಣಕಾಸು ಸಮಿತಿಯನ್ನು ಕೇಂದ್ರ ಸರಕಾರ ನೇಮಿಸುತ್ತದೆ. ಇದು ಕೇಂದ್ರ ಸಂಗ್ರಹಿಸುವ ಸಂಪನ್ಮೂಲದಲ್ಲಿ ರಾಜ್ಯಗಳ ಪಾಲನ್ನು ಮಾತ್ರ ನಿರ್ಣಯಿಸುವುದಲ್ಲ ಪ್ರತಿ ರಾಜ್ಯದ ಪಾಲನ್ನು ನಿರ್ಧರಿಸುತ್ತದೆ. ಹಣಕಾಸು ಸಮಿತಿಯನ್ನು ಕೇಂದ್ರ ಸರಕಾರ ನೇಮಿಸುವುದರಿಂದ ಕೇಂದ್ರ ಸರಕಾರದೊಂದಿಗೆ ಚರ್ಚಿಸಿಯೇ ಮಾನದಂಡಗಳು ತೀರ್ಮಾನವಾಗುವುದು. ಫೆಡರಲ್ ವ್ಯವಸ್ಥೆಗೆ ಮಹತ್ವ ನೀಡುವ ಕೇಂದ್ರ ಸರಕಾರ ರಾಜ್ಯಗಳೊಂದಿಗೆ ಚರ್ಚಿಸಿ ಮಾನದಂಡಗಳನ್ನು ರೂಪಿಸುತ್ತದೆ. ಕೇಂದ್ರವೇ ಮುಖ್ಯ ರಾಜ್ಯಗಳು ಕೇಂದ್ರ ಹೇಳಿದಂತೆ ಕಾರ್ಯನಿರ್ವಹಿಸಲು ಇರುವ ವ್ಯವಸ್ಥೆಯೆಂದು ತಿಳಿಯವ ಕೇಂದ್ರ ರಾಜ್ಯಗಳ ಅಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ.

2015ರವರಗೆ ಕೇಂದ್ರ ಸಂಗ್ರಹಿಸುವ ಸಂಪನ್ಮೂಲದಲ್ಲಿ ಶೇ.32ನ್ನು ರಾಜ್ಯಗಳಿಗೆ ಹಂಚಲಾಗುತ್ತಿತ್ತು. 14ನೇ ಹಣಕಾಸು ಸಮಿತಿ (2015–20) ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಪಾಲನ್ನು ಶೇ.32ರಿಂದ ಶೇ.42ಕ್ಕೆ ಏರಿಸಿತು. ಆದರೆ ಶೇ.10 ಏರಿಕೆಯನ್ನು ಕೇಂದ್ರದ ಬಿಜೆಪಿ ಸರಕಾರ ಇಷ್ಟಪಡಲಿಲ್ಲ. ಹಾಗೆಂದು ಹಣಕಾಸು ಸಮಿತಿ ತೀರ್ಮಾನವನ್ನು ಬದಲಾಯಿಸುವಂತಿಲ್ಲ. ಆದುದರಿಂದ ಶೇ.42ನ್ನು ಶೇ.32ರಲ್ಲೇ ಇರಿಸಿಕೊಳ್ಳಲು ಕೇಂದ್ರ ಸರಕಾರ ಬೇರೆ ದಾರಿ ಹುಡುಕಿತು. ಕೇಂದ್ರ ಸಂಗ್ರಹಿಸುವ ತೆರಿಗೆಯಲ್ಲಿ ಎರಡು ಪಾಲಿದೆ. ಒಂದು ಮೂಲ ತೆರಿಗೆ ಮತ್ತೊಂದು ಸೆಸ್ ಮತ್ತು ಸರ್‌ಚಾರ್ಜ್. ಮೂಲ ತೆರಿಗೆಯನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳಬೇಕು. ಆದರೆ ಸೆಸ್ ಮತ್ತು ಸರ್‌ಚಾರ್ಜ್ ಗಳನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಅಗತ್ಯವಿಲ್ಲ. ರಾಜ್ಯಗಳೊಂದಿಗೆ ಹಂಚಿಕೊಳ್ಳದಿರುವ ಸೆಸ್ ಮತ್ತು ಸರ್‌ಚಾರ್ಜನ್ನು ಕೇಂದ್ರ ಏರಿಸುತ್ತಾ ಹೋಯಿತು. 2017ರಲ್ಲಿ ಶೇ.13.5ರಷ್ಟಿದ್ದ ಸೆಸ್ 2020ರಲ್ಲಿ ಶೇ.20.2ಕ್ಕೆ ಏರಿತು.


ಸೆಸ್ ಸಂಗ್ರಹ ಹೆಚ್ಚಾದುದರಿಂದ ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಪಾಲು ಶೇ.32ರಿಂದ ಶೇ.42ಕ್ಕೆ ಏರಿದರೂ ರಾಜ್ಯಗಳಿಗೆ ವರ್ಗಾವಣೆ ಆಗುವ ಮೊತ್ತ ಬದಲಾಗಲಿಲ್ಲ. ಏಕೆಂದರೆ ಹಂಚಿಕೊಳ್ಳುವ ಪಾಲು ಶೇ.100 ಇದ್ದದ್ದು ಶೇ. 80ಕ್ಕೆ ಇಳಿಯಿತು. ಅಷ್ಟು ಮಾತ್ರವಲ್ಲ 2019ರಲ್ಲಿ ಆರ್ಟಿಕಲ್ 370 ರದ್ದುಗೊಂಡು ಮೂರು ಕೇಂದ್ರಾಡಳಿತ ಪ್ರದೇಶಗಳು ಸೃಷ್ಟಿಯಾದವು. ಅವುಗಳ ಅಭಿವೃದ್ಧಿಗಾಗಿ ಶೇ.42ನ್ನು ಶೇ.41ಕ್ಕೆ ಕೇಂದ್ರ ಇಳಿಸಿದೆ. ಅಂದರೆ ರಾಜ್ಯಗಳಿಗೆ ವರ್ಗಾವಣೆ ಆಗುವ ಮೊತ್ತ ಶೇ.32.8ಕ್ಕೆ ಇಳಿಯಿತು. ಇವೆಲ್ಲ ರಾಜ್ಯಗಳಿಗೆ ಅನುಕೂಲ ಮಾಡುವ 14ನೇ ಹಣಕಾಸಿನ ಶಿಫಾರಸ್ಸನ್ನು ನಿರುಪಯುಕ್ತಗೊಳಿಸಲು ಬಿಜೆಪಿ ಬಳಸಿದ ತಂತ್ರಗಳು.



15ನೇ ಹಣಕಾಸು ಸಮಿತಿ

15ನೇ ಹಣಕಾಸು ಸಮಿತಿಯನ್ನು 2017ರಲ್ಲಿ ಬಿಜೆಪಿ ಸರಕಾರ ನೇಮಿಸಿದೆ. ಸಂಪನ್ಮೂಲವನ್ನು ರಾಜ್ಯಗಳ ನಡುವೆ ಹಂಚಲು ಬಳಸುವ ಮಾನದಂಡಲ್ಲಿ ಹಣಕಾಸು ಸಮಿತಿ ವಿಶೇಷ ಬದಲಾವಣೆ ಮಾಡಿಲ್ಲ. ರಾಜ್ಯದ ಜನಸಂಖ್ಯೆ, ವಿಸ್ತೀರ್ಣ, ಅರಣ್ಯ ಪ್ರದೇಶ, ಆದಾಯ ಅಂತರ, ತೆರಿಗೆ ಸಂಗ್ರಹ ಪ್ರಯತ್ನ ಮತ್ತು ಜನಸಂಖ್ಯೆ ನಿಯಂತ್ರಣ ಸಾಧನೆ ಇವೆಲ್ಲ ಹಿಂದಿನ ಹಣಕಾಸು ಸಮಿತಿಗಳು ಬಳಸಿದ ಮಾನದಂಡಗಳೇ. ಆದರೆ ಈ ಮಾನದಂಡಗಳನ್ನು ಪ್ರಯೋಗಿಸುವಾಗ ಹಿಂದಿನ ಸಮಿತಿಗಳು 1971ರ ಜನಸಂಖ್ಯೆಯನ್ನು ಬಳಸಿದರೆ 15ನೇ ಹಣಕಾಸು ಸಮಿತಿ ಕೇಂದ್ರದ ಸಲಹೆಯ ಮೇರೆಗೆ 2011ರ ಜನಸಂಖ್ಯೆಯನ್ನು ಬಳಸಿದೆ. ಕೇಂದ್ರ ಹಣಕಾಸು ಸಮಿತಿಯ ಈ ನಿರ್ಧಾರವನ್ನು ದಕ್ಷಿಣದ ರಾಜ್ಯಗಳು ಬಲವಾಗಿ ವಿರೋಧಿಸಿವೆ. ಏಕೆಂದರೆ 1971ರ ನಂತರ ಕೇಂದ್ರದ ಆದೇಶದನ್ವಯ ದಕ್ಷಿಣದ ರಾಜ್ಯಗಳು ಜನಸಂಖ್ಯೆ ಬೆಳವಣಿಗೆಯನ್ನು ನಿಯಂತ್ರಿಸಿದ್ದವು. ಆದುದರಿಂದ 1971ರಲ್ಲಿ ದಕ್ಷಿಣದ ಮೂರು ರಾಜ್ಯಗಳಲ್ಲಿ (ಕರ್ನಾಟಕ, ಕೇರಳ, ತಮಿಳುನಾಡು) ಶೇ.17ರಷ್ಟಿದ್ದ ಜನಸಂಖ್ಯೆ 2011ರ ವೇಳೆಗೆ ಶೇ.14ಕ್ಕೆ ಕುಸಿದ್ದಿತ್ತು. ಆದರೆ ಉತ್ತರದ ರಾಜ್ಯಗಳು ಅದರಲ್ಲೂ ಉತ್ತರಪ್ರದೇಶ. ಬಿಹಾರ್, ಮಧ್ಯಪ್ರದೇಶದಂತಹ ದೊಡ್ಡ ರಾಜ್ಯಗಳು ಜನಸಂಖ್ಯೆ ಬೆಳವಣಿಗೆಯನ್ನು ನಿಯಂತ್ರಿಸದಿದ್ದುದರಿಂದ 1971ರಲ್ಲಿ ಶೇ.28ರಷ್ಟಿದ್ದ ಜನಸಂಖ್ಯೆ 2011ರಲ್ಲಿ ಶೇ.31ಕ್ಕೆ ಏರಿದೆ.

ಅಷ್ಟು ಮಾತ್ರವಲ್ಲ ರಾಜ್ಯದ ಆದಾಯ ಅಂತರವನ್ನು ಮಾಪನ ಮಾಡಲು ರಾಜ್ಯದ ತಲಾ ಆದಾಯವನ್ನು ಬಳಸಲಾಗಿದೆ. ಆದಾಯವನ್ನು ರಾಜ್ಯದ ಜನಸಂಖ್ಯೆಯಿಂದ ಭಾಗಿಸಿ ತಲಾ ಆದಾಯ ನಿರ್ಧರಿಸುವುದು. ಅಂದರೆ ಇಲ್ಲೂ ಉತ್ತರದ ರಾಜ್ಯಗಳಲ್ಲಿ ಜನಸಂಖ್ಯೆ ಹೆಚ್ಚಿರುವುದರಿಂದ ಅವರ ರಾಜ್ಯದ ಆದಾಯ ಹೆಚ್ಚಿದ್ದರೂ ತಲಾ ಆದಾಯ ಕಡಿಮೆ ಆಯಿತು. ಉದಾಹರಣೆಗೆ 2022ರಲ್ಲಿ ಉತ್ತರ ಪ್ರದೇಶದ ಜಿಡಿಪಿ (ರೂ. 21.64 ಲಕ್ಷ ಕೋಟಿ) ಕರ್ನಾಟಕದ ಜಿಡಿಪಿಗಿಂತ (ರೂ.18.85 ಲಕ್ಷ ಕೋಟಿ) ಹೆಚ್ಚಿತ್ತು. ಆದರೆ ಜನಸಂಖ್ಯೆ ಕಾರಣದಿಂದ ಕರ್ನಾಟಕದ ತಲಾ ಜಿಡಿಪಿ (ರೂ.249957) ಉತ್ತರಪ್ರದೇಶದ ತಲಾ ಜಿಡಿಪಿಗಿಂತ (ರೂ.81500) ಮೂರು ಪಟ್ಟು ಹೆಚ್ಚಾಯಿತು. ಇದೇ ರೀತಿ ಉತ್ತರದ 3 ರಾಜ್ಯಗಳ ಒಟ್ಟು ವಿಸ್ತೀರ್ಣ ದೇಶದ ವಿಸ್ತೀರ್ಣದ ಶೇ.20 ಇದ್ದರೆ ದಕ್ಷಿಣದ 3 ರಾಜ್ಯಗಳ ವಿಸ್ತೀರ್ಣ ದೇಶದ ವಿಸ್ತೀರ್ಣದ ಶೇ.11 ಇದೆ. ಹೀಗೆ ಹಣಕಾಸು ಸಮಿತಿ ರಾಜ್ಯಗಳ ನಡುವೆ ಸಂಪನ್ಮೂಲ ಹಂಚಲು ಬಳಸುವ ಬಹುತೇಕ ಮಾನದಂಡಗಳು ಜನಸಂಖ್ಯೆ, ವಿಸ್ತೀರ್ಣ ಹೆಚ್ಚಿರುವ ಮತ್ತು ಆರ್ಥಿಕವಾಗಿ ಹಿಂದುಳಿದ ರಾಜ್ಯಗಳ ಪರ ಇವೆ. ಇದೇ ಕಾರಣದಿಂದ ಕೇಂದ್ರದ ಸಂಪನ್ಮೂಲದಲ್ಲಿ ಉತ್ತರದ ಮೂರು ರಾಜ್ಯಗಳು ಶೇ.35ರಷ್ಟು ಪಾಲು ಪಡೆದರೆ ದಕ್ಷಿಣದ ಮೂರು ರಾಜ್ಯಗಳು ಕೇವಲ ಶೇ.9.6ರಷ್ಟು ಪಾಲು ಪಡೆದಿವೆ.



ಇದರಿಂದಾಗಿ 2023–24ನೇ ಕೇಂದ್ರದ ಬಜೆಟಲ್ಲಿ ಉತ್ತರದ ಮೂರು ರಾಜ್ಯಗಳು ಕೇಂದ್ರದಿಂದ ರೂ. 231207 ಕೋಟಿಯಷ್ಟು ನೇರ ತೆರಿಗೆಯ ಪಾಲು ಪಡೆದರೆ ದಕ್ಷಿಣದ ಮೂರು ರಾಜ್ಯಗಳು ಕೇವಲ ರೂ. 62245 ಪಡೆದಿವೆ. ಆದರೆ ಇದೇ ಪ್ರಮಾಣದಲ್ಲಿ ಉತ್ತರದ ರಾಜ್ಯಗಳು ಕೇಂದ್ರದ ಬೊಕ್ಕಸಕ್ಕೆ ತೆರಿಗೆ ತುಂಬುವುದಿಲ್ಲ. 2021–22ರಲ್ಲಿ ದಕ್ಷಿಣದ ಮೂರು ರಾಜ್ಯಗಳು ಶೇ. 20ರಷ್ಟು ನೇರ ತೆರಿಗೆ ತುಂಬಿದರೆ ಉತ್ತರದ ಮೂರು ರಾಜ್ಯಗಳು ಕೇವಲ ಶೇ.4ರಷ್ಟು ನೇರ ತೆರಿಗೆ ತುಂಬಿವೆ. 2021–22ರಲ್ಲಿ ಕರ್ನಾಟಕವೊಂದೇ 2.72 ಲಕ್ಷ ಕೋಟಿಯಷ್ಟು ತೆರಿಗೆ ತುಂಬಿದೆ. ಆದರೆ ಕರ್ನಾಟಕ ಕೇಂದ್ರದಿಂದ ಪಡೆದ ತೆರಿಗೆ ಪಾಲು ಕೇವಲ ರೂ.50257 ಕೋಟಿ. ಇದೇ ಅವಧಿಯಲ್ಲಿ ಉತ್ತರಪ್ರದೇಶ ಕೇವಲ ರೂ.34720 ಕೋಟಿ ತೆರಿಗೆ ತುಂಬಿ ಕೇಂದ್ರದಿಂದ ರೂ.115705 ಕೋಟಿ ಹಿಂದಕ್ಕೆ ಪಡೆದಿದೆ. ಅಂದರೆ ರಾಜ್ಯದಿಂದ ಕೇಂದ್ರಕ್ಕೆ ಹೋಗುವ ಪ್ರತಿ 1 ರೂಪಾಯಿ ತೆರಿಗೆಗೆ ಉತ್ತರ ಪ್ರದೇಶ ರೂ.1.79 ಹಿಂದಕ್ಕೆ ಪಡೆದರೆ ಕರ್ನಾಟಕ ಕೇವಲ 47 ಪೈಸೆ ಹಿಂದಕ್ಕೆ ಪಡೆಯುತ್ತಿದೆ. ಹೀಗೆ ಉತ್ತರದ ಹಿಂದುಳಿದ ರಾಜ್ಯಗಳ ಬಜೆಟ್ ಕೊರತೆಯನ್ನು ತುಂಬಲು ತಮ್ಮ ರಾಜ್ಯಗಳ ತೆರಿಗೆ ಬಳಕೆಯಾಗುವುದರಿಂದ ತಮ್ಮ ಬಜೆಟ್ ಕೊರತೆಯನ್ನು ಸಾಲ ಮಾಡಿ ತುಂಬಿಸಿಕೊಳ್ಳುವ ಸ್ಥಿತಿ ದಕ್ಷಿಣದ ರಾಜ್ಯಗಳಿಗೆ ಬಂದಿದೆ. ಕರ್ನಾಟಕದ್ದೇ ಉದಾಹರಣೆ ನೋಡುವುದಾದರೆ 2018ರಲ್ಲಿ ರೂ.2.18 ಲಕ್ಷ ಕೋಟಿ ಇದ್ದ ಸಾಲ 2023ರ ವೇಳೆಗೆ ರೂ.5.4 ಲಕ್ಷ ಕೋಟಿಗೆ ಏರಿದೆ. ಈ ಸ್ಥಿತಿ ದಕ್ಷಿಣದ ರಾಜ್ಯಗಳಲ್ಲಿ ಸಾಕಷ್ಟು ಅಸಮಾಧಾನ ಸೃಷ್ಟಿಸಿದೆ.

ಕಾರಣ ಮತ್ತು ಪರಿಹಾರಗಳು

ಇಂತಹ ಸ್ಥಿತಿ ನಿರ್ಮಾಣಕ್ಕೆ ಎರಡು ಮೂರು ಕಾರಣಗಳಿವೆ. ಒಂದು, 1/3ರಷ್ಟು ಅಭಿವೃದ್ಧಿ ಜವಾಬ್ದಾರಿ ಇರುವ ಕೇಂದ್ರಕ್ಕೆ 2/3ರಷ್ಟು ತೆರಿಗೆ ಸಂಗ್ರಹ ಮಾಡುವ ಅಧಿಕಾರ ಮತ್ತು 2/3ರಷ್ಟು ಅಭಿವೃದ್ಧಿ ಜವಾಬ್ದಾರಿ ಇರುವ ರಾಜ್ಯಗಳಿಗೆ 1/3ರಷ್ಟು ತೆರಿಗೆ ಸಂಗ್ರಹ ಮಾಡುವ ಅಧಿಕಾರ ನಮ್ಮ ಫೆಡರಲ್ ಸ್ಟ್ರಕ್ಚರಲ್ಲೇ ಇರುವ ದೋಷ. ಶಿಕ್ಷಣ, ಆರೋಗ್ಯ, ವಸತಿ, ಕುಡಿಯುವ ನೀರು, ಕೃಷಿ, ಪೊಲೀಸ್, ನ್ಯಾಯ ಇತ್ಯಾದಿ ಜನರ ಬದುಕಿಗೆ ನೇರವಾಗಿ ಸಂಬಂಧಿಸುವ ಸವಲತ್ತುಗಳನ್ನು ರಾಜ್ಯಗಳು ನೀಡುವುದು. ಆದರೆ ಅವರ ಸ್ವಾಧೀನ ಸಂಪನ್ಮೂಲ ಸಂಗ್ರಹಿಸುವ ಅಧಿಕಾರ ತುಂಬಾ ಕಡಿಮೆ ಇದೆ. ಅಷ್ಟು ಮಾತ್ರವಲ್ಲ 2016ರಲ್ಲಿ ಜಿಎಸ್‌ಟಿ ಕೌನ್ಸಿಲ್ ರೂಪಿತಗೊಂಡ ನಂತರ ಶೇ.80ರಷ್ಟು ಪರೋಕ್ಷ ತೆರಿಗೆ ಸಂಗ್ರಹ ಮಾಡುವ ಅಧಿಕಾರ ಕೂಡ ಕೇಂದ್ರೀಕರಣಗೊಂಡಿದೆ. ಈ ದೋಷವನ್ನು ಮೊದಲು ಸರಿಪಡಿಸಿಕೊಳ್ಳಬೇಕಾಗಿದೆ. ಎರಡು, ರಾಜ್ಯ ಸರಕಾರಗಳು ಕೈಗೊಳ್ಳುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೇಂದ್ರ ಕೂಡ ಕೈಗೊಂಡು ಸಂಪನ್ಮೂಲ ಪೋಲು ಮಾಡುತ್ತಿದೆ. ಶಿಕ್ಷಣ, ಆರೋಗ್ಯ, ಕೃಷಿ ಮೂಲಸೌಕರ್ಯಗಳು ಇವೆಲ್ಲ ರಾಜ್ಯಗಳು ನೀಡುವ ಸವಲತ್ತುಗಳು. ಇವೇ ಕ್ಷೇತ್ರದಲ್ಲಿ ಕೇಂದ್ರ ಎರಡು ರೀತಿಯ ಯೋಜನೆಗಳನ್ನು ಜಾರಿಗೆ ತರುತ್ತಿದೆ. ಒಂದು, ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳು ➚



ಹೆಸರಿಸಲಾಗದ ಆ ಒಬ್ಬ ...



ಸದನದ ಕಲಾಪಕ್ಕೆ ಅಡ್ಡಿಪಡಿಸಲು ಮತ್ತು ಅದಾನಿ–ಹಿಂಡನ್‌ಬರ್ಗ್ ವಿವಾದದ ಬಗ್ಗೆ ಚರ್ಚೆಯನ್ನು ತಡೆಹಿಡಿಯುವುದಕ್ಕೆ ಒಂದು ನೆಪವಷ್ಟೇ ಎನ್ನುವುದು ಸುಸ್ಪಷ್ಟವಾಗಿದೆ. ಫೆಬ್ರವರಿ ಮೊದಲ ವಾರದಲ್ಲಿ, ಬಜೆಟ್ ಅಧಿವೇಶನದ ಮೊದಲ ಗಂಟೆಯ ಅವಧಿಯಲ್ಲಿ, ಅದಾನಿ ಗ್ರೂಪ್ ಬಗೆಗಿನ ಹಿಂಡನ್‌ಬರ್ಗ್ ಎಕ್ಸ್‌ಪೋಶರ್ ಕುರಿತು ಚರ್ಚೆ ನಡೆಸುವಂತೆ ಹಾಗೂ ಅದರ ತನಿಖೆಗೆ ಜಂಟಿ ಸದನ ಸಮಿತಿಯನ್ನು ರಚಿಸುವಂತೆ ಪ್ರತಿಪಕ್ಷಗಳು ಸತತವಾಗಿ ಆಗ್ರಹಿಸಿದ್ದವು.

— ಪ್ರಕಾಶ್ ಕಾರತ್ —

ಸಂಸದೀಯ ಕಲಾಪಗಳು ಏಳು ದಿನ ಅಸ್ತವ್ಯಸ್ತಗೊಂಡ ನಂತರ ಸರ್ಕಾರ ಇದೀಗ ಅನುದಾನ ಬೇಡಿಕೆಗಳಿಗೆ ಗಿಲೆಟನಿಂಗ್ ಪ್ರಯೋಗಿಸಿ ಹಾಗೂ ಹಣಕಾಸು ಮಸೂದೆಯನ್ನು ಯಾವುದೇ ಚರ್ಚೆಯಿಲ್ಲದೆ ಅಂಗೀಕರಿಸುವ ಮೂಲಕ ಬಜೆಟ್ ಅಧಿವೇಶನದ ಎರಡನೇ ಭಾಗವನ್ನು ಮೊಟಕುಗೊಳಿಸಲು ಹೊರಟಿದೆ.

ರಾಹುಲ್ ಗಾಂಧಿ ವಿದೇಶ ಪ್ರವಾಸದಲ್ಲಿದ್ದಾಗ ಭಾರತದಲ್ಲಿನ ಪ್ರಜಾಪ್ರಭುತ್ವದ ಪರಿಸ್ಥಿತಿ ಬಗ್ಗೆ ಮಾಡಿದ ಕೆಲವು ಟಿಪ್ಪಣಿಗಳ ಬಗ್ಗೆ ಕ್ಷಮೆ ಕೋರಬೇಕೆಂದು ಒತ್ತಾಯಿಸಿ ಆಳುವ ಪಕ್ಷದವರು ಮಾರ್ಚ್ 13ರಿಂದಲೇ ಸಂಸತ್ತಿನ ಉಭಯ ಸದನಗಳಲ್ಲಿ ಕಲಾಪಗಳನ್ನು ತಡೆಹಿಡಿದಿರುವುದರಿಂದ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎನ್ನುವುದು ಈ ವಿದ್ಯಮಾನದ ವೈಶಿಷ್ಟ್ಯವಾಗಿದೆ.

ಇದು ಸದನದ ಕಲಾಪಕ್ಕೆ ಅಡ್ಡಿಪಡಿಸಲು ಮತ್ತು ಅದಾನಿ–ಹಿಂಡನ್‌ಬರ್ಗ್ ವಿವಾದದ ಬಗ್ಗೆ ಚರ್ಚೆಯನ್ನು ತಡೆಹಿಡಿಯುವುದಕ್ಕೆ ಒಂದು ನೆಪವಷ್ಟೇ ಎನ್ನುವುದು ಸುಸ್ಪಷ್ಟವಾಗಿದೆ. ಫೆಬ್ರವರಿ ಮೊದಲ ವಾರದಲ್ಲಿ, ಬಜೆಟ್ ಅಧಿವೇಶನದ ಮೊದಲ ಗಂಟೆಯ ಅವಧಿಯಲ್ಲಿ, ಅದಾನಿ ಗ್ರೂಪ್ ಬಗೆಗಿನ ಹಿಂಡನ್‌ಬರ್ಗ್ ಎಕ್ಸ್‌ಪೋಶರ್ ಕುರಿತು ಚರ್ಚೆ ನಡೆಸುವಂತೆ ಹಾಗೂ ಅದರ ತನಿಖೆಗೆ ಜಂಟಿ ಸದನ ಸಮಿತಿಯನ್ನು ರಚಿಸುವಂತೆ ಪ್ರತಿಪಕ್ಷಗಳು ಸತತವಾಗಿ ಆಗ್ರಹಿಸಿದ್ದವು. ಆವಾಗಿನಿಂದಲೂ ಹಲವು ಶೆಲ್ ಕಂಪನಿಗಳಲ್ಲಿ ಹಾಗೂ ಅಂಬುಜಾ ಸಿಮೆಂಟ್–ಎಸಿಸಿ ಕಂಪನಿಗಳಲ್ಲಿ ಗೌತಮ್ ಅದಾನಿಯ ಸೋದರ ವಿನೋದ್ ಅದಾನಿಯ ಪಾತ್ರದ ಬಗ್ಗೆ ಹೆಚ್ಚೆಚ್ಚು ವಿಚಾರಗಳು ಬೆಳಕಿಗೆ ಬರತೊಡಗಿದವು. ಎಲಾರಾ ಎಂಬ ಒಂದು ವಿದೇಶಿ ಕಂಪನಿಯ ಬಗ್ಗೆ ಸ್ಫೋಟಕ ವಿಚಾರ ಬಹಿರಂಗವಾಗಿದ್ದು ಕೂಡ ಆಗಲೇ. ಈ ಕಂಪನಿ ಅದಾನಿ ಸಮೂಹದಲ್ಲಿ ಒಂದು ಪ್ರಮುಖ ಹೂಡಿಕೆದಾರ ಕಂಪನಿಯಾಗಿದ್ದು, ರಕ್ಷಣೆಗೆ ಸಂಬಂಧಿಸಿದ ಒಂದು ಕಂಪನಿಯಲ್ಲಿ ಅದಾನಿ ಜೊತೆ ಸಹ–ಮಾಲಿಕ ಕೂಡ ಆಗಿರುವ ವಿಚಾರ ತಿಳಿದು ಬಂದಿದೆ. ಈ ಎಲ್ಲ ವಿಚಾರಗಳಲ್ಲಿ ಹೆಚ್ಚಿನ ವಿವರಣೆ ಬೇಕಾಗಿದೆ ಹಾಗೂ ಸಂಸತ್ತಿನಲ್ಲಿ ಚರ್ಚೆ ನಡೆಯಬೇಕಾಗಿದೆ.

ಹಾಗೆ ಮಾಡುವ ಬದಲು, ಸಂಸತ್ ಅಧಿವೇಶನದ ಮೊದಲ ದಿನವೇ ರಾಹುಲ್ ಗಾಂಧಿ ವಿರುದ್ಧ ದಾಳಿಮಾಡಿ ಅವರ ಕ್ಷಮೆ ಕೋರುವಂತೆ ಆಗ್ರಹಿಸುವಲ್ಲಿ ರಕ್ಷಣಾ ಸಚಿವ ರಾಜನಾಥ ಸಿಂಗ್ ನೇತೃತ್ವ ವಹಿಸಿದ್ದರು. ಎಲಾರಾದಂಥ ಒಂದು ಕಂಪನಿಯು ಭಾರತದಲ್ಲಿನ ರಕ್ಷಣಾ ಸಂಸ್ಥೆಯೊಂದರಲ್ಲಿ ಅದಾನಿಯ ಪಾಲುದಾರ ಹೇಗಾಯಿತು ಎಂಬ ಮಹತ್ವದ ಪ್ರಶ್ನೆಗೆ ಉತ್ತರ ನೀಡುವುದನ್ನು ತಪ್ಪಿಸಿಕೊಳ್ಳುವ ತಂತ್ರಗಾರಿಕೆ ಇದಾಗಿರಬಹುದೇ? ರಾಹುಲ್ ಗಾಂಧಿ ವಿಚಾರಕ್ಕೆ ಬರುವುದಾದರೆ, ಪ್ರಜಾಪ್ರಭುತ್ವ ಅಪಾಯದಲ್ಲಿದೆ ಮತ್ತು ಮೋದಿ ಸರಕಾರವು ಅದರ ಕತ್ತು ಹಿಸುಕುತ್ತಿದೆ ಎಂಬ ಅವರ ಟೀಕೆಯನ್ನು ಹೆಚ್ಚು ಕಡಿಮೆ ಎಲ್ಲಾ ಪ್ರತಿಪಕ್ಷ ನಾಯಕರು ಪ್ರತಿಧ್ವನಿಸುತ್ತಿದ್ದಾರೆ. ವಿದೇಶಿ ನೆಲದಲ್ಲಿ ಅಂಥ ಟೀಕೆಯನ್ನು ಮಾಡಿದ್ದಕ್ಕಾಗಿ ಅವರು ದೇಶಪ್ರೇಮಿಯಲ್ಲ ಎಂಬ ಆರೋಪ ಅಪ್ಪಟ ಬೋಗಸ್ ಆಗಿದೆ. ಯಾಕೆಂದರೆ ಯಾರಾದರೂ ಒಂದು ಸರಕಾರದ ಮೇಲೆ ದಾಳಿಮಾಡುವುದು ತಮ್ಮ ದೇಶದ ಮೇಲೆ ದಾಳಿ ಮಾಡುವುದಕ್ಕೆ ಸಮನಾಗುವುದಿಲ್ಲ. ಕೇಂಬ್ರಿಜ್ ಭಾಷಣದಲ್ಲಿ ಮುಗ್ಧವಾಗಿ ಅಮೆರಿಕನ್ ಪ್ರಜಾಪ್ರಭುತ್ವವನ್ನು ಮೆಚ್ಚಿಕೊಂಡಿದ್ದನ್ನು ಸಹಿತ ಬ್ರಿಟನ್‌ನಲ್ಲಿ ರಾಹುಲ್ ಗಾಂಧಿ ಹೇಳಿದ್ದೆಲ್ಲವನ್ನೂ ಎಲ್ಲರೂ ಒಪ್ಪಬೇಕೆಂದೇನಿಲ್ಲ. ಆದರೆ ಸರಕಾರದ ಸರ್ವಾಧಿಕಾರವನ್ನು ಟೀಕಿಸುವ ಹಕ್ಕು ಯಾರಿಂದಲೂ ಕಿತ್ತುಕೊಳ್ಳಲಾಗದ ಹಕ್ಕಾಗಿದೆ. ಅಂಥ ಟೀಕೆಯನ್ನು ದೇಶದಲ್ಲೇ ಮಾಡಲಿ ವಿದೇಶದಲ್ಲೇ ಮಾಡಲಿ ಅದರಲ್ಲಿ ಯಾವುದೇ ವ್ಯತ್ಯಾಸವಾಗದು.

ಅದಾನಿ ವಿಚಾರದಲ್ಲಿ ಬಿಜೆಪಿ ಧೋರಣೆ ನಿಜಕ್ಕೂ ಬೆರಗುಗೊಳಿಸುವಂಥದ್ದು. ಫೆಬ್ರವರಿಯಲ್ಲಿ ಸಂಸತ್ತಿನಲ್ಲಿ ರಾಷ್ಟ್ರಪತಿ ಭಾಷಣದ ಮೇಲಿನ ಚರ್ಚೆಯ ವೇಳೆ ಪ್ರಶ್ನೆಗಳ ಮಹಾಪೂರ ಎದುರಾದಾಗ ಪ್ರಧಾನಿ ಮೋದಿಯೇ ಇದಕ್ಕೆ ಶ್ರೀಕಾರ ಹಾಕಿದ್ದರು. ಸಂಸತ್ತಿನ ಉಭಯ ಸದನಗಳಲ್ಲಿ ಚರ್ಚೆಗೆ ಉತ್ತರ ನೀಡಿದ ಮೋದಿ ಒಂದೇ ಒಂದು ಬಾರಿಯಾದರೂ ಅದಾನಿ ಹೆಸರನ್ನು ಉಚ್ಚರಿಸಲಿಲ್ಲ. ಇದು ಹ್ಯಾರಿ ಪಾಟರ್ ಕಾದಂಬರಿಯ ಒಂದು ಪಾತ್ರ ದುಷ್ಟ ಲಾರ್ಡ್ ವೋಲ್ಡ್‌ಮಾರ್ಟ್‌ನನ್ನು ನೆನಪಿಸುತ್ತದೆ. ಆತ ಎಷ್ಟು ಅಪಾಯಕಾರಿ ಹಾಗೂ ಬಲಶಾಲಿಯೆಂದರೆ ಅವನ ಹೆಸರನ್ನು ಯಾರೂ ಉಚ್ಚರಿಸುವಂತಿರಲಿಲ್ಲ. ಬಹಳಷ್ಟು ಜನರು ಆತನನ್ನು 'ಹೆಸರಿಸಲಾರದ ಆತ' ಎಂದೇ ಸಂಬೋಧಿಸಲು ಬಯಸುತ್ತಿದ್ದರು. ಮೋದಿ ಮತ್ತು ಅದಾನಿಯ ನಡುವಿನ ಮೈತ್ರಿಯನ್ನು ಬಯಲಿಗೆಳೆಯುವುದು ಒತ್ತಟ್ಟಿಗಿರಲಿ, ನರೇಂದ್ರ ಮೋದಿ ಮತ್ತು ಬಿಜೆಪಿಗೆ ಗೌತಮ್ ಅದಾನಿಯು ಹೆಸರಿಸಬಾರದ ಒಬ್ಬ ವ್ಯಕ್ತಿಯಾಗಿದ್ದಾನೆ.

ಸಂಸತ್ತಿನಲ್ಲಿ ಈಗ ಬಳಸಲಾಗುತ್ತಿರುವ ತಂತ್ರವನ್ನು ಗಮನಿಸಿದರೆ ಮೋದಿ ಸರಕಾರ ಮತ್ತು ಬಿಜೆಪಿಯು ಅದಾನಿ ಸಮೂಹವನ್ನು ಸಂಸದೀಯ ಪರಿಶೀಲನೆಗೆ ಒಳಪಡಿಸುವುದನ್ನು ತಡೆಯಲು ಯಾವ ಮಟ್ಟಕ್ಕಾದರೂ ಹೋಗಲು ಸಿದ್ಧ ಎನ್ನುವುದನ್ನು ತೋರಿಸುತ್ತದೆ. ಈ ಎಲ್ಲಾ ವರ್ಷಗಳಲ್ಲಿ ನಿಯಂತ್ರಣ ಸಂಸ್ಥೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಮೋದಿ ಸರಕಾರ ಈಗ ಅದಾನಿ ಸಾಮ್ರಾಜ್ಯ ಮತ್ತು ಅದು ಬೆಳೆದು ಬಂದ ಬಗೆಯ ಕುರಿತು ಪ್ರಶ್ನೆಗಳನ್ನು ಎತ್ತುವುದನ್ನು ಮಟ್ಟ ಹಾಕಲು ಸಂಸತ್ತಿನ ಕತ್ತನ್ನೂ ಹಿಸುಕುತ್ತಿದೆ. ಮೋದಿ ಸರಕಾರವು ಅದಾನಿ ಮತ್ತು ಕಂಪನಿ ಮಾಡಿದ ಕಾನೂನು ಮತ್ತು ನಿಯಮಾವಳಿಗಳ ಉಲ್ಲಂಘನೆಯನ್ನು ಮುಚ್ಚಿ ಹಾಕಲು ಸಮಯಾವಕಾಶ ಮಾಡಿಕೊಡುತ್ತಿರುವಂತೆ ಕಾಣುತ್ತಿದೆ. ಕೆಟ್ಟ ಉದ್ದೇಶಗಳಿಗೆ ಬಳಸಿದ ಸಾಲಗಳನ್ನು ಕೈಬಿಡಲು ಹಾಗೂ ಹಿಂಡನ್‌ಬರ್ಗ್ ಎಕ್ಸ್‌ಪೋಸ್‌ನಿಂದ ಆದ ನಷ್ಟವನ್ನು ಸರಿದೂಗಿಸಿಕೊಂಡು ಸಾವರಿಸಿಕೊಳ್ಳಲು ಕಾಲಾವಕಾಶ ನೀಡುತ್ತಿದೆ. ಅದಾನಿಯನ್ನು ರಕ್ಷಿಸಲು ಸಂಸತ್ತನ್ನು ನಿಷ್ಕ್ರಿಯಗೊಳಿಸುವುದು ಅದಕ್ಕೆ ತೆರಬೇಕಾದ ಸಣ್ಣ ಬೆಲೆಯಾಗಿದೆ. ಸಂಸತ್ತನ್ನು ಅವಮಾನಿಸುವುದು ಮತ್ತು ಅದನ್ನು ಅಪ್ರಸ್ತುತಗೊಳಿಸುವ ಪ್ರಕ್ರಿಯೆಯು ಅದಾನಿ ವಿಚಾರವನ್ನು ನಿರ್ವಹಿಸಿದ ಆಳುವ ಪಕ್ಷದ ರೀತಿಯಿಂದ ಇನ್ನಷ್ಟು ತ್ವರಿತಗೊಂಡಿದೆ.

ಅನು: ವಿಶ್ವ

ಮತ್ತೊಂದು ಕೇಂದ್ರೀಯ ಯೋಜನೆಗಳು. ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳ ಮೇಲೆ ಕೇಂದ್ರ ಮತ್ತು ರಾಜ್ಯಗಳು ವಿನಿಯೋಜನೆ ಮಾಡುತ್ತಿವೆ.

ಕೇಂದ್ರ ಪ್ರಾಯೋಜಿತ ಯೋಜನೆಗಳ ಮೇಲೆ ವಿನಿಯೋಜನೆ ಮಾಡುವ ಅನಿವಾರ್ಯತೆಯಿಂದ ರಾಜ್ಯ ತನ್ನ ಸ್ವಾಧೀನ ಇರುವ ಅಲ್ಪ ಸಂಪನ್ಮೂಲವನ್ನು ತನ್ನ ಆದ್ಯತೆ ಅನುಸಾರ ಬಳಸುವ ಸ್ವಾತಂತ್ರ್ಯ ಕಳೆದುಕೊಳ್ಳುತ್ತಿದೆ. ಕೇಂದ್ರೀಯ ಯೋಜನೆಗಳ ಮೇಲೆ ಕೇಂದ್ರ ಸರಕಾರ ಮಾತ್ರ ವಿನಿಯೋಜಿಸುತ್ತಿದೆ. ಜನರಿಂದ ಬಹುದೂರ ಇರುವ ಕೇಂದ್ರ ಸರಕಾರ ಜನರ ಮೂಲಸೌಕರ್ಯಗಳ ಮೇಲೆ ವಿನಿಯೋಜನೆ ಮಾಡುವುದು ಸಂಪನ್ಮೂಲ ಪೋಲು ಮಾಡುವುದಕ್ಕೆ ಸಮ. ಏಕೆಂದರೆ ಜನರಿಗೆ ಹತ್ತಿರ ಇರುವ ರಾಜ್ಯ ಸರಕಾರಗಳೇ ಮೂಲಸೌಕರ್ಯಗಳ ಮೇಲೆ ವಿನಿಯೋಜನೆ ಮಾಡುವುದು ಜನರಿಗೆ ತಲುಪುದಿಲ್ಲ ಎಂದು ಪಂಚಾಯತ್ ವ್ಯವಸ್ಥೆ ಜಾರಿಗೆ ಬಂದಿದೆ. ವಾಸ್ತವ ಹೀಗಿರುವಾಗ ಕೇಂದ್ರ ತನ್ನ ರಾಜಕೀಯ ಲಾಭಕ್ಕಾಗಿ ಕೋಟಿಗಟ್ಟಲೆ ಸಂಪನ್ಮೂಲ ವಿನಿಯೋಜನೆ ಮಾಡುವುದು ಉಪಯುಕ್ತವಲ್ಲ. ಇದೇ ಸಂಪನ್ಮೂಲವನ್ನು ಜನರಿಗೆ ಹತ್ತಿರ ಇರುವ ರಾಜ್ಯ/ಸ್ಥಳೀಯ ಸಂಸ್ಥೆಗಳಿಗೆ ನೀಡುವುದು ಹೆಚ್ಚು ಉಪಯುಕ್ತ. ಹಣಕಾಸು ಸಮಿತಿ ಮಾನದಂಡಗಳನ್ನು ನಿರ್ಧರಿಸುವಾಗ ರಾಜ್ಯಗಳ ಅಭಿಪ್ರಾಯವನ್ನು ಪರಿಗಣಿಸದಿರುವುದು ಮೂರನೇ ಕಾರಣ. ಹಣಕಾಸು ಸಮಿತಿ 2011ರ ಜನಸಂಖ್ಯೆಯನ್ನು ಬಳಸಬಾರದೆಂದು ದಕ್ಷಿಣದ ಎಲ್ಲ ರಾಜ್ಯಗಳು ಸಮಿತಿಯನ್ನು ಕೋರಿದ್ದವು. ಆದರೆ ಸಮಿತಿ ರಾಜ್ಯಗಳ ಅಭಿಪ್ರಾಯವನ್ನು ಪರಿಗಣಿಸಲೇ ಇಲ್ಲ. ಇದರಿಂದ ಕೇಂದ್ರ ಸರಕಾರದ ಬೊಕ್ಕಸಕ್ಕೆ ಹೆಚ್ಚು ತೆರಿಗೆ ತುಂಬುವ ರಾಜ್ಯಗಳ ಹೆಚ್ಚು ಸಂಪನ್ಮೂಲ ಕಳೆದುಕೊಳ್ಳುವ ಸ್ಥಿತಿ ನಿರ್ಮಾಣ ಆಗಿದೆ. ರಾಜ್ಯಗಳ ಅಭಿಪ್ರಾಯವನ್ನು ಪರಿಗಣಿಸುವುದೇ ಈ ಸಮಸ್ಯೆಗೆ ಪರಿಹಾರ.

ಇವೆಲ್ಲ ಸಮಸ್ಯೆಗಳನ್ನು ಪರಿಹರಿಸಲು ಗಂಭೀರವಾಗಿ ಪ್ರಯತ್ನಿಸುವ ಬದಲು ಇವನ್ನೂ ಡಬ್ಬಲ್ ಇಂಜಿನ್ ಸರಕಾರದ ಹೆಸರಲ್ಲಿ ಓಟು ಬ್ಯಾಂಕ್ ಪೊಲಿಟಿಕ್ಸ್ ಗೆ ಬಿಜೆಪಿ ಬಳಸಿಕೊಳ್ಳುತ್ತಿದೆ. ಬಿಹಾರದಲ್ಲಿ, ತಮಿಳುನಾಡಲ್ಲಿ, ಆಂಧ್ರದಲ್ಲಿ , ಬಿಜೆಪಿ ಸರಕಾರ ಇಲ್ಲ. ಆದರೆ ಕರ್ನಾಟಕದಲ್ಲಿ ಬಿಜೆಪಿ ಸರಕಾರ ಇತ್ತು. ಆದರೆ ಮೇಲಿನ ರಾಜ್ಯಗಳು ಕೇಂದ್ರದ ಸಂಪನ್ಮೂಲದಲ್ಲಿ ಕರ್ನಾಟಕಕ್ಕಿಂತ ಹೆಚ್ಚಿನ ಪಾಲು ಪಡೆದಿವೆ. ಹೀಗೆ ಡಬ್ಬಲ್ ಇಂಜಿನ್ ಸರಕಾರದಿಂದ ರಾಜ್ಯಗಳು ಕೇಂದ್ರ ಸಂಗ್ರಹಿಸುವ ತೆರಿಗೆಯಲ್ಲಿ ಹೆಚ್ಚಿನ ಪಾಲು ಪಡೆಯಲು ಸಾಧ್ಯವಿಲ್ಲ ಎನ್ನುವುದು ಮೇಲಿನ ಮಾಹಿತಿಯಿಂದ ಸ್ಪಷ್ಟವಾಗಿದೆ. ಸಂಪನ್ಮೂಲ ವಿತರಣೆಯ ವಾಸ್ತವ ಹೀಗಿರುವಾಗ ಡಬ್ಬಲ್ ಇಂಜಿನ್ ಸರಕಾರದ ಕಲ್ಪನೆ ಮೂಲಕ ಬಿಜೆಪಿ ರಾಜ್ಯಗಳಿಗೆ ನೀಡುವ ಸಂದೇಶ ಏನು? ಡಬ್ಬಲ್ ಇಂಜಿನ್ ಸರಕಾರ ಇಲ್ಲವಾದರೆ ಕೇಂದ್ರದ ಸಂವಿಧಾನೇತರ ಕಿರುಕುಳಗಳನ್ನು (ಗವರ್ನರ್ ಕಿರುಕುಳ, ಎಂಎಲ್‌ಎಗಳ ಖರೀದಿ ಇತ್ಯಾದಿಗಳನ್ನು, ಸಿಬಿಐ ಈಡಿ ದಾಳಿ) ತಪ್ಪಿಸಿಕೊಳ್ಳುವುದು ಕಷ್ಟ ಎನ್ನುವ ಸಂದೇಶವನ್ನು ಈ ಕಲ್ಪನೆ ರವಾನಿಸುತ್ತಿದೆ. ಆದುದರಿಂದ ಡಬ್ಬಲ್ ಇಂಜಿನ್ ಸರಕಾರದ ಕಲ್ಪನೆ ನಮ್ಮ ಫೆಡರಲ್ ಸ್ವರೂಪವನ್ನು ಗಟ್ಟಿ ಮಾಡುವ ಕಲ್ಪನೆ ಅಲ್ಲ. ಏಕೆಂದರೆ ರಾಜ್ಯದ ಜನರು ಬಿಜೆಪಿಯೇತರ ಪಕ್ಷವನ್ನು ಬೆಂಬಲಿಸಿದರೆ ಆ ಪಕ್ಷದ ಆಡಳಿತವನ್ನು ಸುಸೂತ್ರವಾಗಿ ನಡೆಸಲು ಬಿಡುವುದಿಲ್ಲ ಎನ್ನುವ ಬೆದರಿಕೆ ಈ ಕಲ್ಪನೆಯಲ್ಲಿದೆ. ಆದುದರಿಂದ ಇದೊಂದು ಫೆಡರಲ್ ಸ್ವರೂಪವನ್ನು ಬುಡಮೇಲು ಮಾಡುವ ಕಲ್ಪನೆ.

ಜನಶಕ್ತಿ ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ಈರುಳ್ಳಿ ಬೆಲೆ ಕುಸಿತ! ರಸಗೊಬ್ಬರ ಬೆಲೆ ಏರಿಕೆ!

ಸಿದ್ದಯ್ಯ ಸಿ.



'2022ರಲ್ಲಿ ರೈತರ ಆದಾಯವನ್ನು ದ್ವಿಗುಣಗೊಳಿಸುತ್ತೇವೆ, ಇನ್ನು ಮುಂದೆ ರೈತರು ನೆಮ್ಮದಿಯಿಂದ ಬದುಕುತ್ತಾರೆ' ಇದು 2016ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಹೇಳಿದ ಮಾತು. ಆದರೆ ಈಗ ದೇಶದ ರೈತರ ಪರಿಸ್ಥಿತಿ ಏನಾಗಿದೆ? ಮಹಾರಾಷ್ಟ್ರದ ಬಾರ್ಶಿ ಪ್ರದೇಶದಲ್ಲಿ ವಾಸ ಮಾಡುತ್ತಿರುವ ರಾಜೇಂದ್ರ ತುಕಾರಾಂ ಚವಾಣ್ ಈರುಳ್ಳಿ ಬೆಳೆಯುತ್ತಾರೆ. ಅವರು, ಫೆಬ್ರವರಿ ಕೊನೆಯ ವಾರದ ಒಂದು ದಿನ ತಮ್ಮ ಜಮೀನಿನಲ್ಲಿ ಬೆಳೆದ 512 ಕೆಜಿ ಈರುಳ್ಳಿಯನ್ನು ಮಾರಾಟ ಮಾಡಲು ಕೃಷಿ ಉತ್ಪನ್ನ ಮಾರುಕಟ್ಟೆಗೆ ಕೊಂಡೊಯ್ದಿದ್ದಾರೆ. ಈ ವೇಳೆ ತೀವ್ರ ಬೆಲೆ ಕುಸಿತದಿಂದ ಕ್ವಿಂಟಲ್ ಈರುಳ್ಳಿ ಬೆಲೆ 100 ರೂ.ಗೆ ಇಳಿದಿದೆ. ಅಂದರೆ ಒಂದು ಕೆಜಿ ಈರುಳ್ಳಿಯನ್ನು ಕೇವಲ ಒಂದು ರೂಪಾಯಿಗೆ ಖರೀದಿಸಲಾಗಿದೆ. ಒಟ್ಟು 512 ಕೆಜಿ ಈರುಳ್ಳಿ ಮಾರಾಟ ಮಾಡಿದ್ದು ಕೇವಲ 512 ರೂ. ಅದರಲ್ಲಿ ಲಾರಿ ಬಾಡಿಗೆ ಮತ್ತು ಈರುಳ್ಳಿಯನ್ನು ಅನ್ ಲೋಡ್ ಶುಲ್ಕ ಮತ್ತು ಇತರೆ ಶುಲ್ಕ 510 ರೂ. ಕಳೆದು, ರೈತನಿಗೆ ಉಳಿದದ್ದು ಎರಡು ರೂಪಾಯಿ ಮಾತ್ರ. ಈರುಳ್ಳಿ ಖರೀದಿಸಿದ ಅಂಗಡಿಯವನು ರೈತನಿಗೆ 2 ರೂಪಾಯಿ 49 ಪೈಸೆ ಚೆಕ್ ಬರೆದು ಕೊಟ್ಟಿದ್ದಾನೆ. ಈ ಹಣವನ್ನೂ ಆ ರೈತ ಬ್ಯಾಂಕ್ ನಿಂದ ಪಡೆಯಬೇಕು. ಇದರಿಂದ ರೈತ ತುಕಾರಾಂ ಸಾಕಷ್ಟು ನಷ್ಟ ಅನುಭವಿಸಿದರು.

ರಾಜ್ಯದಲ್ಲೂ ಬೆಲೆ ಕುಸಿತ

ಗದಗ ಜಿಲ್ಲೆಯ ರೈತರೊಬ್ಬರು ನವೆಂಬರ್ 12, 2022ರಂದು ತಾನು ಬೆಳೆದ ಈರುಳ್ಳಿಯನ್ನು ಬೆಂಗಳೂರಿನ ಎಪಿಎಂಸಿ ಮಾರುಕಟ್ಟೆಗೆ ತಂದ್ದಿದ್ದರು. ಅವರು ತಂದ 205 ಕೆಜಿ ಈರುಳ್ಳಿಗೆ ಕೆಜಿ ಒಂದಕ್ಕೆ 2 ರೂಪಾಯಿ ಲೆಕ್ಕದಲ್ಲಿ 410 ರೂ. ಮಾತ್ರ ಸಿಕ್ಕಿತ್ತು. ಇದರಲ್ಲಿ 401.64 ರೂಪಾಯಿಗಳನ್ನು ಸಾಗಣೆ ವೆಚ್ಚ, ಅನ್ ಲೋಡ್ ಶುಲ್ಕ ನೀಡಿ ರೈತನಿಗೆ ಉಳಿದದ್ದು ಕೇವಲ 8.36 ರೂಪಾಯಿ ಮಾತ್ರ. ಇದು ಒಂದೆರಡು ಉದಾಹರಣೆಗಳಷ್ಟೆ. ರೈತರು ನಷ್ಟ ಅನುಭವಿಸಿದ ಇಂತಹ ಬಹಳಷ್ಟು ಉದಾಹರಣೆಗಳಿವೆ.

ಈ ಬೆಲೆ ಇಳಿಕೆ ಈರುಳ್ಳಿಗೆ ಮಾತ್ರ ಸೀಮಿತವಾಗಿಲ್ಲ. ಆಲೂಗೆಡ್ಡೆ ಸೇರಿದಂತೆ ಎಲ್ಲ ಬೆಳೆಗಳ ಬೆಲೆ ಕುಸಿದಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಬೆಲೆ ಕುಸಿತದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ತೊಗರಿ, ಸೇಂಗಾ, ಕಡಲೆ, ಸೂರ್ಯಕಾಂತಿ, ಹತ್ತಿ, ಬತ್ತ, ಕಬ್ಬು, ಕೊಬ್ಬರಿ ಸೇರಿದಂತೆ ಇತರೆ ಬೆಳೆಗಾರರ ಸ್ಥಿತಿ ಇದಕ್ಕಿಂತ ಬಿನ್ನವಾಗೇನೂ ಇಲ್ಲ. ಸ್ವಾಮಿನಾಥನ್ ವರದಿ ಅನ್ವಯ ಕೃಷಿ ಉತ್ಪನ್ನಗಳಿಗೆ ಉತ್ಪಾದನ ವೆಚ್ಚದ ಮೇಲೆ ಶೇ.50ರಷ್ಟು (ಸಿ2+50) ಲಾಭವನ್ನು ಸೇರಿಸಿ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು ಎಂಬ ರೈತರ ಬೇಡಿಕೆಯನ್ನು ಸರ್ಕಾರ ಪರಿಗಣಿಸುತ್ತಿಲ್ಲ. ರಾಷ್ಟ್ರದ ರಾಜಧಾನಿ ದೆಹಲಿಯ ಗಡಿಗಳಲ್ಲಿ ರೈತರು ಒಂದು ವರ್ಷ ನಿರಂತರವಾಗಿ ನಡೆಸಿದ ಹೋರಾಟದ ಸಂದರ್ಭದಲ್ಲಿ ಬೆಂಬಲ ಬೆಲೆ ಬೇಡಿಕೆ ಈಡೇರಿಸಲು ಕ್ರಮಕೈಗೊಳ್ಳುವುದಾಗಿ ಕೇಂದ್ರ ಸರ್ಕಾರ ಭರವಸೆ ಕೊಟ್ಟಿತ್ತು. ಆದರೆ, ವರ್ಷ ಕಳೆದರೂ ತಾನು ಕೊಟ್ಟ ಭರವಸೆ ಈಡೇರಿಸುವ ಪ್ರಯತ್ನವನ್ನೇ ಮಾಡುತ್ತಿಲ್ಲ. ಮಂತೊದೆಡೆ ಕೃಷಿ ಉತ್ಪಾದನೆಗಾಗಿ ಖರೀದಿಸುವ ಗೊಬ್ಬರ, ಬಿತ್ತನೆ ಬೀಜಗಳು, ಔಷಧ, ಕೃಷಿ ಕೆಲಸಗಳು, ಕಳೆ ಕೀಳಲು, ಸಾಲದ ಬಡ್ಡಿಕಟ್ಟಲು, ಕೃಷಿ ಕಾರ್ಮಿಕರ ಕೂಲಿ, ನೈಸರ್ಗಿಕ ಅಪಾಯಗಳಿಂದ ಎದುರಾಗುವ ಸಮಸ್ಯೆಗಳು ಇತ್ಯಾದಿಗಳಿಗೆ ಹೆಚ್ಚುವರಿ ಖರ್ಚು ಇದ್ದೇ ಇದೆ. ಇದು ರೈತರನ್ನು ಕಂಗೆಡಿಸುವಂತೆ ಮಾಡಿದೆ. ಇದರಿಂದ ಮನನೊಂದ ಹಲವು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ಅವಧಿಯಲ್ಲಿ ರೈತರ ಆತ್ಮಹತ್ಯೆಗಳೂ ಹೆಚ್ಚಿವೆ. ರೈತರು ಬಳಸುವ ರಸಗೊಬ್ಬರದ ಬೆಲೆ ಹಲವು ಪಟ್ಟು ಹೆಚ್ಚಾಗಿದೆ. ಕಳೆದ ವರ್ಷ 2010–11 ರ ರಸಗೊಬ್ಬರ ಬೆಲೆ ವಿವರಗಳು ಮತ್ತು 28 ಫೆಬ್ರವರಿ 2023 ರ ರಸಗೊಬ್ಬರ ಬೆಲೆ ವಿವರಗಳು ಕೋಷ್ಟಕದಲ್ಲಿವೆ.



ಕ್ರ. ಸಂ.	ರಸಗೊಬ್ಬರಗಳ ಹೆಸರು	2010 ಬೆಲೆ ಸ್ಥಿತಿ (ರೂ.)	2023 ಫೆಬ್ರವರಿ 28 ರಂದು ಬೆಲೆ ಸ್ಥಿತಿ (ರೂ.)	ಬೆಲೆ ವ್ಯತ್ಯಾಸ (ರೂ.)
1	ಯೂರಿಯಾ	220 (50 ಕೆಜಿ)	266.50 (45 ಕೆಜಿ)	46.50
2	ಪೊಟ್ಯಾಶ್	280	1700.00	1420.00
3	ಸೂಪರ್ ಫಾಸ್ಪೇಟ್	140	495.00	355.00
4	ಡಿ.ಎ.ಪಿ (ಡೈಅಮೋನಿಯಂ ಫಾಸ್ಪೇಟ್)	450	1350.00	900.00
5	ಕಾಂಪ್ಲೆಕ್ಸ್ (17–17–17)	450	1470.00	1020.00
	ಒಟ್ಟು	**1540**	**5281.50**	**3741.50**

ರೈತರು 2010ರಲ್ಲಿ ಇಲ್ಲಿ ಹೆಸರಿಸಿರುವ ಐದೂ ಗೊಬ್ಬರವನ್ನು ಒಂದೊಂದು ಚೀಲದ ದರದಲ್ಲಿ ಖರೀದಿಸಿದರೆ ಒಟ್ಟು 1540 ರೂ. ಆಗುತ್ತಿತ್ತು. ಫೆಬ್ರವರಿ 28, 2023 ರಂದು, ಈ ಐದು ರಸಗೊಬ್ಬರಗಳ ಒಂದೊಂದು ಚೀಲ ಖರೀದಿಸಿದರೆ, ರೈತರು ರೂ. 5281.50 ಪಾವತಿಸಬೇಕಾಗುತ್ತದೆ. ಈಗ 3741.50 ರೂಪಾಯಿಗಳ ಹೆಚ್ಚುವರಿ ಹಣ ಕೊಟ್ಟು ಖರೀದಿಸಬೇಕು. ಅಂದರೆ ಅದನ್ನು ರೈತರು ಖರೀದಿಸಲು 3.5 ಪಟ್ಟು ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ.

ತೈಲೋದ್ಯಮಿಗಳ ಉತ್ಪನ್ನಗಳಿಗೆ ಅಂತರಾಷ್ಟ್ರೀಯ ದರ! ಆದರೆ

ಟಾಟಾ, ರಿಲಯನ್ಸ್, ಎಸ್ಸಾರ್, ನಂತಹ ಖಾಸಗಿ ಕಂಪನಿಗಳು ಮತ್ತು ಒಎನ್ ಜಿಸಿ, ಇಂಡಿಯನ್ ಆಯಿಲ್ ನಂತಹ ಸಾರ್ವಜನಿಕ ಕಂಪನಿಗಳು ಭಾರತದ ಸಮುದ್ರದಾಳದಿಂದ ಪೆಟ್ರೋಲಿಯಂ ಹೊರತೆಗೆದು ಮಾರಾಟ ಮಾಡುತ್ತವೆ. ಈ ದೇಶೀಯ ಪೆಟ್ರೋಲಿಯಂ ಉತ್ಪನ್ನಗಳಿಗೆ ಅಂತರಾಷ್ಟ್ರೀಯ ಮಾರುಕಟ್ಟೆ ದರ ನಿಗಧಿ ಮಾಡುತ್ತಾರೆ. ತೈಲ ಕಂಪನಿಗಳು ಹೊರದೇಶದಿಂದ ಕಡಿಮೆ ದರದಲ್ಲಿ ಕಚ್ಚಾ ತೈಲ ತಂದು ಅದರ ಉತ್ಪನ್ನಗಳನ್ನು ಅಧಿಕ ಬೆಲೆಗೆ ಮಾರುತ್ತಿವೆ. ಕೃಷಿಗೆ ಬಳಸುವ ರಾಸಾಯನಿಕ ಗೊಬ್ಬರ, ರೋಗನಿರೋಧಕ ಔಷಧ, ಪೆಟ್ರೋಲ್ ಮತ್ತು ಡೀಸೆಲ್ ಗೆ ರೈತರು ಜಾಗತಿಕ ಮಾರುಕಟ್ಟೆ ಬೆಲೆ ನೀಡಬೇಕು. ಆದರೆ, ರೈತರ ಉತ್ಪನ್ನಗಳಿಗೆ ಇಂತಹ ಜಾಗತಿಕ ಮಾರುಕಟ್ಟೆ ದರ ಸಿಗುವ ವ್ಯವಸ್ಥೆ ಇಲ್ಲ. ರೈತರ ಉತ್ಪನ್ನಗಳನ್ನು ಭಾರತೀಯ ಮಾರುಕಟ್ಟೆ ದರದಲ್ಲಿ, ಅದರಲ್ಲೂ ವ್ಯಾಪಾರಿಗಳು ನಿಗಧಿಮಾಡುವ ದರದಲ್ಲಿ ಮಾರಬೇಕು.

ಮಾತ್ರವಲ್ಲ ಕೃಷಿ ಉತ್ಪನ್ನಗಳಿಗೆ ಅವುಗಳಿಗೆ ಮಾಡುವ ವೆಚ್ಚ ಮತ್ತು ನಿರ್ಧಿಷ್ಠ ಲಾಭ ಸಿಗುವಂತಹ ಬೆಲೆ ನಿಗಧಿಪಡಿಸಿ ಎಂದು ಹೋರಾಡುವ ಪರಿಸ್ಥಿತಿ ರೈತರದು. ಖಾಸಗಿ ಉದ್ಯಮಿಗಳ ವಿಷಯದಲ್ಲಿ ದಾರಾಳವಾಗಿರುವ ಸರ್ಕಾರ, ರೈತರ ವಿಷಯದಲ್ಲಿಅಂತಹ ದಾರಾಳತನ ತೋರುವುದಿಲ್ಲ.

ಮಹಾರಾಷ್ಟ್ರ ರೈತರ ಬೃಹತ್ ಪಾದಯಾತ್ರೆ

ಕೂಡಲೇ ರೈತರಿಗೆ ಪ್ರತಿ ಕ್ವಿಂಟಾಲ್ ಈರುಳ್ಳಿಗೆ 1500 ರೂ.ವರೆಗೆ ಪರಿಹಾರ ನೀಡಬೇಕು ಮತ್ತು ಅವರ ಉತ್ಪನ್ನವನ್ನು ಕೆಜಿಗೆ 15 ರಿಂದ 20 ರೂ.ಗೆ ಖರೀದಿಸಬೇಕು ಎಂದು ಒತ್ತಾಯಿಸಿ, ಮಹಾರಾಷ್ಟ್ರದ ರೈತರು ಇದೇ ಮಾರ್ಚ್ ತಿಂಗಳಲ್ಲಿ ನಾಸಿಕ್ ನಿಂದ ಮುಂಬೈಗೆ 200 ಕಿ.ಮೀ. ದೂರ ಬೃಹತ್ ಪಾದಯಾತ್ರೆ ಅಮ್ಮಿಕೊಂಡಿದ್ದರು. ರೈತರ ಪಾದಯಾತ್ರೆ ಮುಂಬೈಗೆ ಕೇವಲ 80 ಕಿ.ಮೀ. ದೂರದಲ್ಲಿ ಬರುತ್ತಿರುವಾಗಲೇ ಅಲ್ಲಿ ರಾಜ್ಯ ಸರ್ಕಾರ ರೈತರ ಹಲವು ಬೇಡಿಕೆಗಳನ್ನು ಈಡೇರಿಸಲು ಒಪ್ಪಿಕೊಂಡ ಕಾರಣ ಪಾದಯಾತ್ರೆಯನ್ನು ಸ್ಥಗಿತಗೊಳಿಸಲಾಯಿತು.

ರಸಗೊಬ್ಬರದ ಬೆಲೆ ಮೂರೂವರೆ ಪಟ್ಟು ಏರಿಕೆ

2010ರಲ್ಲಿ 50 ಕೆಜಿ ಯೂರಿಯಾ ಚೀಲದ ಬೆಲೆ 220 ರೂ. ಇದ್ದದ್ದು, 28 ಫೆಬ್ರವರಿ 2023 ರಂದು 45 ಕೆಜಿ ಯೂರಿಯಾ ಚೀಲಕ್ಕೆ 266.50.ರೂ. ಆಗಿದೆ. ಯೂರಿಯಾ ಬೆಲೆ ರೂ. 46.50 ಏರಿಕೆಯಾಗಿದೆ. ತೂಕ ಕೂಡ 5 ಕೆಜಿ ಕಡಿಮೆಯಾಗಿದೆ. ಅದೇ ರೀತಿ ಡಿ ಅಮೋನಿಯಂ ಫಾಸ್ಫೇಟ್ (ಡಿಎಪಿ) ಬೆಲೆ ರೂ.450ರಿಂದ ರೂ.1350ಕ್ಕೆ ಏರಿಕೆಯಾಗಿದೆ. ಈಗ ಹೆಚ್ಚುವರಿಯಾಗಿ 900 ರೂ. ಪೊಟ್ಯಾಷ್ ರೂ.280ರಿಂದ ರೂ.1700ಕ್ಕೆ ಏರಿಕೆಯಾಗಿದೆ. ಅಂದರೆ ಪೊಟ್ಯಾಷ್ ಬೆಲೆಯಲ್ಲಿ ರೂ.1420 ಏರಿಸಲಾಗಿದೆ. ಕಾಂಪ್ಲೆಕ್ಸ್ 17–17–17 ರೂ. 450ರಿಂದ ರೂ.1470ಕ್ಕೆ ಏರಿಕೆಯಾಗಿದೆ. ರೈತರು ಇದಕ್ಕೆ ರೂ.1020 ಹೆಚ್ಚು ಪಾವತಿಸಬೇಕು. 2010ರಲ್ಲಿ ಐದೂ ಗೊಬ್ಬರದ ಮೂಟೆ ಖರೀದಿಸಿದರೆ ಒಟ್ಟು 1540 ರೂ. ಗಳಿಗೆ ದೊರಕುತ್ತಿತ್ತು. ಫೆಬ್ರವರಿ 28, 2023 ರಂದು, ಈ ಐದು ರಸಗೊಬ್ಬರಗಳ ಒಂದೊಂದು ಚೀಲ ಖರೀದಿಸಿದರೆ, ರೈತರು ರೂ.5281.50 ಪಾವತಿಸಬೇಕಾಗುತ್ತದೆ. ಅಂದರೆ, ರೂ.3741.50 ಹೆಚ್ಚುವರಿ ಹಣ ಕೊಟ್ಟುಈಗ ಖರೀದಿಸಬೇಕು.. ಅಂದರೆ

ಪುಟ 10 ಕ್ಕೆ



ಏಪ್ರಿಲ್ 5, 2023 ರಂದು ಕಾರ್ಮಿಕರು–ರೈತರ ಬೃಹತ್ ರ್‍ಯಾಲಿ

ರೈತರ ಉತ್ಪನ್ನಗಳಿಗೆ ಅಗತ್ಯವಾದ ಪರಿಕರಗಳು ಕೈಗೆಟಕುವ ಬೆಲೆಗೆ ಸಿಗುತ್ತಿಲ್ಲ. ಕೇಂದ್ರ ಸರ್ಕಾರ ಸೂಚಿಸಿರುವ ಕನಿಷ್ಠ ಬೆಂಬಲ ಬೆಲೆಯಲ್ಲಾದರೂ ಖರೀದಿ ನಡೆಯುತ್ತಿಲ್ಲ. ಸರ್ಕಾರ ಘೋಷಿಸಿದ ಬೆಲೆಯಲ್ಲಿ ಅಕ್ಕಿ ಮತ್ತು ಗೋಧಿಯನ್ನು ಮಾತ್ರ ಕಡಿಮೆ ಪ್ರಮಾಣದಲ್ಲಿ ಖರೀದಿಸಲಾಗುತ್ತದೆ. ಅಕ್ಕಿ, ಗೋಧಿ ಸೇರಿದಂತೆ ಎಲ್ಲ 23 ಬಗೆಯ ಕೃಷಿ ಉತ್ಪನ್ನಗಳನ್ನು ಖಾಸಗಿ ವ್ಯಕ್ತಿಗಳು ತಮ್ಮ ಇಚ್ಚೆಯಂತೆ ಖರೀದಿಸಿ ರೈತರ ಹೊಟ್ಟೆಗೆ ಹೊಡೆಯುತ್ತಿದ್ದಾರೆ. ಕೇಂದ್ರ ಸರ್ಕಾರ ಇದನ್ನು ತಮಾಷೆಯೆಂಬಂತೆ ನೋಡುತ್ತಿದೆ. 2010ರಲ್ಲಿ ಒಂದು ಕೆ.ಜಿ. ಈರುಳ್ಳಿಯನ್ನು ರೂ. 60ಕ್ಕೆ ಖರೀದಿಸಲಾಗುತ್ತಿತ್ತು. ಈಗ 1 ಮತ್ತು 2 ರೂ.ನಲ್ಲಿ ಖರೀದಿ ಮಾಡಲಾಗುತ್ತಿದೆ. ಕೃಷಿ ಉತ್ಪನ್ನಗಳಿಗೆ ರೈತರು ಮಾಡುವ ವೆಚ್ಚವೂ ಅವರಿಗೆ ಸಿಗುತ್ತಿಲ್ಲ. ಆದರೆ ಕೇಂದ್ರ ಸರ್ಕಾರ ಇನ್ನೂ ಇತ್ತ ಗಮನ ನೀಡುತ್ತಿಲ್ಲ. ರೈತರು ಉತ್ಪಾದಿಸುವ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗಲು ಮತ್ತು ರೈತರು ಕೃಷಿಗೆ ಬಳಕೆ ಮಾಡುವ ಪದಾರ್ಥಗಳ ಬೆಲೆಯನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ ಕಾನೂನು ರಚಿಸಬೇಕು ಎಂದು ಒತ್ತಾಯಿಸಿ, ದೇಶದಲ್ಲಿ ರೈತರ ಮತ್ತೊಂದು ಹೋರಾಟ ನಡೆಯುವ ಸಮಯ ದೂರವಿಲ್ಲ. ಅದಕ್ಕೆ ಪೂರ್ವಭಾವಿಯಾಗಿ ಏಪ್ರಿಲ್ 5, 2023 ರಂದು ದೆಹಲಿಯಲ್ಲಿ ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಗಳ ವಿರುದ್ಧ 10 ಲಕ್ಷ ರೈತರು–ಕಾರ್ಮಿಕರು ಪ್ರತಿಭಟನೆ ನಡೆಸಲಿದ್ದಾರೆ. ಈ ಪ್ರತಿಭಟನೆಗೆ ದೇಶದ ಎಲ್ಲ ಭಾಗದ ರೈತರು ಬೆಂಬಲಿಸಬೇಕಾದ ಅಗತ್ಯವಿದೆ.





ಗಂಗಯ್ಯನಪಾಳ್ಯ: ಬಗರ್ ಹುಕುಂ ಭೂಮಿಯಿಂದ ಅರಣ್ಯ ಇಲಾಖೆಯನ್ನು ಹೊರದಬ್ಬಿದ ರೈತರು

ಅರಣ್ಯ ಇಲಾಖೆಯಿಂದ ಒಕ್ಕಲೆಬ್ಬಿಸಲ್ಪಟ್ಟಿದ್ದ ತುಮಕೂರು ಜಿಲ್ಲೆಯ ಚೇಳೂರು ಹೋಬಳಿಗೆ ಸೇರಿದ ಗಂಗಯ್ಯನಪಾಳ್ಯದ ರೈತರು ಹಲವು ವರ್ಷಗಳ ಹೋರಾಟ ಮತ್ತು ಅಂತಿಮವಾಗಿ ಸತತ 5 ದಿನಗಳ ಕಾಲ ಹಗಲು-ರಾತ್ರಿ ಹೋರಾಟದಲ್ಲಿ ಗೆಲುವು ಸಾಧಿಸಿದ್ದಾರೆ. ಅರಣ್ಯ ಇಲಾಖೆಯನ್ನು ತಮ್ಮ ಬಗರ್ ಹುಕ್ಕುಂ ಭೂಮಿಯಿಂದ ಹೊರದಬ್ಬುವಲ್ಲಿ ರೈತರು ಯಶಸ್ವಿಯಾಗಿದ್ದಾರೆ. ಈ ಮೂಲಕ ತಾವು ಸಾಗುವಳಿ ಮಾಡುತ್ತಿದ್ದ ಬಗರ್ ಹುಕ್ಕುಂ ಭೂಮಿಯನ್ನು ಹಲವು ವರ್ಷಗಳ ನಂತರ ಮರಳಿ ಪಡೆದುಕೊಂಡಿದ್ದಾರೆ. ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್ಎಸ್) ದ ತುಮಕೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಈ ಹೋರಾಟ ನಡೆಯಿತು.

ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಚೇಳೂರು ಹೋಬಳಿಯ ಗಂಗಯ್ಯನಪಾಳ್ಯ, ಮಂಚಲದೊರೆ, ಅಂಕಸಂದ್ರ ಗ್ರಾಮ ಪಂಚಾಯತಿ ಸೇರಿದಂತೆ ವಿವಿಧ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಸುಮಾರು 35 ಗ್ರಾಮಗಳ ರೈತರು, 70 ವರ್ಷಗಳಿಗೂ ಹೆಚ್ಚು ಕಾಲದಿಂದ ಬಗರ್ ಹುಕ್ಕುಂ ಬೇಸಾಯ ಮಾಡಿಕೊಂಡು ಬರುತ್ತಿದ್ದಾರೆ. ಅರಣ್ಯ ಇಲಾಖೆಯವರು ಇದು ಅರಣ್ಯ ಭೂಮಿ ಎನ್ನುತ್ತಾ ರೈತರನ್ನು ಬಗರ್ ಹುಕುಂ ಜಮೀನುಗಳಿಂದ ಒಕ್ಕಲೆಬ್ಬಿಸುವ ಪ್ರಯತ್ನ ಮಾಡುತ್ತಾರೆ.

ಈ ಜಮೀನುಗಳಲ್ಲಿ ಹಲವು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದ ರೈತರು ಮತ್ತು ಅವರ ಕುಟುಂಬಗಳ ಸದಸ್ಯರಿಗೆ ಅರಣ್ಯ ಇಲಾಖೆಯವರು ವಿವಿಧ ರೀತಿಯ ಕಿರುಕುಳ ಕೊಡುತ್ತಾರೆ, ಅತ್ಯಂತ ಅಮಾನವೀಯ ರೀತಿಯಲ್ಲಿ ಹಿಂಸೆ, ದೌರ್ಜನ್ಯ, ಮಹಿಳೆಯರ ಮೇಲೆ ಅತ್ಯಾಚಾರ ಯತ್ನ, ಅಪಹರಣ, ಪ್ರತಿರೋಧ ತೋರುವವರನ್ನು ಜೈಲಿಗೆ ಹಾಕುವುದು, ಹೀಗೆ ವಿವಿಧ ರೀತಿಯ ಕಿರುಕುಳ ನೀಡುವ ಮೂಲಕ ಬಗರ್ ಹುಕುಂ ಸಾಗುವಳಿ ಭೂಮಿಯಿಂದ ರೈತರನ್ನು ಬಲವಂತವಾಗಿ ಒಕ್ಕಲೆಬ್ಬಿಸಿದರು. ಅಂತಹ ಜಮೀನುಗಳಿಂದ 2014ರಿಂದ 2020ರವರೆಗೆ ಸುಮಾರು ಎರಡು ಸಾವಿರ ಕುಟುಂಬಗಳನ್ನು ಈ ರೀತಿ ಬಲವಂತವಾಗಿ ಒಕ್ಕಲೆಬ್ಬಿಸಲಾಗುತ್ತದೆ.

ಜನ ವಸತಿ ಪ್ರದೇಶಗಳನ್ನೂ ಅರಣ್ಯ ಇಲಾಖೆಗೆ ವರ್ಗಾವಣೆ!

ಒಂಬತ್ತು ವರ್ಷಗಳ ಹಿಂದೆ ನಮ್ಮ ದೇಶದ ಪ್ರಧಾನಿ 2022ರ ಒಳಗಾಗಿ ದೇಶದಲ್ಲಿ ಮನೆ ಇಲ್ಲದ ಎಲ್ಲರಿಗೂ ಮನೆ ಕೊಡುತ್ತೇವೆ ಎಂದು ಘೋಷಣೆ ಮಾಡಿದ್ದರು. ಪ್ರಧಾನಿ ಹೇಳಿದ ಸಮಯ ಕಳೆದರೂ ಭಾರತದ ಕೋಟ್ಯಾಂತರ ಕುಟುಂಬಗಳಿಗೆ ತಮ್ಮದು ಎಂಬ ಒಂದು ಸೂರು



ಕಟ್ಟಿಕೊಳ್ಳಲಾಗಿಲ್ಲ. ಮತ್ತೊಂದೆಡೆ, ಸ್ವತಃ ತಾವೇ ಕಷ್ಟಪಟ್ಟು ಕಟ್ಟಿಕೊಂಡ ಮನೆಗಳಿಂದ ಅರಣ್ಯ ಭೂಮಿ ಎಂಬ ನೆಪದಲ್ಲಿ ಬಡ ಕುಟುಂಬಗಳನ್ನು ಮನೆಗಳಿಂದ ಹೊರಹಾಕುವ ಕೆಲಸವನ್ನು ಪ್ರಧಾನಿಯವರದೇ ಪಕ್ಷದ ರಾಜ್ಯ ಸರ್ಕಾರ ಮಾಡುತ್ತಿದೆ.

ಬಗರ್ ಹುಕುಂ ಸಾಗುವಳಿದಾರರು ಸಕ್ರಮ ಕೋರಿ ಸಲ್ಲಿಸಿದ್ದ ಅರ್ಜಿ ಇತ್ಯರ್ಥ್ಯಕ್ಕೆ ಬಾಕಿ ಇರುವಾಗಲೇ, ಈ ಸಾಗುವಳಿದಾರರ ಜೊತೆ ಹಾಗೂ ಈ ಗ್ರಾಮಗಳ ಜನರ ಜೊತೆ ಚರ್ಚಿಸದೇ, ರೈತರು ತಮ್ಮ ಜೀವನೋಪಾಯಕ್ಕಾಗಿ ಅವಲಂಭಿಸಿದ ಬಗರ್ ಹುಕುಂ ಭೂಮಿಯನ್ನು ಅಕ್ರಮವಾಗಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದ ಮಾಹಿತಿ 2003-04 ನಂತರವಷ್ಟೇ ಪಹಣಿಯಲ್ಲಿ ಕಾಣಿಸಿಕೊಂಡಿದೆ. ಮತ್ತೊಂದೆಡೆ, ಈ ಭೂಮಿ ಅರಣ್ಯ ಇಲಾಖೆಯ ಒಡೆತನದಲ್ಲಿದೆ, 1918ರಲ್ಲಿ ಅರಣ್ಯ ಇಲಾಖೆಗೆ ಭೂಮಿ ಮಂಜೂರಾಗಿದ್ದು, ಈ ಭೂಮಿಯಲ್ಲಿ ಅಕ್ರಮ ಸಾಗುವಳಿಗೆ ಅವಕಾಶವಿಲ್ಲ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ವಾಧಿಸಿದರು.

ಕಂದಾಯ ಇಲಾಖೆಯು ತಾಳೆಕೊಪ್ಪ, ದಾಸಪ್ಪನಳ್ಳಿ ಮತ್ತು ಇತರೆ ಗ್ರಾಮಗಳ ಸುಮಾರು 1,914 ಎಕರೆ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿದೆ. ಅದು 1999ರ ಅರಣ್ಯ ಇಲಾಖೆಯ ಹೆಸರು ಪಹಣಿ ಪತ್ರದಲ್ಲಿ ಸೇರಿಸಲಾಗಿದೆ. ರೈತರು ಸಾಗುವಳಿ ಮಾಡುತ್ತಿದ್ದ ಜಮೀನುಗಳನ್ನು ಮಾತ್ರವಲ್ಲ, ಐದು ಕಂದಾಯ ಗ್ರಾಮಗಳಾದ ಕುರುಬರಹಳ್ಳಿ, ಪೇಟೆ ಕುರುಬರಹಳ್ಳಿ, ಹೊನ್ನೇನಹಳ್ಳಿ ಶಿಲವಾರಹಳ್ಳಿ, ನಾಯಕನಕೆರೆ ಅಲ್ಲದೇ ಗಂಗಯ್ಯನ ಪಾಳ್ಯಗಳ ಜನವಸತಿ ಪ್ರದೇಶಗಳನ್ನೂ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ. ಕಂದಾಯ ಇಲಾಖೆಯು ಈ ವಿಷಯವಾಗಿ ಅಲ್ಲಿಯ ಜನರ ಜೊತೆಗೂ ಚರ್ಚಿಸದೇ ಏಕಾಏಕಿ ಈ ಜನವಸತಿ ಪ್ರದೇಶಗಳನ್ನು ವರ್ಗಾಯಿಸಿದೆ. ಇಲ್ಲಿ ವಾಸಿಸುತ್ತಿದ್ದ ಜನರಿಗೆ ಪರ್ಯಾಯ ವ್ಯವಸ್ಥೆಯನ್ನೂ ಮಾಡದೆ ಒಕ್ಕಲೆಬ್ಬಿಸಿದ್ದರು.

ಪರಿಶಿಷ್ಟ ಜನಾಂಗದ ಮಹಿಳೆಯರಿಗೂ ಹಿಂಸೆ

ಬಗರ್ ಹುಕುಂ ಸಾಗುವಳಿದಾರರು ಹಕ್ಕುಪತ್ರಕ್ಕಾಗಿ ಸಲ್ಲಿಸಲಾದ ಅರ್ಜಿಗಳು ಸರ್ಕಾರದ ಮುಂದಿದೆ. ಹೀಗಿರುವಾಗಲೇ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಠ ಪಂಗಡಕ್ಕೆ ಸೇರಿದ ಮಹಿಳೆಯರಾದ ಸೋಮಲಾಪುರದ ರೇಣುಕಮ್ಮ ಮತ್ತು ಇರಕ ಸಂದ್ರ ಗ್ರಾಮದ ಪವಿತ್ರ ಹಾಗೂ ಗಂಗಯ್ಯನ ಪಾಳ್ಯದ ಪಾರ್ವತಮ್ಮ ಸೇರಿದಂತೆ ನೂರಾರು ಬಡ ರೈತರನ್ನು ಅರಣ್ಯ ಇಲಾಖೆ ಸಾಕಷ್ಟು ಹಿಂಸಿಸಿದೆ. ಇವರ ವಿರುದ್ಧ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆಗಳನ್ನು ದಾಖಲಿಸಿ ಕಿರುಕುಳ ನೀಡಲಾಗಿದೆ. ಬಡ ದಲಿತ ಮಹಿಳೆಯರ ಮೇಲೂ ಅರಣ್ಯ ಇಲಾಖೆ ದೌರ್ಜನ್ಯ ನಡೆಇದೆ. ಇದು ರಾಜಕೀಯ ಪ್ರೇರಿತ ಮತ್ತು ಅಧಿಕಾರ ದುರುಪಯೋಗ ಕ್ರಮವಾಗಿದೆ ಎಂಬುದನ್ನು ಬಹಳ ಸ್ಪಷ್ಟವಾಗಿ ತೋರಿಸುತ್ತದೆ. ಇಂದಿಗೂ ಸಹ ಪಹಣಿ ಪತ್ರಗಳ ಪಟ್ಟಾ ಕಾಲಂಗಳಲ್ಲಿ 'ಸರ್ಕಾರ' ಎಂದಿದ್ದರೂ ಕಂದಾಯ ಅಧಿಕಾರಿಗಳು ಅದನ್ನು ಪರಿಗಣಿಸುತ್ತಿಲ್ಲ.

ಪರಿಹಾರವನ್ನೂ ಒದಗಿಸದೆ ಹಲವರನ್ನು ಅಲ್ಲಿಂದ ಒಕ್ಕಲೆಬ್ಬಿಸಲಾಗಿದೆ.

ಹೀಗೆ ರೈತರಿಂದ ವಶಪಡಿಸಿಕೊಂಡ ಭೂಮಿಗೆ ಅರಣ್ಯ ಇಲಾಖೆಯವರು ಬೇಲಿ ಹಾಕುತ್ತಾರೆ. ರೈತರು ತಮ್ಮದೇ ಸಾಗುವಳಿ ಜಮೀನಿಗೆ ಹೋಗದಂತೆ ತಡೆಯುತ್ತಾರೆ. ಇದರಿಂದ ಹತ್ತಾರು ವರ್ಷಗಳ ಕಾಲ ಈ ಜಮೀನಿನಲ್ಲಿ ಕೃಷಿ ಮಾಡಿಕೊಂಡು ಬದುಕು ಕಟ್ಟಿಕೊಂಡಿದ್ದ ಬಡ ರೈತರ ಕುಟುಂಬಗಳು ಸಂಕಷ್ಟದ ಸುಳಿಗೆ ಸಿಲುಕುತ್ತವೆ.

ಸಕ್ರಮಕ್ಕೆ ಅರ್ಜಿ ಆಹ್ವಾನಿಸಲಾಗಿತ್ತು

ರಾಜ್ಯದ ಬಗರ್ ಹುಕುಂ ಸಾಗುವಳಿದಾರರು ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ನಿರಂತರ ಹೋರಾಟಕ್ಕೆ ಮಣಿದ ಈ ಹಿಂದಿನ ಸಿದ್ಧರಾಮಯ್ಯ ನೇತೃತ್ವದ ರಾಜ್ಯ ಸರಕಾರ, ಸಾಗುವಳಿದಾರರಿಂದ ಬಗರ್ ಹುಕುಂ ಜಮೀನು ಸಕ್ರಮಕ್ಕೆ ಅರ್ಜಿ ಆಹ್ವಾನಿಸಿತ್ತು. ಇದರ ಭಾಗವಾಗಿ ರಾಜ್ಯ ಸರ್ಕಾರ ಕಂದಾಯ ಕಾಯ್ದೆಗೆ ತಿದ್ದುಪಡಿ ಮಾಡಿ, ಹಕ್ಕು ಪತ್ರಕ್ಕಾಗಿ ಫಾರಂ 57 ನಮೂನೆಯಲ್ಲಿ ಅರ್ಜಿ ಸಲ್ಲಿಸುವಂತೆ ಬಗರ್ ಹುಕುಂ ಸಾಗುವಳಿದಾರರಿಗೆ ಹೇಳಿತ್ತು.

ಅದಕ್ಕೂ ಮುಂಚೆ, ಅದರ ಹಿಂದಿನ ಸರಕಾರಗಳು ಫಾರಂ. 50, 51, 53ರಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಿದ್ದವು . ಅದರಂತೆ ಕಳೆದ ಹಲವಾರು ದಶಕಗಳಿಂದ ಸಾಗುವಳಿಯಲ್ಲಿ ತೊಡಗಿರುವ ಚೇಳೂರು ಹೋಬಳಿಯ ಎಲ್ಲಾ ರೈತರು ಸರ್ಕಾರಕ್ಕೆ ಅರ್ಜಿಗಳನ್ನು ಸಲ್ಲಿಸಿದ್ದರು. ಇಂದಿಗೂ ಈ ಎಲ್ಲಾ ಅರ್ಜಿಗಳು ವಿಲೇವಾರಿ ಆಗದೇ ನಿಂತಲ್ಲೇ ನಿಂತಿವೆ.

ಅನಿರ್ಧಿಷ್ಟ ಕಾಲದ ಸಂಘಟಿತ ಹೋರಾಟ

ಸರ್ಕಾರದ ಈ ದೌರ್ಜನ್ಯದಿಂದ ತೀವ್ರವಾಗಿ ನೋವನ್ನು ಅನುಭವಿಸಿದ್ದ ರೈತರು ತಮ್ಮ ಉಳಿಮೆ ಭೂಮಿಯನ್ನು ಮತ್ತೆ ಪಡೆಯಲು ಹೋರಾಟದ ಮಾರ್ಗ ಅನುಸರಿದರು. ಹಲವು ವರ್ಷಗಳ ಕಾಲ

ಪುಟ 10 ಕ್ಕೆ



ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗ ಕೊಲೆಗೆ 7 ವರ್ಷ

ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾ ಕೊಲೆ ನಡೆದು ಮಾರ್ಚ್ 21ಕ್ಕೆ 7 ವರ್ಷಗಳಾದವು. ಕೊಲೆ ಪ್ರಕರಣದ ನ್ಯಾಯಾಂಗ ತನಿಖಾ ಪ್ರಕ್ರಿಯೆ ಈಗಷ್ಟೇ ಆರಂಭಗೊಂಡಿದೆ. ಕೊಲೆಯಾದವರು ಬಿಜೆಪಿ ಪಕ್ಷದ ಬೆಂಬಲಿಗನಾಗಿದ್ದರೂ ಯಾವೊಬ್ಬ ಶಾಸಕ ಸಂಸದರು ಆತನ ಮನೆಗೆ ಭೇಟಿ ನೀಡಿರುವುದಿಲ್ಲ. ಆತನ ಕುಟುಂಬಕ್ಕೆ ಯಾವ ಪರಿಹಾರವನ್ನು ಒದಗಿಸಿಲ್ಲ. ಕಳೆದ 7 ವರ್ಷಗಳಿಂದಲೂ ಪ್ರತೀ ಮಾರ್ಚ್ 21ಕ್ಕೆ ಮಂಗಳೂರಿನ ಸಮಾನಮನಸ್ಕರು ದೇಶಪ್ರೇಮಿ ಸಂಘಟನೆಗಳ ಒಕ್ಕೂಟದ ಹೆಸರಲ್ಲಿ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸುತ್ತಿದ್ದಾರೆ. ಅದರಂತೆ ಈ ಮಾರ್ಚ್ 21ರಂದು ಮಂಗಳೂರು ರಥಬೀದಿಯಿಂದ ವಿನಾಯಕ ಬಾಳಿಗರ ಮನೆಯವರೆಗೆ ಕಾಲ್ನಡಿಗೆ ಜಾಥಾ ನಡೆಯಿತು.

ಪ್ರತಿಭಟನೆಯ ಆರಂಭಕ್ಕೂ ಮೊದಲು ಪ್ರತಿಭಟನಾಕಾರರನ್ನು ಉದ್ದೇಶಿಸಿ ಖ್ಯಾತ ವಿಚಾರವಾದಿ ಪ್ರೊ.ನರೇಂದ್ರ ನಾಯಕ್, ಖ್ಯಾತ ಮನೋವೈದ್ಯ ಉಡುಪಿಯ ಡಾ.ಪಿ.ವಿ.ಭಂಡಾರಿ, ಖ್ಯಾತ ಸಮಾಜಸೇವಕ ಗುರುವಾಯನಕೆರೆಯ ಸೋಮನಾಥ ನಾಯಕ್, ದಸಂಸ ಹಿರಿಯ ನಾಯಕ ಎಂ.ದೇವದಾಸ್ ಮಾತನಾಡಿದರು.

ಡಿವೈಎಫ್‌ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಪ್ರತಿಭಟನಾ ಪ್ರದರ್ಶನದಲ್ಲಿ ಬಾಳಿಗಾ ಸಹೋದರಿಯರು, ಡಿವೈಎಫ್‌ಐನ ಬಿ.ಕೆ.ಇಮ್ತಿಯಾಜ್, ನವೀನ್ ಕೊಂಚಾಡಿ, ಜಗದೀಶ್ ಬಜಾಲ್, ದಯಾನಂದ ಶೆಟ್ಟಿ, ದಸಂಸ ಮುಖಂಡ ರಘು ಎಕ್ಕಾರು, ಸಿಐಟಿಯುವಿನ ಸುನಿಲ್ ಕುಮಾರ್ ಬಜಾಲ್, ಯೋಗೀಶ್ ಜಪ್ಪಿನಮೊಗರು, ಸಾಮರಸ್ಯ ಮಂಗಳೂರಿನ ಮಂಜುಳಾ ನಾಯಕ್, ಗುರುವಾಯನಕೆರೆ ನಾಗರಿಕ ಸೇವಾ ಟ್ರಸ್ಟ್‌ನ ವಿದ್ಯಾ ನಾಯಕ್, ಸಮುದಾಯದ ವಾಸುದೇವ ಉಚ್ಚಿಲ್, ಜೆಎಂಎಸ್‌ನ ಭಾರತಿ ಬೋಳಾರ್ ಭಾಗವಹಿಸಿದ್ದರು.



ಸಿಪಿಐ(ಎಂ) ಮುಖಂಡ ಲೋಕಯ್ಯ ಶೆಟ್ಟಿ ನಿಧನ:

ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಸದಸ್ಯರಾಗಿದ್ದ ಲೋಕಯ್ಯ ಶೆಟ್ಟಿ ಮಾರ್ಚ್ 21 ರಂದು ನಿಧನರಾಗಿದ್ದಾರೆ. ಅವರಿಗೆ 84 ವರ್ಷ ವಯಸ್ಸಾಗಿತ್ತು. ಲೋಕಯ್ಯ ಶೇಟ್ಟಿಯವರು ಎಸ್.ಕೆ.ಟೈಲ್ ವರ್ಕರ್ಸ್ ಯೂನಿಯನ್‌ನ ಪದಾಧಿಕಾರಿಯಾಗಿ, ಮಂಗಳೂರು ಬೀಡಿ ಯೂನಿಯನ್ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಪಕ್ಷದ ನಗರ ಸಮಿತಿಯಲ್ಲಿ ಹಲವು ವರ್ಷ ಕಾರ್ಯ ನಿರ್ವಹಿಸಿದ್ದಾರೆ.

ಪಕ್ಷದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಜಿಲ್ಲಾ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಸುಕುಮಾರ್, ಸಂತೋಷ್ ಬಜಾಲ್ ಮೃತರ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಿ ಸಂತಾಪ ಸೂಚಿಸಿದರು.

ಗಂಗಯ್ಯನಪಾಳ್ಯ: ಬಗರ್ ಹುಕುಂ ಭೂಮಿಯಿಂದ ಅರಣ್ಯ ಇಲಾಖೆಯನ್ನು ಹೊರದಬ್ಬಿದ ರೈತರು

ಪುಟ 9 ರಿಂದ

ವಿವಿಧ ರೀತಿಯ ಹೋರಾಟಗಳನ್ನು ನಡೆಸಿ, ತಮ್ಮ ಭೂಮಿಯನ್ನು ತಮಗೆ ಮರಳಿಸಬೇಕು ಎಂದು ಒತ್ತಾಯಿಸಿದರೂ ಅರಣ್ಯ ಇಲಾಖೆಯಾಗಲೀ, ಸರ್ಕಾರ ಅಥವಾ ಜನಪ್ರತಿನಿಧಿಗಳಾಗಲೀ ರೈತರ ಮನವಿಗೆ ಕಿವಿಗೊಡಲಿಲ್ಲ. ಇದರಿಂದ ಬೇಸತ್ತ ರೈತರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಹೋರಾಟಕ್ಕೆ ಮುಂದಾದರು. ನಿರಂತರ ಒಂದು ತಿಂಗಳ ಹೋರಾಟ ನಡೆಸಿದರೂ ಸರ್ಕಾರ ರೈತರ ಮನವಿಗಳಿಗೆ ಕಿವಿಗೊಡಲಿಲ್ಲ. ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲು ನಿರ್ಧರಿಸಿದರು. ಭೂಮಿ ಕಳೆದುಕೊಂಡ ರೈತರು ಸಂಘಟಿತರಾಗಿ, 2023ರ ಮಾರ್ಚ್ 17ರಂದು ಅನಿರ್ದಿಷ್ಟ ಕಾಲದ ಹೋರಾಟಕ್ಕೆ ದುಮುಕಿದರು. ಕೆಂಬಾವುಟ ಹಿಡಿದ ನೂರಾರು ರೈತರು ಅರಣ್ಯ ಇಲಾಖೆ ವಶಕ್ಕೆ ಪಡೆದ ತಮ್ಮ ಸಾಗುವಳಿ ಭೂಮಿಯಲ್ಲಿ ಟೆಂಟ್ ನಿರ್ಮಿಸಿಕೊಂಡು ಹೋರಾಟಕ್ಕೆ ಇಳಿದರು. ಟೆಂಟ್‌ಗಳ ಮೇಲೆ ಕೆಂಬಾವುಟಗಳು ಹಾರಾಡುತ್ತಿದ್ದವು. ಇದು 75 ವರ್ಷಗಳ ಹಿಂದೆ ಭೂಮಿಗಾಗಿ ಹೋರಾಟ ನಡೆಸಿದ 'ತೆಲಂಗಾಣ ರೈತರ ಹೋರಾಟ' ಎಂದೇ ಪ್ರಸದ್ಧವಾದ ಆಂದ್ರದ ರೈತರ ಹೋರಾಟವನ್ನು ನೆನಪಿಸುವಂತಿತ್ತು.

ಪೊಲೀಸ್ ಅಧಿಕಾರಿಯಿಂದ ಕೊಲೆ ಬೆದರಿಕೆ

ರೈತರು ಹೋರಾಟ ತೀವ್ರವಾಗುತ್ತಿದ್ದಂತೆ ಹೇಗಾದರೂ ಮಾಡಿ ಹೋರಾಟವನ್ನು ಹತ್ತಿಕ್ಕಬೇಕು ಎಂಬ ನಿರ್ಧಾರಕ್ಕೆ ಬಂದ ಅರಣ್ಯ ಇಲಾಖೆ ಮತ್ತು ಪೊಲೀಸರು, ಹೋರಾಟ ನಿರತರನ್ನು ಬೆದರಿಸಲು ಮುಂದಾದರು. ಹೋರಾಟನಿರತ ರೈತರ ಮೇಲೆ ದಾಳಿ ದಬ್ಬಾಳಿಕೆ ನಡೆಸಿದರು. ರೈತರು ತಮ್ಮ ಸಾಗುವಳಿ ಜಮೀನಿಗೆ ಬರಬಾರದು, ಒಂದು ವೇಳೆ ಬಂದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪೊಲೀಸರು ತಮ್ಮ ವಾಹನದಲ್ಲಿ ಮೈಕ್ ಮೂಲಕ ಪ್ರಚಾರ ಮಾಡುತ್ತ ರೈತರಲ್ಲಿ ಭಯ ಹುಟ್ಟಿಸುವ ಪ್ರಯತ್ನ ಮಾಡಿದರು. ರೈತರ ಹೋರಾಟದಲ್ಲಿ ಸ್ವತಃ ಭಾಗಿಯಾಗಿ ಹೋರಾಟಕ್ಕೆ ನೇತೃತ್ವ ನೀಡಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ. ಯಶವಂತ ಅವರಿಗೆ ಚೇಳೂರು ಪೊಲೀಸ್ ಠಾಣೆಯ ಸಬ್ ಇನ್ಸ್ಪೆಕ್ಟರ್ ಮಂಜುನಾಥ್, ತನ್ನ ಸಿಬ್ಬಂದಿಯೊಬ್ಬರ ಮೊಬೈಲ್ ಮೂಲಕ ಮಾತನಾಡುವ ವೇಳೆ ಕೊಲೆ ಬೆದರಿಕೆ ಹಾಕಿದರು. ಆ ಮೂಲಕ ಹೋರಾಟದಿಂದ ಹಿಂದೆ ಸರಿಸುವ ಪ್ರಯತ್ನ ಮಾಡಿದರು. ಅರಣ್ಯ ಇಲಾಖೆ ಮತ್ತು ಪೊಲೀಸರ ಇಂತಹ ಬೆದರಿಕೆಗಳಿಗೆ ಬಗ್ಗದೆ ಹೋರಾಟ ಮುಂದುವರಿಯಿತು.

ಇದೇ ಸಂದರ್ಭದಲ್ಲಿ ಹಲವು ರೈತ ಮುಖಂಡರನ್ನು ಪೊಲೀಸರು ಬಂದಿಸಿ ಕರೆದೊಯ್ದರು. ಇದರಿಂದ ರೊಚ್ಚಿಗೆದ್ದ ಸಾವಿರಾರು ರೈತರು ಚೇಳೂರು ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ರಾಜ್ಯದಾದ್ಯಂತ ಪ್ರತಿಭಟನೆಗೆ ಸಿದ್ದತೆ

ಹೋರಾಟನಿರತ ರೈತರ ಮೇಲೆ ಅರಣ್ಯ ಮತ್ತು ಪೊಲೀಸ್ ಇಲಾಖೆಯವರ ದಾಳಿ ಹೆಚ್ಚುತ್ತಿದ್ದಂತೆ ಪ್ರಾಂತ ರೈತ ಸಂಘ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲು ತನ್ನ ಘಟಕಗಳಿಗೆ ಕರೆನೀಡಿತು. ಅಧಿಕಾರ ದುರುಪಯೋಗ ಮಾಡಿಕೊಂಡು ಹೋರಾಟನಿರತ ರೈತರಿಗೆ ಬೆದರಿಕೆ ಹಾಕಿದ ಅಧಿಕಾರಿಗಳನ್ನು ಕೆಲಸದಿಂದ ವಜಾ ಮಾಡಬೇಕೆಂದು ಒತ್ತಾಯಿಸಿ ಮತ್ತು ಸರ್ಕಾರದ ದೌರ್ಜನ್ಯ ಖಂಡಿಸಿ ಹಾಗೂ ಚೇಳೂರು ಹೋಬಳಿಯ ಬಡ ಸಾಗುವಳಿದಾರರನ್ನು ರಕ್ಷಿಸುವಂತೆ ಒತ್ತಾಯಿಸಿ ರಾಜ್ಯದಾದ್ಯಂತ ಮಾರ್ಚ್ 27ರಂದು ಎಲ್ಲಾ ತಾಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘ ಸಿದ್ದತೆ ಮಾಡಿಕೊಂಡಿತ್ತು.

ರೈತರ ಹೋರಾಟ ಮತ್ತಷ್ಟು ತೀವ್ರವಾಗುವುದನ್ನು ಅರಿತ ಸರ್ಕಾರ ರೈತರ ಬೇಡಿಕೆಗಳನ್ನು ಈಡೇರಿಸಲು ಮುಂದಾಯಿತು. ತಹಸಿಲ್ದಾರ್ ರೈತರ ಬೇಡಿಕೆಗಳನ್ನು ಒಪ್ಪಿಕೊಂಡು, ಈ ಹಿಂದೆ ಸಾಗುವಳಿ ಮಾಡುತ್ತಿದ್ದ ರೈತರಿಗೆ ಜಮೀನು ಹಿಂತಿರುಗಿಸಲು ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ಅಂತಿಮವಾಗಿ ರೈತರು ತಮ್ಮ ಸಾಗುವಳಿ ಭೂಮಿಯಿಂದ ಅರಣ್ಯ ಇಲಾಖೆಯನ್ನು ಹೊರ ಹಾಕುವಲ್ಲಿ ಯಶಸ್ವಿಯಾಗಿದ್ದಾರೆ. ರೈತರು ತಮ್ಮ ಸಾಗುವಳಿ ಭೂಮಿಯನ್ನು ಮರಳಿ ಪಡೆಯುವಲ್ಲಿ ಒಂದು ದೊಡ್ಡ ವಿಜಯವನ್ನು ಸಾಧಿಸಿದ್ದಾರೆ.

ಹೋರಾಟ ಮುಂದುವರಿಯುತ್ತದೆ


ರೈತರು ತಮ್ಮ ಸಾಗುವಳಿ ಭೂಮಿಯಿಂದ ಅರಣ್ಯ ಇಲಾಖೆಯನ್ನು ಹೊರ ಹಾಕಿದ್ದಾರೆ. ಆದರೆ, ಕಂದಾಯ ಇಲಾಖೆಯಿಂದ ಅಕ್ರಮವಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಿರುವ ಈ ಎಲ್ಲಾ ಜಮೀನುಗಳು ಇನ್ನೂ ಅರಣ್ಯ ಇಲಾಖೆಯ ವಶದಲ್ಲೇ ಇವೆ. ಇವುಗಳನ್ನು ಕಂದಾಯ ಇಲಾಖೆಗೆ ವಾಪಸ್ಸು ಪಡೆಯಬೇಕಿದೆ. ಇದಕ್ಕಾಗಿ ಸರ್ಕಾರದ ಮೇಲೆ ಒತ್ತಡ ಹೇರುವ ಹೋರಾಟ ಮಾಡಬೇಕಾಗುತ್ತದೆ. ಇದಕ್ಕಾಗಿ ರೈತರು ತಮ್ಮ ಹೋರಾಟವನ್ನು ಮುಂದುವರೆಸಲು ರೈತರು ನಿರ್ಧರಿಸಿದ್ದಾರೆ. ಅರಣ್ಯ ಇಲಾಖೆಯಿಂದ ವಿವಿಧ ರೀತಿಯ ಕಿರುಕುಳ, ದೌರ್ಜನ್ಯ, ಹಿಂಸೆ ಅನುಭವಿಸಿರುವವರ ಗ್ರಾಮವಾರು ಪಟ್ಟಿ ಸಿದ್ದಪಡಿಸಲಾಗುವುದು. ಪರಿಶಿಷ್ಟ ಜಾತಿ, ಪಂಗಡದ ಜನರ ಮೇಲಿನ ದೌರ್ಜನ್ಯವನ್ನು ಎಸ್‌ಸಿ/ಎಸ್‌ಟಿ ಆಯೋಗಕ್ಕೂ, ಇತರೆ ಹಿಂದುಳಿದ ಜನ ಸಮುದಾಯದ ಜನರ ಮೇಲಿನ ದೌರ್ಜನ್ಯ ವನ್ನು ಮಾನವ ಹಕ್ಕುಗಳ ಆಯೋಗಕ್ಕೂ, ಮಹಿಳೆಯರ ಮೇಲಿನ ಹಿಂಸೆಯನ್ನು ಮಹಿಳಾ ಆಯೋಗಕ್ಕೂ ಸಲ್ಲಿಸಿ ಸಂಬಂಧಿಸಿದವರ ಮೇಲೆ ಕಾನೂನು ಕ್ರಮಕ್ಕೆ ಹಾಗೂ ನೊಂದವರಿಗೆ ಸೂಕ್ತ ಪರಿಹಾರಕ್ಕೆ ಆಗ್ರಹಿಸಲಾಗುವುದು. **–ನಮ್ಮ ವರದಿಗಾರ**

ಈರುಳ್ಳಿ ಬೆಲೆ ಕುಸಿತ! ರಸಗೊಬ್ಬರ ಬೆಲೆ ಏರಿಕೆ!... ಪುಟ 8 ರಿಂದ

ಅದನ್ನು ಖರೀದಿಸಲು ರೈತರು 3.5 ಪಟ್ಟು ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಇದು ಸರಕಾರ ನಿಗದಿಪಡಿಸಿದ ದರವಾಗಿದ್ದರೆ, ಕಾಳಸಂತೆಯಲ್ಲಿ ಹಾಗೂ ರಸಗೊಬ್ಬರದ ಕೊರತೆಯಿಂದಾಗಿ ಖಾಸಗಿ ಗೊಬ್ಬರದ ಅಂಗಡಿಗಳಿಂದ ಗೊಬ್ಬರದ ನಿಗದಿತ ಬೆಲೆಗಿಂತ 5ರಿಂದ 6 ಪಟ್ಟು ಹೆಚ್ಚು ಹಣ ನೀಡಬೇಕಾಗಿದೆ. ಇದನ್ನು ತಡೆಯುವ ಬದಲು ಒಂದೇ ಹೆಸರಿನಲ್ಲಿ ದೇಶಾದ್ಯಂತ ರಸಗೊಬ್ಬರ ದೊರೆಯುವಂತೆ ಮಾಡುವ ವಿನೂತನ(!) ಯೋಜನೆಯನ್ನು ಪ್ರಧಾನಿ ಘೋಷಿಸಿದ್ದಾರೆ. ನಂತರವೂ ರಸಗೊಬ್ಬರಗಳ ಕೊರತೆ ಎದುರಾಗಿದೆ. ಬೆಲೆಯೂ ಏರಿಕೆಯಾಗಿದೆ.

ಮಾತಿನಲ್ಲೇ ಸ್ವರ್ಗ ತೋರಿಸುವ ಮೋದಿ

ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿ ಕಾರ್ಯಕ್ರಮದಲ್ಲೂ ರೈತರ ಹೊಸ ಬದುಕಿನ ಬಗ್ಗೆ ಮಾತನಾಡುತ್ತಿರುತ್ತಾರೆ. ಮಾತಿನಲ್ಲೇ ರೈತರಿಗೆ ಸ್ವರ್ಗ ತೋರಿಸುತ್ತಾರೆ. ಮೂರು ಕೃಷಿ ಕಾಯ್ದೆಗಳನ್ನು ತಂದಾಗಲೂ ಅವರು ಇದೇ ರೀತಿ ಮಾತನಾಡಿದ್ದರು. ಒಂಬತ್ತು ವರ್ಷಗಳ ಬಿಜೆಪಿ ಆಡಳಿತದಲ್ಲಿ ಕೃಷಿ ವೆಚ್ಚ ಎಷ್ಟೊಂದು ಹೆಚ್ಚಾಗಿದೆ, ರೈತರು ಕೃಷಿಗೆ ಎಷ್ಟು ಹಣ ವೆಚ್ಚ ಮಾಡಬೇಕು ಎಂಬುದಕ್ಕೆ ರಸಗೊಬ್ಬರ ಬೆಲೆ ಹೆಚ್ಚಳ ಒಂದು ಉದಾಹರಣೆ.



ಉರಿಗೌಡ, ನಂಜೇಗೌಡ ಐತಿಹಾಸಿಕ ವ್ಯಕ್ತಿಗಳೋ, ಕಾಲ್ಪನಿಕವೊ?



ಇತ್ತೀಚೆಗೆ ಉರಿಗೌಡ ಮತ್ತು ನಂಜೇಗೌಡ ಸಹೋದರರ ಕುರಿತು ಬಹಳಷ್ಟು ಚರ್ಚೆಗಳು ನಡೆಯುತ್ತಿವೆ. ಈ ಸಹೋದರರು ಟಿಪ್ಪೂ ಸುಲ್ತಾನನನ್ನು ಕೊಂದರು ಎಂಬ ಸಂಘಪರಿವಾದ ಹೇಳಿಕೆ ಸಾಕಷ್ಟು ವಿವಾದಕ್ಕೆ ಕಾರಣವಾಗಿದೆ. ಬ್ರಿಟೀಷರ ವಿರುದ್ದ ನಡೆದ ಯುದ್ದದಲ್ಲಿ ಟಿಪ್ಪೂ ಹತ್ಯೆಗೀಡಾದ ಎಂಬುದು ಇತಿಹಾಸದಲ್ಲಿ ದಾಖಲಾಗಿದೆ. ಉರಿಗೌಡ ಮತ್ತು ನಂಜೇಗೌಡ ಹಿಂದುತ್ವವಾದಿಗಳ ಕಟ್ಟುಕತೆ, ಇದು ಮಂಡ್ಯ ಜಿಲ್ಲೆಯಲ್ಲಿ ಹಿಂದುತ್ವದ ಬೆಳೆ ಬೆಳೆಯಲು ಮತ್ತು ಒಕ್ಕಲಿಗರನ್ನು ತನ್ನಡೆ ಸೆಳೆಯಲು ಬಿಜೆಪಿ ಮಾಡುತ್ತಿರುವ ಪ್ರಯತ್ನ ಎಂದು ಹಲವರು ಆರೋಪಿಸುತ್ತಿದ್ದಾರೆ. ಬ್ರಿಟೀಷರ ವಿರುದ್ಧ ಹೋರಾಡಿದ ಟಿಪ್ಪುವನ್ನು ಒಕ್ಕಲಿಗ ವೀರರು ಕೊಂದರು ಎಂದು ಹೇಳುವ ಮೂಲಕ, ಒಕ್ಕಲಿಗ ಸಮುದಾಯ ಬ್ರಿಟೀಷರ ಆಳ್ವಿಕೆಯ ಪರವಾಗಿದ್ದರು ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಒಕ್ಕಲಿಗರ ಬೆಂಬಲವಿರಲಿಲ್ಲ ಎಂದು ಬಿಂಬಿಸುವ ಹಿಂದುತ್ವವಾದಿಗಳ ಇಂತಹ ಕಟ್ಟುಕತೆ ಬಹಳಷ್ಟು ಒಕ್ಕಲಿಗ ಸಮುದಾಯದವರನ್ನು ಕೆರಳಿಸಿತ್ತು.

ಈ ವಿಷಯವನ್ನು ಸಂಘಪರಿವಾರದವರು ಮೊದಲಿಗೆ ಸಾಮಾಜಿಕ ಜಾಲತಾಣದಲ್ಲಿ ಅರಿಯಬಿಡುತ್ತಾರೆ. ಅಲ್ಲಿ ಇದು ಸಾಕಷ್ಟು ಪರ, ವಿರೋಧ ಚರ್ಚೆಗಳಾಗುತ್ತದೆ. ನಾವು ಹೇಳುವುದೇ ಸತ್ಯ ಎಂದು ನಂಬಿಸಲು ಹಿಂದುತ್ವವಾದಿಗಳು ಹೊಸ ಹೊಸ ಕತೆಗಳನ್ನು ಕಟ್ಟತೊಡಗುತ್ತಾರೆ. ಲಾವಣಿಯೊಂದನ್ನು ತೋರಿಸಿ ತಮ್ಮ ಹೇಳಿಕೆಗೆ ಇದೇ ಸಾಕ್ಷಿಎಂಬಂತೆ ವಾದಮಾಡುತ್ತಾರೆ.

ಸ್ವಾಗತ ಕಮಾನಿನಲ್ಲಿ ಪೋಟೋಗಳು

ತಮ್ಮ ಪ್ರಚಾರದ ಮುಂದುವರಿದ ಭಾಗವಾಗಿ ಸಂಘಪರಿವಾರ ಬೆಂಗಳೂರು–ಮೈಸೂರು ಹೆದ್ದಾರಿ ಉದ್ಘಾಟನೆ ವೇಳೆ ಸ್ವಾಗತ ಕಮಾನೊಂದರಲ್ಲಿ ಉರಿಗೌಡ, ನಂಜೇಗೌಡರದು ಎನ್ನಲಾದ ಭಾವಚಿತ್ರಗಳನ್ನು ಹಾಕುತ್ತಾರೆ. ಜನರ ಸಾಕಷ್ಟು ವಿರೋಧದ ಕಾರಣದಿಂದ ಆ ಕಮಾನನ್ನು ಅದೇ ದಿನ ಮಧ್ಯರಾತ್ರಿ ತೆರೆಯಲಾಗುತ್ತದೆ.

ಇಷ್ಟಕ್ಕೇ ನಿಲ್ಲದ ಸಂಘಪರಿವಾರ, ಉರಿಗೌಡ, ನಂಜೇಗೌಡ ಸಹೋದರರು ಟಿಪ್ಪುವನ್ನು ಕೊಂದರು ಎಂಬ ಕತೆಯನ್ನು ಸಿನಿಮಾ ಮಾಡುವುದಾಗಿ ಹೇಳುತ್ತಾರೆ. ಚಿತ್ರ ನಿರ್ಮಾಪಕರೂ ಆಗಿರುವ ರಾಜ್ಯ ಬಿಜೆಪಿ ಸರ್ಕಾರದ ಸಚಿವ ಮುನಿರತ್ನ ತಾನೇ ಸಿನಿಮಾ ನಿರ್ಮಿಸುವುದಾಗಿ ಘೋಷಿಸುತ್ತಾರೆ. ಇದು ಒಕ್ಕಲಿಗ ಸಮುದಾಯವನ್ನು ಮತ್ತಷ್ಟು ಕೆರಳಿಸುತ್ತದೆ. ನಂತರ ನಿರ್ಮಲಾನಂದ ಸ್ವಾಮೀಜಿಯವರ ಸೂಚನೆ ಮೇರೆಗೆ ಮುನಿರತ್ನ ಅವರು ಸಿನಿಮಾ ನಿರ್ಮಾಣ ಮಾಡುವುದನ್ನು ಕೈಬಿಟ್ಟಿದ್ದಾರೆ.

ಇದಿಷ್ಟು ಕರ್ನಾಟಕದಲ್ಲಿ ಕೆಲವು ದಿನಗಳಿಂದೀಚೆಗೆ ನಡೆಯುತ್ತಿರುವ ವಿದ್ಯಮಾನಗಳು. ಸಂಘಪರಿವಾರದವರು ಹೇಳುವ ಈ ಕತೆ ಸತ್ಯವೇ? ಇದನ್ನು ವಿರೋಧಿಸುವವರು ಹೇಳುವಂತೆ ಉರಿಗೌಡ ಮತ್ತು ನಂಜೇಗೌಡ ಹಿಂದುತ್ವವಾದಿಗಳ ಕಾಲ್ಪನಿಕ ವ್ಯಕ್ತಿಗಳೇ? ಇದರ ಸುತ್ತಲೇ ಸುತ್ತುತ್ತಿದ್ದ ಚರ್ಚೆ, ಉರಿಗೌಡ ಮತ್ತು ನಂಜೇಗೌಡ ಎಂದು ಬಳಕೆಮಾಡಿದ ಚಿತ್ರಗಳಲ್ಲಿರುವ ವೀರರ ಮೂಲ ಬಹಿರಂಗವಾಗಿ ಚರ್ಚೆಯ ದಿಕ್ಕು ಬದಲಾಗುವಂತೆ ಮಾಡಿದೆ. ಇದೊಂದು ಕಟ್ಟುಕತೆ ಎಂದು ವಾದಿಸುವವರ ವಾದಕ್ಕೆ ಒಂದಷ್ಟು ಶಕ್ತಿ ಬಂದಂತಾಗಿದೆ. ಹಿಂದುತ್ವವಾದಿಗಳು ಮುಂದೆ ಯಾವ ಕತೆಕಟ್ಟುತ್ತಾರೋ ಏನೋ. ಆದರೆ, ಈ ಕತೆಯ ನಿಜಾಂಶ ಏನೆಂದು ಒಂದಷ್ಟು ಜನರಿಗೆ ಅರಿವಾಗಿದೆ ಎಂಬುದಷ್ಟೇ ಸಮಾಧಾನ.

ಮರುದು ಪಾಂಡಿಯಾರ್ ಚಿತ್ರಗಳವು:

ಹಿಂದುತ್ವವಾದಿಗಳು ಉರಿಗೌಡ, ನಂಜೇಗೌಡ ಎಂದು ಹೇಳುವ ಚಿತ್ರಗಳು ತಮಿಳುನಾಡಿನ ಮರುದು ಪಾಂಡಿಯಾರ್ ಸಹೋದರರ ಚಿತ್ರಗಳು. ಈ ಸಹೋದರರು 200 ವರ್ಷಗಳ ಹಿಂದೆ ಬ್ರಿಟೀಷರ ವಿರುದ್ದ ಹೋರಾಡಿ ಗಲ್ಲಿಗೇರಿಸಲ್ಪಟ್ಟ ವೀರರು. ಪೆರಿಯ ಮರುದು ಮತ್ತು ಚಿನ್ನ ಮರುದು ಸಹೋದರರು 'ಮರುದು ಪಾಂಡಿಯಾರ್' ಎಂದೇ ಕರೆಯಲ್ಪಡುತ್ತಾರೆ.



ಮರುದು ಸಹೋದರರು 24–10–1801 ರಂದು ತಿರುಪತ್ತೂರ್ ಕೋಟೆಯಲ್ಲಿ ಬ್ರಿಟೀಷರಿಂದ ಗಲ್ಲಿಗೇರಿಸಲ್ಪಟ್ಟು ವೀರ ಮರಣವನ್ನಪ್ಪಿದರು. ಮರುದರೊಂದಿಗೆ, ಅವರ ಎಲ್ಲಾ ಪುರುಷ ಉತ್ತರಾಧಿಕಾರಿಗಳನ್ನು (ಅಪ್ರಾಪ್ತ ಮರುದುವಿನ ಒಬ್ಬ ಮಗ "ದುರೈಚಾಮಿ" ಹೊರತುಪಡಿಸಿ) ಗಲ್ಲಿಗೇರಿಸಲಾಯಿತು. ಯಾವುದೇ ವಿಚಾರಣೆಯಿಲ್ಲದೆ 500 ಕ್ಕೂ ಹೆಚ್ಚು ಸ್ವಾತಂತ್ರ್ಯ ಹೋರಾಟಗಾರರನ್ನು ಗಲ್ಲಿಗೇರಿಸಲಾಯಿತು. ಮರುದು ಸಹೋದರರ ಅಪೇಕ್ಷೆಯಂತೆ ಅವರ ತಲೆಗಳನ್ನು ಕಲೈಯಾರ್ ದೇವಸ್ಥಾನದ ಮುಂದೆ ಹೂಳಲಾಯಿತು ಎಂದು ನಂಬಲಾಗಿದೆ. ಇಂದಿಗೂ ಶಿವಗಂಗೆ ಜಿಲ್ಲೆಯ ಕಲೈಯಾರ್ ದೇವಸ್ಥಾನದಲ್ಲಿ ಪೆರಿಯ ಮರುದು ಮತ್ತು ಚಿನ್ನ ಮರುದು ಅವರ ಸ್ಮಾರಕಗಳಿವೆ.

ಪೂಜಾ ಸ್ಥಳಗಳು ಮತ್ತು ಧಾರ್ಮಿಕ ಏಕತೆ

ಮರುದು ಸಹೋದರರ ಆಳ್ವಿಕೆಯು ಧಾರ್ಮಿಕ ಏಕತೆ ಮತ್ತು ಸಾಮರಸ್ಯಕ್ಕೆ ಹೆಸರುವಾಸಿಯಾಗಿದೆ. ಅವರು ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರಿಗೆ ಪೂಜಾ ಸ್ಥಳಗಳನ್ನು ನಿರ್ಮಿಸಿದರು. ಕಲೈಯಾರ್ ದೇವಸ್ಥಾನದ ಗೋಪುರವನ್ನು ನಿರ್ಮಿಸಿದರು, ಹಾಳಾಗಿದ್ದ ಕುನ್ರಕ್ಕುಡಿ ಮತ್ತು ತಿರುಮೊಗುರ್ ದೇವಸ್ಥಾನಗಳನ್ನು ದುರಸ್ತಿ ಮಾಡಿದರು. ಮನಮದುರೈ ಸೋಮೇಸರ್ ದೇವಾಲಯದ ಗೋಪುರವನ್ನು ನಿರ್ಮಿಸಿದರು. ಮರುದು ಪಾಂಡಿಯಾರ್ ಕೋರಿಕೆಯಂತೆ ಶಿವಗಂಗೆಯ ಕವಿ ವೇದಾಂತ ಸುಬ್ರಮಣ್ಯಂ ಈ ದೇವಾಲಯದ ಮಹಿಮೆಯ ಬಗ್ಗೆ 'ವಾನರ ವೀರ ಮಧುರೈ' ಪುರಾಣವನ್ನು ರಚಿಸಿದ್ದಾರೆ. ಪುಸ್ತಕದ ಅಂತಿಮ ಸ್ತೋತ್ರವು ಮರುದು ಸಹೋದರರನ್ನು "ಯಾತುಕುಲ ಮರುದು ಭೂಪನ್ ಮೈಂದಾರ್" ಎಂದು ಉಲ್ಲೇಖಿಸುತ್ತದೆ.

ಚಿನ್ನ ಮರುದು ರಾಜಕೀಯ ತಂತ್ರಗಾರ ಎಂದು ಸಾಬೀತಾಗಿದೆ. ಅವರು ತಂಜಾವೂರಿನಿಂದ ತಿರುನಲ್ವೇಲಿಯವರೆಗೆ ದೊಡ್ಡ ರಾಜಕೀಯ ಮೈತ್ರಿಯನ್ನು ಪ್ರಾರಂಭಿಸುವ ಮೂಲಕ ಬ್ರಿಟಿಷರ ವಿರುದ್ಧ ಹೋರಾಟವನ್ನು ಬಲಿಷ್ಟಗೊಳಿಸಿದರು.

1857 ರ ಸಿಪಾಯಿ ದಂಗೆಗೆ ಅರ್ಧ ಶತಮಾನದ ಮೊದಲು ಬ್ರಿಟೀಷರ ವಿರುದ್ದ ನಡೆಸಿದ ದಕ್ಷಿಣ ಭಾರತದ ಈ ಕ್ರಾಂತಿಯನ್ನು ಅನೇಕ ಇತಿಹಾಸಕಾರರು ಭಾರತದ ಮೊದಲ ಏಕೀಕೃತ ವಿಮೋಚನಾ ಹೋರಾಟವೆಂದು ಪರಿಗಣಿಸಿದ್ದಾರೆ.

ಇವರ ಸ್ಮರಣಾರ್ಥ ಅಂಚೆ ಚೀಟಿ:

ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಅವರ ನೇತೃತ್ವದ ಸರ್ಕಾರ 2004ರ ಅಕ್ಟೋಬರ್ 24ರಂದು ಮರುದು ಪಾಂಡಿಯಾರ್ ಸಹೋದರರಾದ ಪೆರಿಯ ಮರುದು ಮತ್ತು ಚಿನ್ನ ಮರುದು ಅವರ ಸ್ಮರಣಾರ್ಥ ಅಂಚೆಚೀಟಿ ಬಿಡುಗಡೆ ಮಾಡಿದೆ. ಇದಕ್ಕೂ ಮೊದಲು ತಿರುಪ್ಪತ್ತೂರಿನಲ್ಲಿ ಈ ಸಹೋದರರ ಸ್ಮಾರಕ ಸ್ತಂಭವನ್ನು ನಿರ್ಮಿಸಲಾಗಿದೆ.

ಮರುದು ಪಾಂಡಿಯಾರ್ ರ ಇತಿಹಾಸ:

ಜನನ: ತಮಿಳುನಾಡಿನ ಇಂದಿನ ವಿರುದುನಗರ ಜಿಲ್ಲೆಯ ನರಿಕುಡಿ ಸಮೀಪದ ಮುಕ್ಕುಳಂ ಎಂಬ ಹಳ್ಳಿಯ ಪಳನಿಯಪ್ಪನ್ ಸರ್ವೈ ಮತ್ತು ಅವರ ಪತ್ನಿ ಆನಂದಾಯಿ ಅವರ ಮಕ್ಕಳಾದ ಪೆರಿಯ ಮರುದು ಪಾಂಡ್ಯರ್ ಅವರು ಡಿಸೆಂಬರ್ 15, 1748 ರಂದು ಜನಿಸಿದರು. ಐದು ವರ್ಷಗಳ ನಂತರ, 20 ಏಪ್ರಿಲ್ 1753 ರಂದು, ಚಿನ್ನ ಮರುದು ಪಾಂಡ್ಯರ್ ಜನಿಸಿದರು. ಇಬ್ಬರೂ ಶಿವಗಂಗೆ ರಾಜ್ಯದ ರಾಜ ಮುತ್ತು ವಡುಗನಾಥರ್ ಸೈನ್ಯದಲ್ಲಿ ಸೈನಿಕರಾಗಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದರು. ಅವರ ಶೌರ್ಯವನ್ನು





ಮೆಚ್ಚಿದ ರಾಜ ಮುತ್ತು ವಡುಗನಾಥರ್ ತನ್ನ ಸೈನ್ಯದ ಪ್ರಮುಖ ಸ್ಥಾನಗಳಿಗೆ ಮರುದು ಸಹೋದರರನ್ನು ನೇಮಿಸುತ್ತಾನೆ.

1772 ರಲ್ಲಿ ಬ್ರಿಟೀಷರು ರಾಮನಾಥಪುರವನ್ನು ವಶಪಡಿಸಿಕೊಂಡ ನಂತರ, ಬ್ರಿಟೀಷರ ಸೈನ್ಯಪಡೆ ಶಿವಗಂಗೆಯ ಮೇಲೆ ದಾಳಿ ಮಾಡುತ್ತದೆ. ಈ ಅನಿರೀಕ್ಷಿತ ದಾಳಿಯಿಂದ, ರಾಜ ಮುತ್ತು ವಡುಗನಾಥರ್ ಕಲೈಯಾರ್ ದೇವಾಲಯದ ಯುದ್ಧದಲ್ಲಿ ಕೊಲ್ಲಲ್ಪಡುತ್ತಾರೆ. ನಂತರ, ರಾಜನ ಮಗಳು ವೇಲುನಾಚಿಯಾರ್ ಮತ್ತು ವೆಲ್ಲಾಚಿ, ಮಂತ್ರಿ ತಾಂಡವರಾಯನ್ ಪಿಳ್ಳೈ ಮತ್ತು ಮರುದು ಸಹೋದರರು ದಿಂಡಿಗಲ್ ಸಮೀಪದ ಕಾಡಿಗೆ ಓಡಿಹೋಗಿ ಮರೆಯಾಗುತ್ತಾರೆ.

1772 ರಲ್ಲಿ ಕಾಡಿನಲ್ಲಿ ಭೂಗತರಾಗಿ ವಾಸಿಸುತ್ತಿದ್ದ ಮರುದು ಸಹೋದರರು 1779 ರಲ್ಲಿ ಬ್ರಿಟೀಷರ ವಿರುದ್ದ ದಂಗೆಗೆ ಮುಂದಾಗುತ್ತಾರೆ. ಬ್ರಿಟೀಷರ ಸಾಮಂತ ರಾಜುರುಗಳಾದ ಆರ್ಕಾಟ್ ನವಾಬ್, ತೊಂಡೈಮಾನ್ ಮತ್ತು ಕುಂಬಿನಿಯಾರ್ ಅವರ ಪಡೆಗಳನ್ನು ಗೆರಿಲ್ಲಾ ಪಡೆ ಸೋಲಿಸುತ್ತದೆ. 1780 ರಲ್ಲಿ ಅವರು ಶಿವಗಂಗಾ ಪ್ರದೇಶವನ್ನು ವಶಪಡಿಸಿಕೊಂಡು ವೇಲು ನಾಚಿಯಾರ್ ಅವರನ್ನು ಸಿಂಹಾಸನದಲ್ಲಿ ಕೂರಿಸುತ್ತಾರೆ. ಈ ಯುದ್ಧವು ಚೋಳವಂದನ್ ನಿಂದ ಪ್ರಾರಂಭವಾಗಿ ಸಿಲ್ಲಮನ್, ಮಣಲೂರ್, ತಿರುಪ್ಪುವನಂ, ಮುತಾನೆಂದಲ್ ವರೆಗೆ ಸಾಗುತ್ತದೆ. ಅಂತಿಮವಾಗಿ ಮನಮದುರೈನಲ್ಲಿ ಯಾವುದೇ ಮಿಲಿಟರಿ ತರಬೇತಿಯಿಲ್ಲದ, ಸ್ವಾತಂತ್ರ್ಯ ಬಯಸುತ್ತಿದ್ದ ಜನರ ಸಹಾಯದಿಂದ ಯುದ್ಧವನ್ನು ಗೆಲ್ಲುತ್ತಾರೆ.. ಪಶ್ಚಿಮ ದಿಂಡಿಗಲ್ ನಿಂದ ಹೈದರ್ ಅಲಿ ಸಮಯೋಚಿತವಾಗಿ ಆಗಮಿಸಿದ್ದು ಕೂಡ ಮರುದು ಪಾಂಡಿಯಾರ್ ಅವರ ಪಡೆಯ ಗೆಲುವಿಗೆ ನೆರವಾಯಿತು.

ಮರುದು ಪಾಂಡಿಯಾರ್ ಸಹೋದರರು ಬ್ರಿಟಿಷರ ವಿರುದ್ಧ ತಮಿಳುನಾಡಿನಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಪ್ರಾರಂಭಿಸಿದ ಮೊದಲಿಗರು ಎಂದು ಹೇಳಲಾಗುತ್ತಿದೆ. ಶಿವಗಂಗೆ ಜಿಲ್ಲೆಯ ಕಾಳಯರ್ ಕೋಯಿಲ್ ಅವರ ಸ್ಥಳವಾಗಿತ್ತು. ಇವರು 1785 ರಿಂದ 1801 ರ ಅಂತ್ಯದವರೆಗೆ ಬ್ರಿಟಿಷರನ್ನು ತಮಿಳು ನೆಲದಿಂದ ಓಡಿಸಲು ಶಸ್ತ್ರಾಸ್ತ್ರಗಳನ್ನು ಹಿಡಿದು ಹೋರಾಡಿದರು. ಬ್ರಿಟಿಷರ ವಿರುದ್ಧ ಹೋರಾಡುತ್ತಿದ್ದ ಭಾರತದ ಇತರೆ ಗುಂಪುಗಳನ್ನು ಒಂದುಗೂಡಿಸಲು ಪ್ರಯತ್ನಿಸಿದರು. ಇದು ಬ್ರಿಟಿಷರ ಕೋಪಕ್ಕೆ ಕಾರಣವಾಯಿತು.

ಗೆರಿಲ್ಲಾ ಯುದ್ಧ:

ವೀರ್ ಪಾಂಡಿಂು್ು

ಪುಟ 14 ಕ್ಕೆ

ಕೃಷಿಯ ಮೇಲೆ ಕಾರ್ಪೊರೇಟ್ ನಿಯಂತ್ರಣದ ವಿರುದ್ಧ ಪ್ರತಿಭಟನೆ ಮುಂದುವರೆಯುತ್ತದೆ -ಸಂಯುಕ್ತ ಕಿಸಾನ್ ಮೋರ್ಚಾ



20 ಮಾರ್ಚ್, 2023 ರಂದು ದೆಹಲಿಯ ಐತಿಹಾಸಿಕ ರಾಮಲೀಲಾ ಮೈದಾನದಲ್ಲಿ ಒಂದು ಬಹತ್ ಕಿಸಾನ್ ಮಹಾಪಂಚಾಯತ್ ನಡೆಯಿತು. ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ಕರೆಯ ಮೇರೆಗೆ ನಡೆದ ಈ ಸಭೆಯಲ್ಲಿ ಎಐಕೆಎಸ್ ಸೇರಿದಂತೆ ವಿವಿಧ ರೈತ ಸಂಘಟನೆಗಳ 50 ಕ್ಕೂ ಹೆಚ್ಚು ಭಾಷಣಕಾರರು ಕೃಷಿ ಮೇಲಿನ ಕಾರ್ಪೊರೇಟ್ ನಿಯಂತ್ರಣ ಮತ್ತು ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಗಳ ವಿರುದ್ಧ ಎಸ್‌ಕೆಎಂ ತನ್ನ ಪ್ರತಿಭಟನೆಯನ್ನು ಮುಂದುವರೆಸುತ್ತದೆ ಎಂದು ಒತ್ತಿ ಹೇಳಿದರು.

ಸಾಲದ ಸುಳಿಯಲ್ಲಿ ಸಿಲುಕಿರುವ ಮೋದಿ ಸರ್ಕಾರ ಕೃಷಿ ಕ್ಷೇತ್ರ, ಕೃಷಿ ಭೂಮಿ, ಅರಣ್ಯ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಕಾರ್ಪೊರೇಟ್ ಲಾಭಕೋರರಿಗೆ ಮಾರಾಟ ಮಾಡುತ್ತಿದೆ ಎಂದು ಅವರು ಖಂಡಿಸಿದರು.

ರೈತರನ್ನು ಸಜ್ಜುಗೊಳಿಸಲು ಎಸ್‌ಕೆಎಂ ತಕ್ಷಣವೇ ರಾಜ್ಯ ಸಮಾವೇಶಗಳು, ಯಾತ್ರೆಗಳು ಇತ್ಯಾದಿಗಳನ್ನು ಪ್ರಾರಂಭಿಸುವುದಾಗಿ ಸಭೆಯಲ್ಲಿ ಘೋಷಿಸಲಾಯಿತು.

ನಂತರ ಎಸ್‌ಕೆಎಂನ 15 ಸದಸ್ಯರ ನಿಯೋಗವು ಕೃಷಿ ಭವನದಲ್ಲಿ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವರನ್ನು ಭೇಟಿ ಮಾಡಿ 2 ಜ್ಞಾಪಕ ಪತ್ರಗಳನ್ನು ಸಲ್ಲಿಸಿತು. ಸರಕಾರ ಈಡೇರಿಸದೇ ಬಾಕಿ ಇರುವ ಎಲ್ಲ ಆಶ್ವಾಸನೆಗಳನ್ನು ಪರಿಹರಿಸಬೇಕು ಮತ್ತು ತಕ್ಷಣವೇ ಕನಿಷ್ಟ ಬೆಂಬಲ ಬೆಲೆಗಳನ್ನು ಖಚಿತ ಪಡಿಸುವ ಕಾನೂನನ್ನು ಜಾರಿಗೆ ತರಬೇಕು ಎಂದು ಅವರು ಆಗ್ರಹಿಸಿದರು. ಎಸ್‌ಕೆಎಂ ಜೊತೆ ಮಾತುಕತೆ ನಡೆಸಲು ಸರ್ಕಾರ ಒಪ್ಪಿದ್ದು, ಕಾಲಮಿತಿಯಲ್ಲಿ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಮುಂದಿನ ಪ್ರತಿಭಟನೆ ಮತ್ತು ಆಂದೋಲನಗಳನ್ನು ಎಸ್‌ಕೆಎಂ ಘೋಷಿಸಲಿದೆ ಎಂದು ಸಚಿವರಿಗೆ ತಿಳಿಸಿರುವುದಾಗಿ ಎಸ್‌ಕೆಎಂನ ಮಾಧ್ಯಮಗೋಷ್ಠಿ ನಂತರ ಬಿಡುಗಡೆ ಮಾಡಿರುವ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.



ಮಜ್ದೂರ್ ಕಿಸಾನ್ ಸಂಘರ್ಷ ರ್‍ಯಾಲಿ ದೇಶವ್ಯಾಪಿ ತಯಾರಿ–ದಿಲ್ಲಿಯಲ್ಲಿ ಸ್ವಾಗತ ಸಮಿತಿ ರಚನೆ

ಏಪ್ರಿಲ್ 5ರಂದು ಸಿಐಟಿಯು, ಎಐಕೆಎಸ್ ಮತ್ತು ಎಐಎಡಬ್ಲ್ಯುಯು ನೇತೃತ್ವದಲ್ಲಿ ನಡೆಯಲಿರುವ ಮಜ್ದೂರ್ ಕಿಸಾನ್ ಸಂಘರ್ಷ ರ್‍ಯಾಲಿಗೆ ದೇಶಾದ್ಯಂತ ಭಾರೀ ಸಿದ್ಧತೆ ನಡೆಯುತ್ತಿದೆ. ಜನವರಿಯಲ್ಲಿ ರಾಜ್ಯಮಟ್ಟದ ಜಂಟಿ ಸಮಾವೇಶಗಳ ನಂತರ ಜಿಲ್ಲಾ ಮಟ್ಟದ ಸಮಾವೇಶಗಳು 400 ಜಿಲ್ಲೆಗಳಲ್ಲಿ ನಡೆದಿವೆ. ನಂತರ ಜಾಥಾಗಳು, ಮೆರವಣಿಗೆಗಳು, ಧರಣಿಗಳಲ್ಲದೆ, ಸಾಂಸ್ಕೃತಿಕ ತಂಡಗಳು ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರಾಂದೋಲನ ನಡೆಸಲಾಗುತ್ತಿದೆ, ಮನೆ–ಮನೆ ಪ್ರಚಾರದ ಮೂಲಕ 1 ಕೋಟಿ ಕುಟುಂಬಗಳನ್ನು ತಲುಪುವ ಗುರಿಯನ್ನು ಇಟ್ಟುಕೊಳ್ಳಲಾಗಿದ್ದು, ಅದು ನೆರವೇರುತ್ತಿದೆ ಎಂದು ತಿಳಿದು ಬಂದಿದೆ.

ದಿಲ್ಲಿಯಲ್ಲಿ ಒಂದು ಸ್ವಾಗತ ಸಮಿತಿ ರಚನೆಗೊಂಡಿದ್ದು, ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಇದರ ಅಧ್ಯಕ್ಷರಾಗಿದ್ದಾರೆ. ಅಧ್ಯಯನಕಾರರು, ಕಲಾವಿದರು ಮತ್ತು ಎಲ್ಲ ರಂಗಗಳಲ್ಲಿನ ಸಕ್ರಿಯ ಕಾರ್ಯಕರ್ತರು ಈ ಸಮಿತಿಯಲ್ಲಿದ್ದಾರೆ.

ಮಾರ್ಚ್ 21ರಂದು ಈ ಮೂರು ಸಂಘಟನೆಗಳ ಕೇಂದ್ರೀಯ ಮುಖಂಡರೊಂದಿಗೆ ದಿಲ್ಲಿಯಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಭಾಗವಹಿಸಿದ



ಪ್ರೊ. ಪ್ರಭಾತ್ ಪಟ್ನಾಯಕ್, ದೇಶದಲ್ಲಿ ನವ–ಉದಾರವಾದಿ ಆಳ್ವಿಕೆಯು ಕ್ರೂರ ದಾಳಿಯಿಂದಾಗಿ ಕಳೆದ ಎರಡು ದಶಕಗಳಲ್ಲಿ ಮೂರು ಲಕ್ಷಕ್ಕೂ ಹೆಚ್ಚು ರೈತರು ಮತ್ತು ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಿದರು. ಪ್ರಸಕ್ತ ಬಿಜೆಪಿ ಸರಕಾರದ ಆಳ್ವಿಕೆಯಲ್ಲಿ ಇದು ಇನ್ನಷ್ಟು ಗಂಬೀರ ಸ್ವರೂಪ ತಳೆದಿದೆ. ಈ ಸರಕಾರ ನಾಲ್ಕು ಕಾರ್ಮಿಕ ಸಂಹಿತೆಗಳು ಮತ್ತು ಮೂರು ಕುಖ್ಯಾತ ಕೃಷಿ ಕಾಯ್ದೆಗಳ ಮೂಲಕ ಈ ದಾಳಿಗೆ ಸಾಂಸ್ಥಿಕ ಸ್ವರೂಪ ಕೊಡಲು ಪ್ರಯತ್ನಿಸುತ್ತಿದೆ. ರೈತರ ಧೀರ ಪ್ರತಿರೋಧದಿಂದಾಗಿ ಪ್ರಧಾನಿಗಳು ಸ್ವಲ್ಪ ಹಿಂದಕ್ಕೆ ಸರಿಯಬೇಕಾಗಿ ಬಂದಿದೆ, ಆದರೆ ಅದನ್ನು ಹೇರುವ ವಿಚಾರವನ್ನು ಆತ ಕೈಬಿಟ್ಟಿಲ್ಲ.

ದುಡಿಯುವ ಜನಗಳ ಮೇಲೆ ಈ ಕ್ರೂರ ದಾಳಿಗಳ ವಿರುದ್ಧ ಹೋರಾಡಲು, ಪ್ರಜಾಪ್ರಭುತ್ವದ ಮತ್ತು ಪ್ರತಿರೋಧದ ಹಕ್ಕಿನ ರಕ್ಷಣೆಗಾಗಿ ಮತ್ತು ಆಧುನಿಕ ಭಾರತದ ಅಡಿಗಲ್ಲಾದ ಜಾತ್ಯತೀತತೆ ಮತ್ತು ಸಂವಿಧಾನದ ರಕ್ಷಣೆಗೆ ಎಲ್ಲ ದುಡಿಮೆಗಾರರು ಒಂದು ವೇದಿಕೆಯ ಮೇಲೆ ಬರುವ ಅಗತ್ಯವಿದ್ದು, ಎಪ್ರಿಲ್ 5ರ ರ್‍ಯಾಲಿ ಈ ಪ್ರಕ್ರಿಯೆಯ ಆರಂಭದ ಸಂಕೇತ ಎಂದು ಪ್ರೊ. ಪ್ರಭಾತ್ ಪಟ್ನಾಯಕ್ ಹೇಳಿದ್ದಾರೆ.

ಸರ್ಕಾರಿ ನೌಕರರ ಪ್ರತಿಭಟನೆಗಳನ್ನು ನಿಷೇಧಿಸುವ ಕೇಂದ್ರ ಸರ್ಕಾರದ ಆದೇಶವನ್ನು ತಕ್ಷಣವೇ ರದ್ದುಗೊಳಿಸಬೇಕು–ಸಿಐಟಿಯು

ಯಾವುದೇ ರೀತಿಯ ಪ್ರತಿಭಟನೆಗಳಲ್ಲಿ ಭಾಗವಹಿಸದಂತೆ ಸರಕಾರಿ ನೌಕರರಿಗೆ ಎಚ್ಚರಿಕೆ ನೀಡುವ ದುರಹಂಕಾರವನ್ನು ಕೇಂದ್ರ ಸರಕಾರ ಪ್ರದರ್ಶಿಸುತ್ತಿದೆ. ಈ ಕುರಿತು ಸಿಬ್ಬಂದಿ ಮತ್ತು ತರಬೇತಿ ಇಲಾಖೆ(ಡಿಒಪಿಟಿ) ಹೊರಡಿಸಿರುವ ಆಕ್ರೋಶಕಾರಿ ನಿರ್ದೇಶನಗಳನ್ನು ತಕ್ಷಣವೇ ರದ್ದುಗೊಳಿಸಬೇಕು ಎಂದು ಸಿಐಟಿಯು ಆಗ್ರಹಿಸಿದೆ.

ಮುಷ್ಕರ, ಸಾಮೂಹಿಕ ಸಾಂದರ್ಭಿಕ ರಜೆ, ಧರಣಿ ಮುಂತಾದ ಯಾವುದೇ ರೀತಿಯ ಸಾಮೂಹಿಕ ಅಭಿವ್ಯಕ್ತಿಯಲ್ಲಿ ಸರ್ಕಾರಿ ನೌಕರರು ಭಾಗವಹಿಸುವುದನ್ನು ನಿಷೇಧಿಸಲು ಈ ನಿರ್ದೇಶನ ಪ್ರಯತ್ನಿಸುತ್ತದೆ, ಸುಮಾರಾಗಿ ಯಾವುದೇ ರೀತಿಯ ಪ್ರಜಾಸತ್ತಾತ್ಮಕ ಪ್ರತಿಭಟನೆಗಳಲ್ಲಿ ಭಾಗವಹಿಸಿದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗಿ ಬರುತ್ತದೆ ಎಂದು ಎಚ್ಚರಿಕೆ ನೀಡುವುದಾಗಿ ಅದು ಬೆದರಿಕೆ ಹಾಕುತ್ತದೆ. ಭಾರತೀಯ ಸಂವಿಧಾನ ಪ್ರತಿಯೊಬ್ಬ ನಾಗರಿಕರಿಗೆ ತಮಗೆ ಸಲ್ಲಬೇಕಾದವುಗಳನ್ನು ಕೇಳುವ ಮತ್ತು ಪಡೆಯುವ ಹಕ್ಕನ್ನು ಕೊಟ್ಟಿರುವಂತೆ ಸರಕಾರೀ ನೌಕರರಿಗೂ ತಮ್ಮ ಸೇವಾ ಪರಿಸ್ಥಿತಿಗಳಿಗೆ ಸಂಬಂಧಪಟ್ಟಂತೆ ತಮಗೆ ಸಲ್ಲಬೇಕಾದವುಗಳನ್ನು ಕೇಳುವ ಮತ್ತು ಪಡೆಯುವ ಹಕ್ಕು ಇದೆ. ಅದಕ್ಕಾಗಿ ಯಾವುದೇ ಸಾಮೂಹಿಕ ಕ್ರಿಯೆಗಳಲ್ಲಿ ತೊಡಗುವುದರ ಬಗ್ಗೆ ಬೆದರಿಕೆ ಹಾಕುವುದು ಅವರ ಹಕ್ಕನ್ನು ನಿಷೇಧಿಸುವ ಸರ್ವಾಧಿಕಾರಶಾಹೀ ಪ್ರಯತ್ನವಲ್ಲದೆ ಬೇರೇನೂ ಅಲ್ಲ ಎಂದು ಸಿಐಟಿಯು ಹೇಳಿದೆ.

ಕಾರ್ಮಿಕ ವಿರೋಧಿ ವಿಧ್ವಂಸಕ ನೀತಿಗಳಿಗೆ ಹೆಸರುವಾಸಿಯಾಗಿರುವ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಸೇರಿದಂತೆ ಎಲ್ಲಾ ಕ್ಷೇತ್ರಗಳ ಎಲ್ಲಾ ವರ್ಗದ ದುಡಿಯುವ ಜನರಿಂದ ಒಂದರ ನಂತರ ಒಂದರಂತೆ ರಾಷ್ಟ್ರದಾದ್ಯಂತ ಪ್ರತಿಭಟನೆಗಳನ್ನು ಎದುರಿಸುತ್ತಿರುವುದರಿಂದ ಹತಾಶಗೊಂಡಿದೆ. ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಗೊಳಿಸುವಂತೆ ಮತ್ತು ಹಳೆ ಪಿಂಚಣಿ ಯೋಜನೆಗೆ (ಒಪಿಎಸ್) ಮರಳುವಂತೆ ಒತ್ತಾಯಿಸಿ ಸಂಘಟಿತ ಪ್ರತಿಭಟನೆಗಳು ಮತ್ತು ಆಂದೋಲನಗಳು ವಿಶೇಷವಾಗಿ ಸರ್ಕಾರಿ ನೌಕರರ ನಡುವೆ ವ್ಯಾಪಕವಾಗಿ ಹರಡುತ್ತಿವೆ. ಇದು ಕ್ರಮೇಣ ಮೋದಿ ಸರ್ಕಾರಕ್ಕೆ, ವಿಶೇಷವಾಗಿ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ರಾಜಕೀಯ ಸವಾಲಾಗಿ ಪರಿಣಮಿಸುತ್ತಿದೆ. ಇಂತಹ ಹತಾಶೆಯು ಸರ್ಕಾರಿ ನೌಕರರ ಎಲ್ಲಾ ರೀತಿಯ ಪ್ರಜಾಸತ್ತಾತ್ಮಕ ಪ್ರತಿಭಟನೆಗಳನ್ನು ನಿಷೇಧಿಸುವ ದುರಹಂಕಾರಕ್ಕೆ ಕಾರಣವಾಗಿದೆ.

ಈ ಆದೇಶವನ್ನು ಸಂಪೂರ್ಣವಾಗಿ ನೌಕರರಿಗೆ ಸೇರಿರುವ ಎನ್‌ಪಿಎಸ್ ವಂತಿಗೆಗಳ ಮೊತ್ತವನ್ನು ಒಪಿಎಸ್ ವ್ಯವಸ್ಥೆಗೆ ಮರಳುವ ರಾಜ್ಯಗಳಿಗೆ ಹಿಂದಿರುಗಿಸುವುದಿಲ್ಲ ಎಂಬ ಮೋದಿ ಸರಕಾರದ ಆಕ್ರೋಶಕಾರಿ ಮತ್ತು ಕಾನೂನುಬಾಹಿರ ನಿಲುವಿನ ಹಿನ್ನೆಲೆಯಲ್ಲೂ ನೋಡಬೇಕಾಗಿದೆ ಎಂದಿರುವ ಸಿಐಟಿಯು ಇದರ ವಿರುದ್ಧ ಅವಿಶ್ರಾಂತ ಹೋರಾಟ ನಡೆಸಬೇಕಾಗಿದೆ ಎಂದಿದೆ.

ರಾಷ್ಟ್ರೀಯ ಜಂಟಿ ಕಾರ್ಯಾಚರಣೆ ಮಂಡಳಿ(ಎನ್‌ಜೆಸಿಎ) ಹಳೆಯ ಪಿಂಚಣಿ ಯೋಜನೆ(ಒಪಿಎಸ್)ಯನ್ನು ಮರುಸ್ಥಾಪಿಸುವಂತೆ ಒತ್ತಾಯಿಸಿ ದೇಶಾದ್ಯಂತ ಜಿಲ್ಲಾ ಮಟ್ಟದ ರ್‍ಯಾಲಿಗಳನ್ನು ನಡೆಸಲು ನಿರ್ಧರಿಸಿದ್ದು, ಅದನ್ನು ವಿಫಲಗೊಳಿಸುವ ಪೈಶಾಚಿಕ ಉದ್ದೇಶದಿಂದ ಸರ್ಕಾರವು ಇಂತಹ ಆದೇಶವನ್ನು ಹೊರಡಿಸಿದೆ ಎಂದು ಸಿಐಟಿಯು ಪುನರುಚ್ಚರಿಸಿದೆ. ಆದರೆ ಇದು ಹೋರಾಟಗಳ ಅಲೆಗಳನ್ನು ಮತ್ತು ಕೆಲವು ರಾಜ್ಯಗಳಲ್ಲಿ ಅಲ್ಲಿನ ಸರ್ಕಾರಗಳು ಒಪಿಎಸ್ ವ್ಯವಸ್ಥೆಗೆ ಮರಳುವುದನ್ನು ತಡೆಯಲಾರದು ಎಂದಿರುವ ಸಿಐಟಿಯು ನೌಕರರು ತಮ್ಮ ಒಗ್ಗಟ್ಟಿನ ಹೋರಾಟಗಳನ್ನು ಮುಂದುವರಿಸಬೇಕು ಎಂದು ಕರೆ ನೀಡಿದೆ. ತಮ್ಮ ನ್ಯಾಯಸಮ್ಮತ ಬೇಡಿಕೆಗಳಿಗಾಗಿ ಹೋರಾಡುತ್ತಿರುವ ಕಾರ್ಮಿಕರು ಮತ್ತು ನೌಕರರ ಬೆಂಬಲಕ್ಕೆ ತಾನು ನಿಲ್ಲುವುದಾಗಿಯೂ ಅದು ಹೇಳಿದೆ. ಇಡೀ ಕಾರ್ಮಿಕ ಆಂದೋಲನ ಸರ್ಕಾರಿ ನೌಕರರ ಐಕ್ಯ ಹೋರಾಟಗಳಿಗೆ ಎಲ್ಲಾ ಬೆಂಬಲ ಮತ್ತು ಸೌಹಾರ್ದವನ್ನು ನೀಡಬೇಕು. ಆಳುವ ಜನಗಳ ನಿರಂಕುಶ ದುರಹಂಕಾರವನ್ನು ಎದುರಿಸಿ ಹೋರಾಡಬೇಕು ಎಂದೂ ಸಿಐಟಿಯು ಕರೆ ನೀಡಿದೆ.

ಟೋಲ್ ಶುಲ್ಕ ಹೆಚ್ಚಳದ ವಿರುದ್ಧ ಮಾರ್ಚ್ 31 ರಂದು 10 ನಿಮಿಷ ದೇಶವ್ಯಾಪಿ ರಸ್ತೆ ತಡೆ–ಎಐಆರ್‌ಟಿಡಬ್ಲ್ಯುಎಫ್ ಮನವಿ


ಏಪ್ರಿಲ್ 01 ರಿಂದ ಟೋಲ್ ಶುಲ್ಕವನ್ನು ಹೆಚ್ಚಿಸುವ ರಸ್ತೆ ಸಾರಿಗೆ ಸಚಿವಾಲಯದ ಪ್ರಸ್ತಾವನೆಯನ್ನು ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟ(ಎಐಆರ್‌ಟಿಡಬ್ಲ್ಯುಎಫ್) ಬಲವಾಗಿ ಖಂಡಿಸಿದೆ. ಈ ಪ್ರಸ್ತಾವನೆಯನ್ನು ತಕ್ಷಣವೇ ಹಿಂಪಡೆಯುವಂತೆ ಒಕ್ಕೂಟವು ಸಚಿವಾಲಯವನ್ನು ಒತ್ತಾಯಿಸಿದೆ. ಇದರ ವಿರುದ್ಧ ಮಾರ್ಚ್ 31 ರಂದು 12.00 ರಿಂದ 12.10 ರವರೆಗೆ 10 ನಿಮಿಷಗಳ ಕಾಲ ದೇಶಾದ್ಯಂತ ಎಲ್ಲಾ ವಾಹನಗಳನ್ನು ನಿಲ್ಲಿಸಲು ಮತ್ತು ಶುಲ್ಕ ಹೆಚ್ಚಳದ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸಲು ಒಕ್ಕೂಟ ಎಲ್ಲಾ ರಸ್ತೆ ಬಳಕೆದಾರರಿಗೆ ಮನವಿ ಮಾಡಿದೆ.

ಅಸ್ತಿತ್ವದಲ್ಲಿರುವ ಟೋಲ್ ಪ್ಲಾಜಾಗಳಲ್ಲಿ ಟೋಲ್ ಶುಲ್ಕವನ್ನು ಹೆಚ್ಚಿಸುವುದು ತತ್ವಶಃ ತಪ್ಪು ಮತ್ತು ಅನೈತಿಕವಾಗಿದೆ. ಟೋಲ್ ಪ್ಲಾಜಾ ಉದ್ಘಾಟನೆಯ ಸಮಯದಲ್ಲಿ ಟೋಲ್‌ನ ಬಾಳಿಕೆ ಮತ್ತು

ಪುಟ 14 ಕ್ಕೆ

'ಬೆಳವಣಿಗೆಯ ಹಿಂದೂ ದರ' ಅಂದರೆ ಕೆಳಮಟ್ಟದ ದರ ಈಗ ದುಡಿಯುವ ಜನಗಳಿಗೆ ಹೆಚ್ಚು ಕೆಟ್ಟದಾಗಿರುತ್ತದೆ

ಸ್ವಾತಂತ್ರ್ಯಾನಂತರ 1980ರ ದಶಕದ ವರೆಗೆ ಭಾರತದ ಜಿಡಿಪಿ ಅಭಿವೃದ್ಧಿ ದರ ಕೆಳಮಟ್ಟದಲ್ಲೇ ಇತ್ತು. ನವ-ಉದಾರವಾದೀ ಧೋರಣೆಗಳ ನಂತರ ಅದರಲ್ಲಿ ತೀವ್ರ ಏರಿಕೆಯಾಗಿತ್ತು. ಈಗ ಮತ್ತೆ ಅದು ನಿಧಾನಗೊಂಡಿದೆ. ಇದರಿಂದಾಗಿ ಅರ್ಥವ್ಯವಸ್ಥೆಯ ಬೆಳವಣಿಗೆಯ ದರವು ನಿಯಂತ್ರಣ ನೀತಿಗಳ ಅವಧಿಯಲ್ಲಿ ಕಂಡ ದರಕ್ಕೆ ಮರಳುತ್ತಿದೆ ಎಂಬ ಆತಂಕ ಹಿಂದಿನ ರಿಜರ್ವ್ ಬ್ಯಾಂಕ್ ಗವರ್ನರ್ ರಘುರಾಮ ರಾಜನ್ ರವರಿಗೆ. ಆದರೆ ನಿಜವಾದ ಆತಂಕವೆಂದರೆ ಹಾಗೆ ಮರಳಿದರೆ, ದುಡಿಯುವ ಜನರ ಪರಿಸ್ಥಿತಿಗಳು ಆಗ ಇದ್ದದ್ದಕ್ಕಿಂತಲೂ ಹೆಚ್ಚು ಕೆಟ್ಟದಾಗಿರುತ್ತವೆ ಎಂಬುದು. ಏಕೆಂದರೆ ಎಂಬತ್ತರ ದಶಕದ ಹಿಂದಿನ ಅವಧಿಯ ಕೆಳ ಮಟ್ಟದ ಬೆಳವಣಿಗೆಯ ದರ ಮತ್ತು ಇಂದಿನ ಬೆಳವಣಿಗೆಯ ದರ ಇವುಗಳ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ. ಅಸಮಾನತೆಯ ಹೆಚ್ಚಳ ಈಗಿನ ಅವಧಿಯ ಒಂದು ಮುಖ್ಯ ಲಕ್ಷಣವಾಗಿದೆ.



ಪ್ರೊ. ಪ್ರಭಾತ್‌ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಆರ್ಥಿಕ ನಿಯಂತ್ರಣ (ಡಿರಿಜಿಸ್ಟೆ) ನೀತಿಗಳ ಅವಧಿಯ ಬಹುಪಾಲು ವರ್ಷಗಳಲ್ಲಿ, ಭಾರತದ ಜಿಡಿಪಿಯು ವಾರ್ಷಿಕ ಸುಮಾರು ಶೇ. 4ರಷ್ಟು ಅಥವಾ ಅದಕ್ಕಿಂತಲೂ ಕೆಳಗಿನ ದರದಲ್ಲಿ ಬೆಳೆಯಿತು. ಬೆಳವಣಿಗೆಯು ಹೆಚ್ಚು ಕಡಿಮೆ ನಿಶ್ಚಲವಾಗಿದ್ದ ವಸಾಹತುಶಾಹಿ ಯುಗಕ್ಕೆ ಹೋಲಿಸಿದರೆ, ಇದು ಉತ್ತಮಗೊಂಡ ದರವಾಗಿದ್ದರೂ, ಅದು ಹೆಚ್ಚು ಗಮನಾರ್ಹವೆನಿಸಿರಲಿಲ್ಲ. ಈ ಕೆಳಮಟ್ಟದ ಸ್ಥಿರವಾದ ಬೆಳವಣಿಗೆಯು ಬಹಳ ವರ್ಷಗಳ ಕಾಲ ಮುಂದುವರೆದ ಕಾರಣ ಅನೇಕ ಅರ್ಥಶಾಸ್ತ್ರಜ್ಞರು ಈ ರೀತಿಯ ಬೆಳವಣಿಗೆಯನ್ನು "ಬೆಳವಣಿಗೆಯ ಹಿಂದೂ ದರ" ಎಂದು (ಬಹುಶಃ ಈ ದರದ ಬೆಳವಣಿಗೆಯ ಮೂಲಕ ಗಮನಾರ್ಹ ಸಾಮಾಜಿಕ ಪರಿವರ್ತನೆಗೆ ಬಹಳ ವರ್ಷಗಳೇ ಹಿಡಿಯಬಹುದೆಂದು) ತಮಾಷೆ ಮಾಡಿದ್ದರು. 1980ರ ದಶಕದಿಂದ ಹಿಡಿದು, ಮತ್ತು ನಂತರದಲ್ಲಿ ಈ ರೀತಿಯ ಆಳ್ವಿಕೆಗೆ ಬದಲಿಯಾಗಿ ಬಂದ ನವ ಉದಾರೀ ಆಳ್ವಿಕೆಯ ಮುಂದುವರಿಕೆಯ ನಂತರ, ವೇಗವರ್ಧನೆ ಪಡೆದಿದ್ದ ಜಿಡಿಪಿಯ ಬೆಳವಣಿಗೆಯ ವೇಗ ಹೆಚ್ಚುತ್ತ ಹೋಗಿದ್ದು, ಅದೀಗ ಮತ್ತೆ ನಿಧಾನಗೊಳ್ಳಲು ಪ್ರಾರಂಭಿಸಿದೆ. ಈ ವಿದ್ಯಮಾನವು ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ಡಾ.ರಘುರಾಮ್ ರಾಜನ್ ಅವರಿಗೆ, ಬಹುಶಃ ನಾವು "ಬೆಳವಣಿಗೆಯ ಹಿಂದೂ ದರ"ದ ಯುಗಕ್ಕೆ ಮರಳುತ್ತಿದ್ದೇವೆ ಎಂದು ಇತ್ತೀಚೆಗೆ ಸೂಚ್ಯವಾಗಿ ಹೇಳುವಲ್ಲಿ ಒಂದು ಪ್ರೇರಣೆಯಾಗಿರಬಹುದು.

ಕೋವಿಡ್ ಸಾಂಕ್ರಾಮಿಕ ಹರಡುವ ಮುನ್ನವೇ ಜಿಡಿಪಿ ಬೆಳವಣಿಗೆಯ ದರವು ತಗ್ಗಿತ್ತು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಕೋವಿಡ್ ಹಾವಳಿಯ ನಂತರ ಕಂಡ ಚೇತರಿಕೆಯೂ ಸಹ ಬಲಹೀನವಾಗಿಯೇ ಇತ್ತು. ಅಂದರೆ, ಉತ್ಪಾದನೆಯಲ್ಲಿ ತೀವ್ರ ಕುಸಿತವಾಗಿತ್ತು. ಈ ಎಲ್ಲ ಅಂಶಗಳೂ ಹೋಲಿಕೆಯ ದೃಷ್ಟಿಯಲ್ಲಿ ಅರ್ಥವ್ಯವಸ್ಥೆಯು ಅಲ್ಪ ಬೆಳವಣಿಗೆಯ ಸ್ಥಿತಿಗೆ ಮರಳುತ್ತಿದೆ ಎಂಬ ಅಭಿಪ್ರಾಯವನ್ನು ಬೆಂಬಲಿಸುತ್ತವೆ. ಆದರೆ, ಇಂದಿನ ಬೆಳವಣಿಗೆಯ ದರವು ನಿಯಂತ್ರಣ ನೀತಿಗಳ ಯುಗದೊಂದಿಗೆ ಹೇಗೆ ಹೋಲಿಕೆಯಾಗುತ್ತದೆ ಎಂಬುದನ್ನು ಅಂಕಿ-ಅಂಶಗಳ ಮೂಲಕ ನೋಡುವುದು ಇಲ್ಲಿ ನಮ್ಮ ಉದ್ದೇಶವಲ್ಲ. "ಬೆಳವಣಿಗೆಯ ಹಿಂದೂ ದರ" ಎಂದು ಕರೆಯುವುದು ಸರಿಯೇ ಎಂಬುದೂ ಇಲ್ಲಿ ವಿಷಯವಲ್ಲ. ಏಕೆಂದರೆ, ಈ ಪದವನ್ನು ಸಂಖ್ಯಾಶಾಸ್ತ್ರೀಯ ವಿದ್ಯಮಾನವನ್ನು ಸೂಚಿಸಲು ಮಾತ್ರ ಬಳಸಲಾಗಿದೆ. ಇಲ್ಲಿ ನಮ್ಮ ಉದ್ದೇಶವೆಂದರೆ, ತುಲನಾತ್ಮಕ ದೃಷ್ಟಿಯಲ್ಲಿ ಕಾಣುವ ಹಿಂದಿನ ಅವಧಿಯ ಕೆಳ ಮಟ್ಟದ ಬೆಳವಣಿಗೆಯ ದರ ಮತ್ತು ಇಂದಿನ ಬೆಳವಣಿಗೆಯ ದರ ಇವುಗಳ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ ಎಂಬುದನ್ನು ಒತ್ತಿಹೇಳುವುದಷ್ಟೇ.

ಮೂಲಭೂತ ವ್ಯತ್ಯಾಸ

ಈ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಲು "ಪೂರೈಕೆ-ನಿರ್ಬಂಧಿತ ವ್ಯವಸ್ಥೆ" ಮತ್ತು "ಬೇಡಿಕೆ-ನಿರ್ಬಂಧಿತ ವ್ಯವಸ್ಥೆ" ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಒಂದು ಬೇಡಿಕೆ-ನಿರ್ಬಂಧಿತ ವ್ಯವಸ್ಥೆಯ ಸಂದರ್ಭದಲ್ಲಿ, ಯಾವುದೇ ಅವಧಿಯ ಉತ್ಪಾದನೆಯು ಒಟ್ಟು ಬೇಡಿಕೆಯ ಮಟ್ಟದಿಂದ ನಿರ್ಧರಿಸಲ್ಪಡುತ್ತದೆ. ಅದೇ ರೀತಿಯಲ್ಲಿ, ಬೆಳವಣಿಗೆಯ ದರವು ಒಟ್ಟು ಬೇಡಿಕೆ ಮಟ್ಟದ ಬೆಳವಣಿಗೆಯ ದರದಿಂದ ನಿರ್ಧರಿಸಲ್ಪಡುತ್ತದೆ. ಯಾವುದೇ ಅವಧಿಯಲ್ಲಿ ಉತ್ಪತ್ತಿಯು ಸಂಪೂರ್ಣ ಸಾಮರ್ಥ್ಯದ ಬಳಕೆ ಅಥವಾ ಲಭ್ಯವಿರುವ ಕೆಲಸಗಾರರ ಪೂರ್ಣ ಉದ್ಯೋಗ ಅಥವಾ ವಿದೇಶಿ ವಿನಿಮಯ ಅಥವಾ ಆಹಾರ ಧಾನ್ಯಗಳಂತಹ ನಿರ್ಣಾಯಕ ಅಂಶಗಳ ಕೊರತೆ ಇವುಗಳಿಂದ ನಿರ್ಬಂಧಿಸಲ್ಪಡುವುದಿಲ್ಲ. ಬೇರೆ ರೀತಿಯಲ್ಲಿ ಹೇಳುವುದಾದರೆ, ಒಂದು ಬೇಡಿಕೆ-ನಿರ್ಬಂಧಿತ ವ್ಯವಸ್ಥೆಯಲ್ಲಿ ಉತ್ಪತ್ತಿಯು ಪೂರೈಕೆ ಬದಿಯಿಂದ ನಿರ್ಧರಿಸಲ್ಪಡುವ ಅದರ ಸಂಭಾವ್ಯತೆಗಿಂತಲೂ ಕಡಿಮೆ ಇರುತ್ತದೆ ಮತ್ತು ಎಲ್ಲ ಅವಧಿಯಲ್ಲೂ ಹಾಗೆಯೇ ಇರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಒಂದು ಪೂರೈಕೆ-ನಿರ್ಬಂಧಿತ ವ್ಯವಸ್ಥೆಯಲ್ಲಿ ಯಾವುದೇ ಅವಧಿಯಲ್ಲಿ ಉತ್ಪತ್ತಿಯು ಪೂರೈಕೆ-ಬದಿಯ ಇತಿ-ಮಿತಿಗಳು ನಿರ್ದಿಷ್ಟಪಡಿಸುವ ಗರಿಷ್ಠ ಕಾರ್ಯಸಾಧ್ಯ ಮಟ್ಟದಿಂದ ನಿರ್ಧರಿಸಲ್ಪಡುತ್ತದೆ. ಮತ್ತು, ಇತಿ-ಮಿತಿಗಳಿಂದ ಕಟ್ಟಿಹಾಕಲ್ಪಟ್ಟ ಬೆಳವಣಿಗೆಯ ದರವು ಕಾಲಾನಂತರದಲ್ಲಿ ಕಾರ್ಯಸಾಧ್ಯ ಗರಿಷ್ಠ ಮಟ್ಟದ್ದಾಗಿರುತ್ತದೆ.

ಸಾಂಪ್ರದಾಯಿಕ ಬಂಡವಾಳಶಾಹಿಯು ಒಂದು ಬೇಡಿಕೆ-ನಿರ್ಬಂಧಿತ ವ್ಯವಸ್ಥೆಯಾಗಿದೆ ಮತ್ತು ಸಾಂಪ್ರದಾಯಿಕ ಸಮಾಜವಾದವು ಒಂದು ಪೂರೈಕೆ-ನಿರ್ಬಂಧಿತ ವ್ಯವಸ್ಥೆಯಾಗಿದೆ ಎಂಬ ಅಂಶದ ಬಗ್ಗೆ ಪೋಲೆಂಡಿನ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞ ಮೈಕಲ್ ಕಲೆಕಿ ಬಹಳ ಹಿಂದೆಯೇ ಗಮನ ಸೆಳೆದಿದ್ದರು. ಸಾಂಪ್ರದಾಯಿಕ ಬಂಡವಾಳಶಾಹಿ ಅರ್ಥವ್ಯವಸ್ಥೆಯು, ನಿಷ್ಕ್ರಿಯ ಸಾಮರ್ಥ್ಯ, ನಿರುದ್ಯೋಗ ಮತ್ತು ಆಹಾರ ಧಾನ್ಯಗಳ ಲಭ್ಯತೆ ಮತ್ತು ವಿದೇಶಿ ವಿನಿಮಯದ ಸುಲಭ ಲಭ್ಯತೆ ಇವೆಲ್ಲವೂ ಏಕ ಕಾಲದಲ್ಲೇ ಇರುತ್ತವೆ ಎನ್ನುವ ಅರ್ಥದಲ್ಲಿ, **"ಮಂದ" (slack)** ಎಂಬುದಾಗಿ ಚಿತ್ರಿಸಲ್ಪಟ್ಟಿದೆ. ಆದರೆ, ಒಂದು ಪೂರೈಕೆ-ನಿರ್ಬಂಧಿತ ವ್ಯವಸ್ಥೆಯು ಅಂತಹ "ಮಂದ" ಪರಿಸ್ಥಿತಿಗೆ ಹೋಗುವುದಿಲ್ಲ, ಮತ್ತು, ಅಲ್ಲಿ "ಮಂದ"ದ ರೀತಿಯಲ್ಲಿ ಸಂಪನ್ಮೂಲಗಳು ಪೋಲಾಗುವುದೂ ಇಲ್ಲ.

ಭಾರತದಲ್ಲಿ ಡಿರಿಜಿಸ್ಟೆ ಅವಧಿಯ ಒಂದು ಮುಖ್ಯ ಲಕ್ಷಣವೆಂದರೆ, ಬಂಡವಾಳಶಾಹಿಯ ಅಭಿವೃದ್ಧಿ ಯೋಜನಾಬದ್ಧವೆಂದು ಕರೆಯಲಾದ ಅರ್ಥವ್ಯವಸ್ಥೆಯೊಳಗಿನಿಂದಲೇ ನಡೆದಿತ್ತು, ಮತ್ತು ಯೋಜನಾಬದ್ಧವೆಂದರೆ, ಅರ್ಥವ್ಯವಸ್ಥೆ ಬೇಡಿಕೆ-ನಿರ್ಬಂಧಿತವಾಗಿರಲಿಲ್ಲವೆಂದಾಗುತ್ತದೆ. ಈ ಅವಧಿಯ ಭಾರತದ ಅರ್ಥವ್ಯವಸ್ಥೆಯು ಸಾಂಪ್ರದಾಯಿಕ ಬಂಡವಾಳಶಾಹಿಗೆ ಸಮನಲ್ಲ.



ನವ ಉದಾರವಾದಿ "ಸುಧಾರಣೆಗಳು" ಜಾರಿಯಾದ ನಂತರವೇ ಸಾಂಪ್ರದಾಯಿಕ ಬಂಡವಾಳಶಾಹಿಯು ಪೂರ್ಣ ಪ್ರಮಾಣದಲ್ಲಿ ಹೊರಹೊಮ್ಮಿತು. ನಿಯಂತ್ರಣ ನೀತಿಗಳ ಅವಧಿಯು **"ಮಂದ"** ಪರಿಸ್ಥಿತಿಯಿಂದ ಮುಕ್ತವಾಗಿತ್ತು. ಏಕೆಂದರೆ, **"ಮಂದ"** ಪರಿಸ್ಥಿತಿ ಕಾಣಿಸಿಕೊಂಡ ಕೂಡಲೇ ಸರ್ಕಾರದ ವೆಚ್ಚಗಳನ್ನು ಹೆಚ್ಚಿಸುವ ಮೂಲಕ, ವಿಶೇಷವಾಗಿ ಸಾರ್ವಜನಿಕ ಹೂಡಿಕೆಯ ಮೂಲಕ ಮತ್ತು ಅಗತ್ಯವಿದ್ದರೆ ಬೃಹತ್ ವಿತ್ತೀಯ ಕೊರತೆಯ ಮೂಲಕವೂ ಬೇಡಿಕೆಯು ಉತ್ತೇಜಿಸಲ್ಪಡುತ್ತಿತ್ತು. ವಿತ್ತೀಯ ಕೊರತೆಯ ಮೇಲೆ ಯಾವುದೇ ನಿರ್ಬಂಧಗಳನ್ನು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ವಿಧಿಸುತ್ತಿರಲಿಲ್ಲ. ಏಕೆಂದರೆ, ಹೊರಗಿನಿಂದ ಹೂಡಿಕೆಯಾಗುವ ಬಂಡವಾಳದ ಮೇಲೆ ಕಟ್ಟುನಿಟ್ಟಾದ ನಿಯಂತ್ರಣಗಳಿದ್ದವು. ಹಾಗಾಗಿ, ಅರ್ಥವ್ಯವಸ್ಥೆಯು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಹಿಡಿತದಿಂದ ಮುಕ್ತವಾಗಿತ್ತು. ಸಾರ್ವಜನಿಕ ಹೂಡಿಕೆಗೆ ಮತ್ತು ಅರ್ಥವ್ಯವಸ್ಥೆಯ ಒಟ್ಟಾರೆ ಬೆಳವಣಿಗೆಯ ದರ ಏರಿಕೆಗೆ ಸಂಬಂಧಿಸಿದ ತೊಡಕುಗಳು ಪೂರೈಕೆ ಬದಿಯಿಂದ ಉದ್ಭವಿಸಿದವು. ನಿರ್ದಿಷ್ಟವಾಗಿ ಹೇಳುವುದಾದರೆ, ಆಹಾರ ಧಾನ್ಯಗಳ ಲಭ್ಯತೆಯಲ್ಲಿ ಮಿತಿಗಳಿದ್ದವು. ವಿದೇಶಿ ವಿನಿಮಯದ ಕೊರತೆಯಿಂದಾಗಿ ಸಾಕಷ್ಟು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುವುದು ಸಾಧ್ಯವಾಗಲಿಲ್ಲ. ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಮೇಲೆ ಆರಂಭದಿಂದಲೇ ಬೇಡಿಕೆ ಹೆಚ್ಚುತ್ತಾ ಹೋದ ಕಾರಣದಿಂದ ಉದ್ಭವಿಸಿದ ಒಂದು ನಿರ್ದಿಷ್ಟ ದರದ ಹಣದುಬ್ಬರವು ಅರ್ಥವ್ಯವಸ್ಥೆಯ ಲಕ್ಷಣವೇ ಆಗಿತ್ತು. ಆದರೆ, ಅರ್ಥವ್ಯವಸ್ಥೆಯಲ್ಲಿ **"ಮಂದ"** ಪರಿಸ್ಥಿತಿ ಇರಲಿಲ್ಲ ಮತ್ತು ಆದ್ದರಿಂದ ವ್ಯರ್ಥವಾಗುವಂಥದ್ದೂ (waste) ಏನೂ ಇರಲಿಲ್ಲ.

"ಮಂದ" ಪರಿಸ್ಥಿತಿಗಳ ಅವಧಿ

ಇದಕ್ಕೆ ವ್ಯತಿರಿಕ್ತವಾಗಿ, ನವ ಉದಾರವಾದಿ ಅವಧಿಯ ಗುರುತೆಂದರೆ, ದೀರ್ಘಕಾಲದ **"ಮಂದ"** ಪರಿಸ್ಥಿತಿ. ಅದನ್ನು ತೊಲಗಿಸಲಾಗದು. ಏಕೆಂದರೆ, ಈ ಉದ್ದೇಶಕ್ಕಾಗಿ ಸರ್ಕಾರವು ಹೆಚ್ಚು ಹೆಚ್ಚು ಖರ್ಚು-ವೆಚ್ಚಗಳನ್ನು ಕೈಗೊಳ್ಳಬೇಕಾಗುತ್ತದೆ. ಅದಕ್ಕಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳಲು ಶ್ರೀಮಂತರ ಮೇಲೆ ಹೆಚ್ಚು ಹೆಚ್ಚು ತೆರಿಗೆ ವಿಧಿಸ ಬೇಕಾಗುತ್ತದೆ ಮತ್ತು ವಿತ್ತೀಯ ಕೊರತೆಯ ಮೊರೆ ಹೋಗಬೇಕಾಗುತ್ತದೆ. ಆದರೆ, ಶ್ರೀಮಂತರ ಮೇಲೆ ತೆರಿಗೆ ವಿಧಿಸುವ ಬಗ್ಗೆ ಮತ್ತು ವಿತ್ತೀಯ ಕೊರತೆಯ ವಿಷಯದಲ್ಲಿ ಸರ್ಕಾರವು ನಿರ್ಬಂಧಿತವಾಗಿದೆ. ಈ ಎರಡೂ ಮಿತಿಗಳನ್ನು ಜಾಗತೀಕರಣಗೊಂಡ ಹಣಕಾಸು ಬಂಡವಾಳವು ವಿಧಿಸಿದೆ. ನವ ಉದಾರವಾದಿ ಅವಧಿಯುದ್ದಕ್ಕೂ, ಅರ್ಥವ್ಯವಸ್ಥೆಯು ಬಳಕೆಯಾಗದ ಉತ್ಪಾದನಾ-ಸಾಮರ್ಥ್ಯ, ಬೃಹತ್ ನಿರುದ್ಯೋಗ, ಮಾರಾಟವಾಗದೆ ಉಳಿದ ಆಹಾರ ಧಾನ್ಯಗಳ ಬೃಹತ್ ದಾಸ್ತಾನುಗಳು ಮತ್ತು ಬೃಹತ್ ವಿದೇಶಿ ವಿನಿಮಯ ಸಂಗ್ರಹ (ವಿದೇಶಿ ಬಂಡವಾಳ ಹೂಡಿಕೆಯ ಒಳಹರಿವಿನ ಮೂಲಕ) ವನ್ನು ಕಂಡಿತು. ಹೀಗೆ ನಿಯಂತ್ರಣ ನೀತಿಗಳ ಅವಧಿಯಲ್ಲಿ ಅರ್ಥವ್ಯವಸ್ಥೆಯು ಪೂರೈಕೆ-ನಿರ್ಬಂಧಿತವಾಗಿದ್ದರೆ, ನವ ಉದಾರವಾದಿ ಅವಧಿಯಲ್ಲಿ ಅದು ಬೇಡಿಕೆ-ನಿರ್ಬಂಧಿತವಾಗಿತ್ತು. ಆದ್ದರಿಂದ, ನವ ಉದಾರವಾದಿ ಅವಧಿಯಲ್ಲಿ 'ವ್ಯರ್ಥ' ಎಂಬುದು ಸದಾ ಕಂಡು ಬರುತ್ತಿತ್ತು, ಇದು ಅವಿವೇಕತನ.

ಅದಷ್ಟೇ ಅಲ್ಲ. ಆಹಾರ ಧಾನ್ಯಗಳ ತಲಾ ಬೇಡಿಕೆಯ ಬೆಳವಣಿಗೆ ದರವು ಎರಡು ಅಂಶಗಳ ಮೇಲೆ ಅವಲಂಬಿತವಾಗಿದೆ: ಜಿಡಿಪಿಯ ತಲಾ ಬೆಳವಣಿಗೆಯ ದರ, ಮತ್ತು ಆಹಾರ ಧಾನ್ಯಗಳ ಬೇಡಿಕೆಯ ಸರಾಸರಿ ಆದಾಯ ಸ್ಥಿತಿಸ್ಥಾಪಕತ್ವ. ಆದಾಯಗಳ ಈ ಸ್ಥಿತಿಸ್ಥಾಪಕತ್ವವು ವರ್ಗಗಳಾದ್ಯಂತ ಆದಾಯದ ವಿತರಣೆಯನ್ನು ಅವಲಂಬಿಸಿರುತ್ತದೆ. ಆದಾಯಗಳ ಅಸಮಾನತೆಯ ಹೆಚ್ಚಳದ ಪರಿಣಾಮವೆಂದರೆ ಆಹಾರ ಧಾನ್ಯಗಳ ಬೇಡಿಕೆ ತಗ್ಗುವುದು. ನಿಯಂತ್ರಣ ನೀತಿಗಳು ಮತ್ತು ನವ ಉದಾರವಾದಿ ಅವಧಿಗಳ ನಡುವೆ, ಆಹಾರ ಧಾನ್ಯಗಳ ಪೂರೈಕೆಯ ಬೆಳವಣಿಗೆ ದರ ಏರಿಕೆಯಾಗಿಲ್ಲ. ಪೂರೈಕೆಯ ಬೆಳವಣಿಗೆ ದರದ ಏರು-ಪೇರುಗಳನ್ನು ಗಮನಿಸಿದರೆ, ಅದು ತುಸು ಇಳಿಕೆಯಾಗಿರುವುದು ಕಂಡುಬರುತ್ತದೆ. ಹಿಂದೆ ಆಹಾರ ಧಾನ್ಯಗಳ ಕೊರತೆಯ ಪರಿಸ್ಥಿತಿ ಸದಾ ಕಾಲವೂ ಇತ್ತು. ಈಗ ಧಾನ್ಯಗಳ ಸಂಗ್ರಹವು ಬೃಹತ್ ಪ್ರಮಾಣದಲ್ಲಿದೆ. ಆದ್ದರಿಂದ, ಅಂದಿನಿಂದ ಇಂದಿನವರೆಗಿನ ಅವಧಿಯಲ್ಲಿ ಆಹಾರ ಧಾನ್ಯಗಳ ಮೇಲಿನ ಬೇಡಿಕೆಯ ಬೆಳವಣಿಗೆ ದರ ಇಳಿಕೆಯಾಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ, ಅಂದಿನಿಂದ ಇಂದಿನವರೆಗಿನ ಅವಧಿಯಲ್ಲಿ ತಲಾ ಜಿಡಿಪಿಯ ಬೆಳವಣಿಗೆ ದರ ಏರಿಕೆಯಾಗಿದೆ ಎಂದು ಅಂದಾಜುಗಳು ಹೇಳುತ್ತವೆ. ಹಾಗಾಗಿ, ಆಹಾರ ಧಾನ್ಯಗಳ ಮೇಲಿನ ಬೇಡಿಕೆಯ ಬೆಳವಣಿಗೆ ದರ ಇಳಿಕೆಯಾದ ಏಕೈಕ ಕಾರಣವೆಂದರೆ, ನವ ಉದಾರವಾದಿ ಅವಧಿಯಲ್ಲಿ ಆದಾಯದ

ಪುಟ 14 ಕ್ಕೆ

ನಟ ಚೇತನ್ ಬಂಧನ; ಅಭಿವ್ಯಕ್ತಿ ಸ್ವಾತಂತ್ರ್ಯ ಮೇಲಿನ ದಾಳಿಯನ್ನು ಸರ್ಕಾರ ನಿಲ್ಲಿಸಬೇಕು

ನಟ, ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾರವರ ಬಂಧನವನ್ನು ಖಂಡಿಸಿರುವ 'ಜಾಗೃತ ನಾಗರಿಕರು ಕರ್ನಾಟಕ'ವು, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ದಾಳಿಯನ್ನು ಸರಕಾರ ತಕ್ಷಣ ನಿಲ್ಲಿಸಬೇಕು ಎಂದು ಆಗ್ರಹಿಸಿದೆ.

ಇದು ಪ್ರಭುತ್ವ ಪ್ರಾಯೋಜಿತ ಭಯೋತ್ಪಾದನೆ ಎಂದು ಕರೆದಿರುವ 'ಜಾಗೃತ ನಾಗರಿಕರು ಕರ್ನಾಟಕ', ದೇಶವೊಂದು ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಸರ್ವಾಧಿಕಾರಕ್ಕೆ ಹೊರಳುತ್ತಿರುವುದರ ನೇರ ಉದಾಹರಣೆ ಕರ್ನಾಟಕದಲ್ಲಿ ಪ್ರತಿನಿತ್ಯ ಕಾಣಸಿಗುತ್ತಿದೆ ಎಂದಿದೆ.

ಇಲ್ಲ ಸಲ್ಲದ ಕಾಲ್ಪನಿಕ ಸಂಗತಿಗಳನ್ನು ಹುಟ್ಟುಹಾಕಿ ಸಮುದಾಯಗಳ ಮಧ್ಯದಲ್ಲಿ ದ್ವೇಷ ಹುಟ್ಟುಹಾಕಿ ಸಾಮರಸ್ಯ ಹಾಳುಗೆಡುಹಲಾಗುತ್ತಿದೆ. ಉರಿಗೌಡ, ದೊಡ್ಡ ನಂಜೇಗೌಡ ಪ್ರಹಸನ ಎಬ್ಬಿಸಿ ಒಂದು ಸಮುದಾಯದ ಜನರನ್ನು ಕೊಲೆಗಡುಕರೆಂದು ಬಿಂಬಿಸಲಾಯಿತು. ಸಹಜವಾಗಿಯೇ ಇದಕ್ಕೆ ಪ್ರತಿರೋಧ ಬರುತ್ತದೆ. ಪ್ರತಿರೋಧ ಸಂವಿಧಾನ ದತ್ತ ಹಕ್ಕು. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿ ನಡೆಸುವುದು ಎಂದರೆ ಸಂವಿಧಾನದ ಮೇಲೆ ದಾಳಿ ನಡೆಸುವುದು ಎಂದೇ ಅರ್ಥ ಎಂದು ಹೇಳಿದೆ.

ಇಂತಹ ಕಪೋಲ ಕಲ್ಪಿತ, ಕಾಲ್ಪನಿಕ ಕಥೆ ಕಟ್ಟಿದರೆ ಭಾವನೆಗಳಿಗೆ ದಕ್ಕೆ ಉಂಟಾಗದವರು, ದೇಶದ ಬಹುತ್ವಕ್ಕೆ ಧಕ್ಕೆ ಉಂಟುಮಾಡಿದಾಗ ನೋವು ಅನುಭವಿಸದ ಸಂವಿಧಾನ ವಿರೋಧಿಗಳು ದೂರು ನೀಡಿದರೆ ತಕ್ಷಣವೇ



ನಟ ಚೇತನ್ ರವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಇದನ್ನು ನಾವು ಖಂಡಿಸುತ್ತೇವೆ. ಪ್ರಜಾಪ್ರಭುತ್ವಕ್ಕೆ ಮಾಡುವ ಈ ಅಪಚಾರವನ್ನು ಸಹಿಸಲಾಗದು ಎಂದಿದೆ.

ಸಾರ್ವಜನಿಕ ವೇದಿಕೆಗಳಲ್ಲಿ ಜನಪ್ರತಿನಿದಿಗಳು ಎನಿಸಿಕೊಂಡ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ, ಬಸನಗೌಡ ಪಾಟೀಲ್ ಯತ್ನಾಳ್, ಸಚಿವರಾದ ಡಾ. ಸಿ.ಎನ್. ಅಶ್ವಥ್ ನಾರಾಯಣ ಮುಂತಾದವರು ದ್ವೇಷ ಭಾಷಣಗಳನ್ನು ಮಾಡಿದ್ದಾರೆ. ಇದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇದಲ್ಲದೇ ಹಿಂದುತ್ವವಾದಿಗಳೆಂದು ಕರೆದುಕೊಳ್ಳುವ ಸಂಘಟನೆಗಳ ನಾಯಕರು ತಾವು ಬೀದಿಗಿಳಿದರೆ ಶವ ಸಂಸ್ಕಾರಕ್ಕೆ ಸ್ಮಶಾನಗಳು ಸಾಲದಾಗುತ್ತವೆ ಎಂಬಿತ್ಯಾದಿ ನೇರ ಹತ್ಯಾಕಾಂಡವೆಸಗುವ ಮಾತುಗಳನ್ನು ಆಡಿದ್ದೂ ಇದೇ ರಾಜ್ಯದಲ್ಲಿ. ಅವರ್‍ಯಾರ ವಿರುದ್ಧ ಎಫ್.ಐ.ಆರ್. ದಾಖಲಿಸದ ಬಿ.ಜೆ.ಪಿ. ಸರಕಾರ, ಪೊಲೀಸ್ ಇಲಾಖೆ ಚೇತನ್ ರವರ ಟ್ವೀಟ್‌ನ್ನು ನೆಪಮಾಡಿಕೊಂಡು ದೂರು ದಾಖಲಿಸಿ, ಬಂಧನಕ್ಕೆ ಒಳಪಡಿಸಿದೆ. ಇದು ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಜಾಗೃತ ನಾಗರಿಕರು ಕರ್ನಾಟಕ ಎಂದಿದೆ.

ತಕ್ಷಣವೇ ಬೇಷರತ್ತಾಗಿ ಚೇತನ್ ರವರ ಬಿಡುಗಡೆಗೆ ಅಗತ್ಯವಾದ ಕ್ರಮಗಳನ್ನು ಸರಕಾರ ಕೈಗೊಳ್ಳಬೇಕು. ಚುನಾವಣೆಯ ಹೊಸ್ತಿಲಲ್ಲಿ ಬೇರೆಬೇರೆ ಹೆಸರಿನಲ್ಲಿ ದೂರು ದಾಖಲಿಸುವುದು,ಕಿರುಕುಳ ನೀಡುವುದು, ಭಯ ಹುಟ್ಟಿಸುವುದು ಇಂತಹ ವರ್ತನೆಗಳನ್ನು ನಿಲ್ಲಿಸಬೇಕೆಂದು ಆಗ್ರಹಿಸಿದ್ದಾರೆ.

ಹಿಂದುತ್ವ ಎನ್ನುವ ಅಧಿಕೃತ ಧರ್ಮವೇ ಇಲ್ಲದಿರುವಾಗ ಧಾರ್ಮಿಕ ಭಾವನೆಗಳಿಗೆ ನೋವು ಉಂಟು ಮಾಡುವ ಎನ್ನುವ ಕಾನೂನನ್ನು ಸರಕಾರ ಹೇಗೆ ಬಳಸಲು ಸಾಧ್ಯ? ನಮ್ಮ ಘನತೆವೆತ್ತ ನ್ಯಾಯಾಂಗ ಈ ಅಂಶವನ್ನು ಪರಿಶೀಲನೆ ನಡೆಸಬೇಕೆಂದು ವಿನಂತಿಸಿಕೊಂಡಿದ್ದಾರೆ.

ಜಾಗೃತ ನಾಗರಿಕರು ಕರ್ನಾಟಕ ಪರವಾಗಿ, ಪ್ರೊ.ಕೆ.ಮರುಳಸಿದ್ದಪ್ಪ, ಪ್ರೊ. ಎಸ್.ಜಿ.ಸಿದ್ದರಾಮಯ್ಯ, ಡಾ.ಜಿ.ರಾಮಕೃಷ್ಣ, ಡಾ.ವಿಜಯಾ, ಡಾ.ರಾಜೇಂದ್ರ ಚೆನ್ನಿ, ಡಾ.ಬಂಜಗೆರೆ ಜಯಪ್ರಕಾಶ್, ವಿಮಲಾ.ಕೆ.ಎಸ್., ಬಿ.ಶ್ರೀಪಾದ ಭಟ್, ರುದ್ರಪ್ಪ ಹನಗವಾಡಿ, ಡಾ.ವಸುಂಧರಾ ಭೂಪತಿ, ಶಶಿಧರ್ ಜೆ.ಸಿ., ಡಾ.ಮೀನಾಕ್ಷಿ ಬಾಳಿ, ಡಾ.ನಿರಂಜನಾರಾಧ್ಯ ವಿ.ಪಿ., ಟಿ.ಸುರೇಂದ್ರ ರಾವ್, ವಿಶುಕುಮಾರ್ ಎನ್.ಆರ್., ಬಿ.ಎನ್ ಯೋಗಾನಂದ, ವಾಸುದೇವ ಉಚ್ಚಿಲ ಮತ್ತಿತರರು ಹೇಳಿಕೆಗೆ ಒಮ್ಮತವನ್ನು ಸೂಚಿಸಿದ್ದಾರೆ.

ಟೋಲ್ ಶುಲ್ಕ ಹೆಚ್ಚಳದ ವಿರುದ್ಧ ದೇಶವ್ಯಾಪಿ ರಸ್ತೆ ತಡೆ... ಪುಟ 12 ರಿಂದ

ವಾಹನ ಸಂಚಾರ ಸಾಂದ್ರತೆಯನ್ನು ಪರಿಗಣಿಸಿಯೇ ಟೋಲ್ ಶುಲ್ಕವನ್ನು ನಿಗದಿಪಡಿಸಲಾಗಿದೆ. ಕೆಲವು ವರ್ಷಗಳ ನಂತರ ಟೋಲ್ ದರವನ್ನು ಹೆಚ್ಚಿಸುವುದು ಕಾನೂನುಬಾಹಿರ ಮತ್ತು ಅನೈತಿಕವಾಗಿದೆ. ಇಂಧನ ಶುಲ್ಕಗಳು, ವಿಮಾ ಕಂತುಗಳು ಮತ್ತು ಟೋಲ್ ಶುಲ್ಕಗಳ ಅಸಹಜ ಹೆಚ್ಚಳದಿಂದಾಗಿ ಇಡೀ ಉದ್ಯಮವು ಗಂಭೀರ ಆರ್ಥಿಕ ಬಿಕ್ಕಟ್ಟಿನಲ್ಲಿರುವ ಸಮಯದಲ್ಲಿ, ಉದ್ಯಮವು ಬಿಕ್ಕಟ್ಟಿನಿಂದ ಹೊರಬರಲು ಕೆಲವು ರಿಯಾಯಿತಿಗಳ ಅಗತ್ಯವಿದೆ. ತದ್ವಿರುದ್ಧವಾಗಿ ಟೋಲ್ ಶುಲ್ಕಗಳ ಹೆಚ್ಚಳವು ಆರ್ಥಿಕತೆಯ ಜೀವನ ರೇಖೆಯಾದ ಉದ್ಯಮವನ್ನು ಇನ್ನಷ್ಟು ಹಾಳುಮಾಡುತ್ತದೆ ಎಂದು ಎಐಆರ್‌ಟಿಡಬ್ಲ್ಯುಎಫ್ ಅಭಿಪ್ರಾಯ ಪಟ್ಟಿದೆ.

ಭಾರತ ಸರ್ಕಾರವು ಪೆಟ್ರೋಲ್, ಡೀಸೆಲ್ ಮೇಲೆ ರಸ್ತೆ ಅಭಿವೃದ್ಧಿ ಸೆಸ್ ಸಂಗ್ರಹಿಸುತ್ತಿದೆ ಎಂಬುದನ್ನು ಇಲ್ಲಿ ಖಂಡಿತಾ ಉಲ್ಲೇಖಿಸಬಹುದು. ನಂತರ ಅದನ್ನು "ಮೂಲಸೌಕರ್ಯ ಅಭಿವೃದ್ಧಿ ಸೆಸ್" ಎಂದು ಬದಲಾಯಿಸಲಾಗಿದೆ. ಆ ಸೆಸ್ ಅನ್ನು ರಸ್ತೆಗಳ ನಿರ್ಮಾಣ, ನಿರ್ವಹಣೆ ಮತ್ತು ಕಾರ್ಯಾಚರಣೆಗೆ ಬಳಸಿಕೊಳ್ಳಬೇಕು. ಆದ್ದರಿಂದ ಟೋಲ್ ಸಂಗ್ರಹಿಸುವುದು ಕಾನೂನುಬಾಹಿರ ಮತ್ತು ಜನಗಳ ಲೂಟಿಯಲ್ಲದೆ ಬೇರೇನೂ ಅಲ್ಲ ಎಂದಿರುವ ಎಐಆರ್‌ಟಿಡಬ್ಲ್ಯುಎಫ್ ಇದರ ವಿರುದ್ಧ ಮಾರ್ಚ್ 31ರ ಸಾಂಕೇತಿಕ ಕಾರ್ಯಾಚರಣೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದೆ.

ಉರಿಗೌಡ, ನಂಜೇಗೌಡ ಐತಿಹಾಸಿಕ ವ್ಯಕ್ತಿಗಳೋ, ಕಾಲ್ಪನಿಕವೊ....... ಪುಟ 11 ರಿಂದ

ಕಟ್ಟಬೊಮ್ಮನ್ ಅವರ ಕಿರಿಯ ಸಹೋದರ ಊಮೈತುರೈಗೆ ಆಶ್ರಯ ನೀಡಿದರು ಎಂಬ ಕಾರಣ ನೀಡಿ ಈ ರಾಜ್ಯದ ಮೇಲೆ ಬ್ರಿಟಿಷರು ಮೇ 28, 1801 ರಂದು ಮತ್ತೆ ಯುದ್ಧ ಪ್ರಾರಂಭಿಸುತ್ತಾರೆ. 150 ದಿನಗಳ ಕಾಲ ಯುದ್ದ ನಡೆಯುತ್ತದೆ. ಕಳಯಾರ್ಕೊದ ಕಾಡುಗಳಲ್ಲಿ ಬ್ರಿಟೀಷ್ ಸೈನಿಕರ ವಿರುದ್ದ ಗೆರಿಲ್ಲಾ ಯುದ್ಧ ನಡೆಯುತ್ತದೆ. ಪುದುಕೊಟ್ಟೈನ ರಾಜ ತೊಂಡೈಮಾನ್ ಬ್ರಿಟಿಷರಿಗೆ ಸಹಾಯ ಮಾಡಲು ತನ್ನ ಸೈನ್ಯವನ್ನು ಕಳುಹಿಸುತ್ತಾನೆ.

ಮರುದು ಸಹೋದರರು ಮತ್ತು ಇತರ ಸ್ವಾತಂತ್ರ್ಯ ಹೋರಾಟಗಾರರನ್ನು ಸೆರೆಹಿಡಿದವರಿಗೆ ಬಹುಮಾನ ಕೊಡಲಾಗುವುದು ಎಂದು ಬ್ರಿಟೀಷರು ಘೋಷಿಸುತ್ತಾರೆ. ಕಲ್ಯಾರ್ಕೊದಲ್ಲಿ ಅರಣ್ಯವನ್ನು ನಾಶಪಡಿಸುವ ಯಾರಿಗಾದರೂ ಆ ಸಂಪೂರ್ಣ ಅರಣ್ಯ ಭೂಮಿಯನ್ನು 20 ವರ್ಷಗಳವರೆಗೆ ಉಚಿತವಾಗಿ ನೀಡಲಾಗುವುದು ಎಂದು ಬ್ರಿಟೀಷರು ಘೋಷಿಸುತ್ತಾರೆ.

ಮರುದು ಸಹೋದರರನ್ನು ಕಡೆಗೂ ಕಳಯಾರ್ ಕೋವಿಲ್‌ನಲ್ಲಿ ಬಂಧಿಸಲಾಗುತ್ತದೆ. ಅಲ್ಲಿಗೆ ಶಿವಗಂಗೆಯ ಸ್ವತಂತ್ರ ಆಳ್ವಿಕೆ ಕೊನೆಗೊಳ್ಳುತ್ತದೆ. ಶಿವಗಂಗಾ ರಾಜ ವೆಂಗಂ ವೊಡೀನಾತೇವರ್ ಅವರನ್ನು ಬಂಧಿಸಿ ಗಡಿಪಾರು ಮಾಡಲಾಗುತ್ತದೆ. ಪಗನೇರಿ ರಾಜ ವಲುಕು ವೇಲಿ ಅಂಬಲಂ ಮರುದು ಸಹೋದರರನ್ನು ರಕ್ಷಿಸಲು ಮಾಡಿದ ಪ್ರಯತ್ನಗಳು ವಿಫಲವಾಗುತ್ತವೆ.

ಮರುದು ಸಹೋದರರನ್ನು ಬ್ರಿಟೀಷರು 24–10–1801 ರಂದು ತಿರುಪತ್ತೂರ್ ಕೋಟೆಯಲ್ಲಿ ಗಲ್ಲಿಗೇರಿಸುತ್ತಾರೆ. ಮರುದು ಸಹೋದರರ ಅಪೇಕ್ಷೆಯಂತೆ ಅವರ ತಲೆಗಳನ್ನು ಕಲ್ಯೆಯಾರ್ ದೇವಸ್ಥಾನದ ಮುಂದೆ ಹೂಳಲಾಗಿದೆ ಎಂದು ನಂಬಲಾಗಿದೆ.

–ಸಿಚಿ

ಈಗ ದುಡಿಯುವ ಜನಗಳಿಗೆ ಹೆಚ್ಚು ಕೆಟ್ಟದಾಗಿರುತ್ತದೆ

ಪುಟ 13 ರಿಂದ

ಅಸಮಾನತೆಗಳು ಹಿಂದಿನ ನಿಯಂತ್ರಣ ನೀತಿಗಳ ಅವಧಿಗೆ ಹೋಲಿಸಿದರೆ ಗಮನಾರ್ಹವಾಗಿ ಏರಿಕೆಯಾಗಿವೆ ಎಂಬುದು.

ಅಸಮಾನತೆಯ ಗಮನಾರ್ಹ ಹೆಚ್ಚಳದ ಅವಧಿ

ಡಿರಿಜಿಸ್ಟೆ ಅಂದರೆ ನಿಯಂತ್ರಣ ನೀತಿಗಳ ಅವಧಿಯು ಪೂರೈಕೆ–ನಿರ್ಬಂಧಿತವಾಗಿತ್ತು (ಮುಖ್ಯವಾಗಿ ಆಹಾರ ಧಾನ್ಯಗಳ ಕೊರತೆಯ ಮೂಲಕ). ನವ ಉದಾರವಾದಿ ಅವಧಿಯು ಬೇಡಿಕೆ–ನಿರ್ಬಂಧಿತವಾಗಿದೆ. ನಿಯಂತ್ರಣ ನೀತಿಗಳ ಅವಧಿಗೆ ಹೋಲಿಸಿದರೆ ನವ ಉದಾರವಾದಿ ಅವಧಿಯಲ್ಲಿ ವರಮಾನಗಳ ಅಸಮಾನತೆಯು ಗಮನಾರ್ಹ ಹೆಚ್ಚಳವಾಗಿದೆ ಎಂಬುದನ್ನು ಅಂಕಿಅಂಶಗಳು ನಿಖರವಾಗಿ ತೋರಿಸುತ್ತವೆ. ಒಂದು ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ಪಿಕೆಟಿ ಮತ್ತು ಚಾನ್ಸೆಲ್ ಇವರುಗಳ ಅಂದಾಜಿನ ಪ್ರಕಾರ, ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ರಾಷ್ಟ್ರೀಯ ಆದಾಯದಲ್ಲಿ ಮೇಲ್ತುದಿಯ ಶೇ. 1ರಷ್ಟು ಮಂದಿಯ ಪಾಲು ಇಳಿಯುತ್ತಾ ಹೋಗಿ 1982ರಲ್ಲಿ ಶೇ. 6ರ ಕೆಳ ಮಟ್ಟಕ್ಕೆ ಇಳಿದಿತ್ತು. ಆದರೆ, ನಂತರದಲ್ಲಿ ಈ ಪಾಲು 2014–15ರ ವೇಳೆಗೆ ಶೇ. 22ಕ್ಕೆ ಏರಿಕೆಯಾಗಿತ್ತು (ಅಂದಾಜುಗಳು ಲಭ್ಯವಿರುವ ಇತ್ತೀಚಿನ ವರ್ಷ). ಈ ಸಂಖ್ಯೆಯು (ಶೇ. 22), 1922ರಲ್ಲಿ ಮೊದಲ ಬಾರಿಗೆ ಆದಾಯ ತೆರಿಗೆಯನ್ನು ಪರಿಚಯಿಸಿದಾಗಿನಿಂದ ಹಿಡಿದು 2014–15ರ ವರೆಗಿನ ಇಡೀ ಅವಧಿಯಲ್ಲಿ ತಲುಪಿದ ಅತ್ಯಧಿಕ ಮಟ್ಟವನ್ನು ಪ್ರತಿನಿಧಿಸುತ್ತದೆ (ಈ ಎಲ್ಲಾ ಅಂದಾಜುಗಳು ಆದಾಯ ತೆರಿಗೆ ದತ್ತಾಂಶವನ್ನು ಆಧರಿಸಿವೆ ಮತ್ತು ದತ್ತಾಂಶಗಳು 1922ರ ನಂತರದ ವರ್ಷಗಳಿಗೆ ಮಾತ್ರ ಲಭ್ಯ). ಈ ಫಲಿತಾಂಶವು ಎಷ್ಟು ಆಘಾತಕಾರಿಯಾಗಿದೆ ಎಂದರೆ, ಪಿಕೆಟಿ ಮತ್ತು ಚಾನ್ಸೆಲ್ ಅವರು ಅನುಸರಿಸಿದ ಅಂದಾಜು–ವಿಧಾನಗಳ ಬಗ್ಗೆ ಎಷ್ಟೇ ಆಕ್ಷೇಪಣೆಗಳಿದ್ದರೂ, ಅದರ ನಿಖರತೆಯನ್ನು ಅನುಮಾನಿಸಲಾಗದು.

ಈ ರೀತಿಯಲ್ಲಿ ಅರ್ಥವ್ಯವಸ್ಥೆಯು ಈ ಹಿಂದೆ ಇದ್ದ ಹಾಗೆ ಈಗ ಮತ್ತೊಮ್ಮೆ "ಬೆಳವಣಿಗೆಯ ಹಿಂದೂ ದರ" ಎಂದು ಕರೆಯಲಾದ ಪರಿಸ್ಥಿತಿಗೆ ಒಳಗಾಗಿದ್ದರೂ, ಆ ಅವಧಿಯಲ್ಲಿದ್ದಂತೆ ಪೂರೈಕೆ–ನಿರ್ಬಂಧಿತವಾಗಿರದೆ, ಈಗ ಬೇಡಿಕೆ–ನಿರ್ಬಂಧಿತವಾಗಿದೆ ಮತ್ತು ಗಮನಾರ್ಹ ಪ್ರಮಾಣದ ಅಸಮಾನತೆಗಳ ಹೆಚ್ಚಳ ಈ ಅವಧಿಯ ಲಕ್ಷಣವಾಗಿದೆ.

ಇಲ್ಲಿ ಇನ್ನೊಂದು ಅಧಿಕ ಅಂಶವೂ ಇದೆ. ಒಂದು ಬೇಡಿಕೆ–ನಿರ್ಬಂಧಿತ ಅರ್ಥವ್ಯವಸ್ಥೆಯಲ್ಲಿ ಬೆಳವಣಿಗೆಯು ನಿಧಾನಗೊಂಡರೆ, ಜಾಗತಿಕ ಬೆಳವಣಿಗೆಯ ದರದ ವೇಗವರ್ಧನೆಯಂತಹ ಒಂದು ಬಾಹ್ಯ ಉತ್ತೇಜನೆ ದೊರಕದೆ ಇದ್ದಾಗ, ಬೆಳವಣಿಗೆಯು ನಿಧಾನಗೊಳ್ಳುತ್ತಲೇ ಹೋಗುತ್ತದೆ. ಅದು ನಿಧಾನಗೊಳ್ಳುವ ಆರಂಭಿಕ ಹಂತದಲ್ಲಿ ಬಳಕೆಯಾಗದೆ ಉಳಿದ ಉತ್ಪಾದನಾ–ಸಾಮರ್ಥ್ಯದ ಪ್ರಮಾಣವು ಹೆಚ್ಚುತ್ತದೆ ಮತ್ತು ಈ ಪರಿಸ್ಥಿತಿಯ ಪರಿಣಾಮವಾಗಿ ಹೂಡಿಕೆಯ ದರ ಮತ್ತಷ್ಟು ತಗ್ಗುತ್ತದೆ ಮತ್ತು ಬೆಳವಣಿಗೆಯ ದರವನ್ನು ಕೆಳಗಿಳಿಸುತ್ತದೆ. "ಬೆಳವಣಿಗೆಯ ಹಿಂದೂ ದರ" ಎಂದು ಹಿಂದೆ ಕರೆಯಲಾದ ವಿದ್ಯಮಾನವು ಬಹಳ ಕಾಲ ಹಾಗೆಯೇ ಮುಂದುವರೆಯಿತು. ಆದರೆ, ಈಗ ಕರೆಯಲಾಗುವ "ಬೆಳವಣಿಗೆಯ ಹಿಂದೂ ದರ" ಅಷ್ಟೊಂದು ಕಾಲ ಮುಂದುವರೆಯದು ಏಕೆಂದರೆ, ಇದು ಮತ್ತಷ್ಟು ನಿಧಾನ–ಗತಿಗೆ ಕಾರಣವಾಗುತ್ತದೆ. ಅಂತಹ ಸಂದರ್ಭದಲ್ಲಿ ಈಗಾಗಲೇ ಸಂಭವಿಸಿರುವ ಅಸಮಾನತೆಯ ಹೆಚ್ಚಳವು ಮತ್ತಷ್ಟು ಹೆಚ್ಚಳದೊಂದಿಗೆ ಮುಂದುವರಿಯಬಹುದು, ಮತ್ತು ಅದು ದುಡಿಯುವ ಜನರ ಪರಿಸ್ಥಿತಿಗಳನ್ನು ಮತ್ತಷ್ಟು ಹದಗೆಡಿಸುತ್ತದೆ.

ರಘುರಾಮ ರಾಜನ್‌ರವರ ಆತಂಕವೆಂದರೆ, ಅರ್ಥವ್ಯವಸ್ಥೆಯ ಬೆಳವಣಿಗೆಯ ದರವು ನಿಯಂತ್ರಣ ನೀತಿಗಳ ಅವಧಿಯಲ್ಲಿ ಕಂಡ ದರಕ್ಕೆ ಮರಳುತ್ತಿದೆ ಎಂಬುದು; ಆದರೆ ಆ ಪರಿಸ್ಥಿತಿಗೆ ಮರಳಿದರೆ, ದುಡಿಯುವ ಜನರ ಪರಿಸ್ಥಿತಿಗಳು ಆಗ ಇದ್ದದ್ದಕ್ಕಿಂತಲೂ ಹೆಚ್ಚು ಕೆಟ್ಟದಾಗಿರುತ್ತವೆ. ■

ಇಡಿ/ ಸಿಬಿಐ ನಂತರ ಈಗ ಕ್ರಿಮಿನಲ್ ಮಾನಹಾನಿಯ ಅಸ್ತ್ರ–ಯೆಚೂರಿ

ಸೂರತ್ ಜಿಲ್ಲಾ ನ್ಯಾಯಾಲಯ 2019ರ ಕ್ರಿಮಿನಲ್ ಮಾನಹಾನಿ ಪ್ರಕರಣದಲ್ಲಿ ರಾಹುಲ್ ಗಾಂಧಿ ದೋಷಿ ಎಂದು ತೀರ್ಪು ನೀಡಿ ಎರಡು ವರ್ಷಗಳ ಶಿಕ್ಷೆ ವಿಧಿಸಿರುವ 24 ಗಂಟೆಗಳೊಳಗಾಗಿ ಅವರನ್ನು ಲೋಕಸಭಾ ಸದಸ್ಯ ಸ್ಥಾನಕ್ಕೆ ಅನರ್ಹಗೊಳಿಸಿರುವ ಅಧಿಸೂಚನೆಯನ್ನೂ ಪ್ರಕಟಿಸಲಾಗಿದೆ. ಗಮನಾರ್ಹ ಸಂಗತಿಯೆಂದರೆ, ಸೂರತ್ ನ್ಯಾಯಾಲಯ ಬಳಿಕ ಜಾಮೀನು ಮಂಜೂರು ಮಾಡಿ ತನ್ನ ತೀರ್ಪನ್ನು 30 ದಿನಗಳ ಕಾಲ ಅಮಾನತಿನಲ್ಲಿಟ್ಟಿದೆ ಎಂದೂ ವರದಿಯಾಗಿದೆ.

ಇದಕ್ಕೆ ಪ್ರತಿಕ್ಷಗಳಿಂದ ವ್ಯಾಪಕ ಪ್ರತಿಭಟನೆ ವ್ಯಕ್ತಗೊಂಡಿದೆ. ಬಿಜೆಪಿ ಈಗ ಪ್ರತಿಪಕ್ಷಗಳ ಮುಖಂಡರ ಮೇಲೆ ಗುರಿಯಿಡಲು ಕ್ರಿಮಿನಲ್ ಮಾನಹಾನಿಯ ದಾರಿಯನ್ನು ಬಳಸುತ್ತಿದೆ ಎಂದು ಇದನ್ನು ಖಂಡಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ. ಇಡಿ/ಸಿಬಿಐನ ಸಂಪೂರ್ಣ ದುರುಪಯೋಗವಲ್ಲದೆ ಈಗ ಇದನ್ನೂ ಮಾಡಲಾಗುತ್ತಿದೆ. ಇಂತಹ ನಿರಂಕುಶ ಪ್ರಹಾರಗಳನ್ನು ಪ್ರತಿರೋಧಿಸಿ ಸೋಲಿಸಬೇಕು ಎಂದು ಅವರು ಹೇಳಿದ್ದಾರೆ.

ಈ ಮೊದಲು ಅವರು ಪಂಜಾಬಿನ ಹೋಶಿಯಾರ್‌ಪುರದಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತ ಇದೇ ಮೊದಲ ಬಾರಿಗೆ ಆಳುವ ಪಕ್ಷ ಸಂಸತ್ತಿನ ಕಲಾಪವನ್ನು ಸ್ಥಗಿತಗೊಳಿಸಿದೆ, ಅದಕ್ಕೆ ನಿಜವಾದ ಕಾರಣ ರಾಹುಲ್ ಗಾಂಧಿಯವರ ಲಂಡನ್ ಸಂದರ್ಶನವಲ್ಲ, ಬದಲಾಗಿ ಅಳುವ ಪಕ್ಷ ಅದಾಣಿ ಹಗರಣಗಳಿಂದ ದೇಶದ ಗಮನವನ್ನು ಬೇರೆಡೆಗೆ ತಿರುಗಿಸಲು ಮತ್ತು ಈ ಹಗರಣದಲ್ಲಿ ಜೆಪಿಸಿ ತನಿಖೆಯ ಪ್ರಶ್ನೆಯಿಂದ ನುಣುಚಿಕೊಳ್ಳಲಿಕ್ಕಾಗಿ ಎಂದು ಅವರು ಹೇಳಿದರು. ಬಿಜೆಪಿ ಮತ್ತು ಪೊಲೀಸ್ ಪಡೆಗಳು ಮೋದಿ ಸರ್ಕಾರದ ಕ್ರಮಗಳ ಬಗ್ಗೆ ಯಾವುದೇ ಟೀಕೆಯನ್ನು ದೇಶ ವಿರೋಧಿ ಕೃತ್ಯ ಎಂದು ಬಣ್ಣಿಸುತ್ತಿವೆ. 'ಮೋದಿ ಹಟಾವೋ ದೇಶ್ ಬಚಾವೋ' ಎಂಬ ಪೋಸ್ಟರ್‌ಗಳಿಗಾಗಿ ದೆಹಲಿ ಪೊಲೀಸರು 200 ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ ಎಂಬ ಸುದ್ದಿಯನ್ನು ಉಲ್ಲೇಖಿಸುತ್ತ ಅವರು ಹೀಗೆ ಹೇಳಿದರು.

ಹಿಂಸಾತ್ಮಕ ದಾಳಿಯ ಅತ್ಯಂತ ಹೊಸ ಅಧ್ಯಾಯ–ವಿಜಯನ್


ಇದು ಪ್ರಜಾಪ್ರಭುತ್ವದ ಮೇಲೆ ಸಂಘಪರಿವಾರ ನಡೆಸುತ್ತಿರುವ ಹಿಂಸಾತ್ಮಕ ದಾಳಿಯ ಅತ್ಯಂತ ಹೊಸ ಅಧ್ಯಾಯವಾಗಿದೆ. ಮುಕ್ತವಾಗಿ ಅಭಿಪ್ರಾಯ ವ್ಯಕ್ತಪಡಿಸುವ ಜನ ಸಾಮಾನ್ಯರಿಗೆ ಇಲ್ಲಿ ರಕ್ಷಣೆಯಿದೆಯೆಂದು ಪ್ರಶ್ನಿಸುತ್ತ, ಬಿಜೆಪಿ ತನ್ನ ಅಧಿಕಾರ ಬಳಸಿ ಭಿನ್ನಾಭಿಪ್ರಾಯವನ್ನು ಹತ್ತಿಕ್ಕುತ್ತಿದೆ ಎಂದು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಖಂಡಿಸಿದ್ದಾರೆ.

ರಾಜ್ಯ ಸರಕಾರಗಳು ಬಿಜೆಪಿ ನೇತೃತ್ವದಲ್ಲಿ ಇರದ ರಾಜ್ಯಗಳಲ್ಲಿ ಕೇಂದ್ರೀಯ ಸಂಸ್ಥೆಗಳನ್ನು ದುರುಪಯೋಗ ಪಡಿಸಲಾಗುತ್ತಿದ್ದು ಆ ಮೂಲಕ ರಾಜಕೀಯ ಹಸ್ತಕ್ಷೇಪಕ್ಕೆ ಬಳಸಲಾಗುತ್ತಿದೆ. ಮನೀಶ್ ಸಿಸೋಡಿಯಾ ಮತ್ತು ರಾಹುಲ್ ಗಾಂಧಿ ವಿರುದ್ಧದ ಪ್ರಕರಣಗಳಿಗೆ ದೆಹಲಿಯಲ್ಲಿ ವಿರೋಧ ವ್ಯಕ್ತಪಡಿಸಿದ ಪ್ರತಿಪಕ್ಷಗಳ ಸಂಸದರನ್ನು ಬಂಧಿಸಿರುವುದು ಕೂಡಾ ಇದರ ಇನ್ನೊಂದು ಭಾಗವಾಗಿದೆ ಎಂದು ಪಿಣರಾಯಿ ವಿಜಯನ್ ಅಭಿಪ್ರಾಯ ಪಟ್ಟಿದ್ದಾರೆ.

ಟೀಕೆಗಳ ಬಗ್ಗೆ ಇರುವ ತೀವ್ರ ಅಸಹಿಷ್ಣುತೆ ನಮ್ಮ ಪ್ರಜಾಪ್ರಭುತ್ವಕ್ಕೆ ಅಪಾಯ ತಂದೊಡ್ಡುತ್ತಿದೆ. ರಾಹುಲ್ ಗಾಂಧಿ ಅವರ ವಿರುದ್ಧ ಕ್ರಮಗಳನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗಿದೆ ಮತ್ತು ಈ ಕ್ರಮದ ವಿರುದ್ಧ ತೀವ್ರವಾಗಿ ಪ್ರತಿರೋಧಿಸಲು ಪ್ರಜಾಪ್ರಭುತ್ವವಾದಿಗಳು ಒಗ್ಗೂಡಿ ಮುಂದೆ ಬರಬೇಕಾಗಿದೆ ಎಂದು ಪಿಣರಾಯಿ ವಿಜಯನ್ ಅವರು ಕರೆ ನೀಡಿದ್ದಾರೆ.

ಸೂರತ್ ನ್ಯಾಯಾಲಯ ಬ್ರಿಟಿಷ್ ವಸಾಹತುಶಾಹೀ ಕಾಲದ ಕಾನೂನಿನ ಅಡಿಯಲ್ಲಿ ಮಾನಹಾನಿಮೊಕದ್ದಮೆಯಲ್ಲಿ ವಿಧಿಸಬಹುದಾದ ಗರಿಷ್ಟ ಶಿಕ್ಷೆಯನ್ನು ವಿಧಿಸಿರುವುದು, ಅದು ಲೋಕಸಭಾ ಸದಸ್ಯತ್ವದ ಅನರ್ಹತೆಗೆ ತಕ್ಕುದಾಗಿರುವುದು, ಕಳೆದ ಕೆಲವು ದಿನಗಳಿಂದ ರಾಹುಲ್ ಗಾಂಧಿಯುವರನ್ನು ಅವರ ಲಂಡನ್ ಭಾಷಣಕ್ಕಾಗಿ ಅನರ್ಹಗೊಳಿಸಬೇಕೆಂದು ಪಟ್ಟುಹಿಡಿದು ಆಳುವ ಪಕ್ಷವೇ ಸಂಸತ್ತಿನ ಕಲಾಪಗಳು ನಡೆಯದಂತೆ ಮಾಡಿರುವುದು ಕೇವಲ ಕಾಕತಾಳಿಯವೇ ಎಂದು ಕೆಲವು ರಾಜಕೀಯ ವೀಕ್ಷಕರು ಪ್ರಶ್ನಿಸುತ್ತಿದ್ದಾರೆ.

ಇದು ಅಮೃತ ಕಾಲ



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಿಜಯ ಕರ್ನಾಟಕ

ಚರ್ಚೆಯಿಲ್ಲದೆ 12 ನಿಮಿಷಗಳಲ್ಲಿ ಬಜೆಟ್ ಅಂಗೀಕಾರ–ಹಣಕಾಸು ಮಸೂದೆ ಪಾಸ್

ಈ ಸಮಯದಲ್ಲೇ, ಒಂದು ಕಡೆಯಲ್ಲಿ ರಾಹುಲ್ ಗಾಂಧಿ ಕ್ಷಮೆ ಯಾಚಿಸಬೇಕು ಎಂದು ಆಳುವ ಪಕ್ಷದಪಟ್ಟು, ಇನ್ನೊಂದೆಡೆಯಲ್ಲಿ ಅದಾಣಿ ವ್ಯವಹಾರಗಳ ಕುರಿತು ಜೆಪಿಸಿ ತನಿಖೆ ನಡೆಸಬೇಕೆಂಬ ಪ್ರತಿಪಕ್ಷಗಳ ಪತ್ತಾಯದಿಂದ ಸಂಸತ್ತಿನ ಕಲಾಪಗಳಿಗೆ ತೀವ್ರ ಅಡ್ಡಿಯ ನಡುವೆಯೇ, ಲೋಕಸಭೆ 2023–24ರ ಬಜೆಟನ್ನು ಯಾವುದೇ ಚರ್ಚೆಯಿಲ್ಲದೆ 12 ನಿಮಿಷಗಳಲ್ಲಿ ಅಂಗೀಕರಿಸಲಾಯಿತು ಮತ್ತು ನಂತರ ಹಣಕಾಸು ಮಸೂದೆಯನ್ನೂ ಯಾವುದೇ ಚರ್ಚೆಯಿಲ್ಲದೆ ಪಾಸು ಮಾಡಲಾಯಿತು ಎಂಬ ಸುದ್ದಿ ಬಂದಿದೆ.

ಭಾರತೀಯ ಜನತೆಯ ಚುನಾಯಿತ ಪ್ರತಿನಿಧಿಗಳು ಪರಿಶೀಲಿಸದೆಯೇ 45ಲಕ್ಷ ಕೋಟಿ ರೂ.ಗಳನ್ನು ಭಾರತೀಯ ಜನತೆಯ ಹೆಸರಲ್ಲಿ ಸಂಗ್ರಹಿಸಿ ವೆಚ್ಚಮಾಡಲಾಗುವುದು, **ಇದೆಂತಹಾ ಸಂಸದೀಯ ಪ್ರಜಾಪ್ರಭುತ್ವದ ಮೋದಿ ಅಪಹಾಸ್ಯ** ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸೀತಾರಾಂ ಯೆಚುರಿ ಹೇಳಿದ್ದಾರೆ.

ಜಾತಿ ತಾರತಮ್ಯ, ಮೀಸಲಾತಿ, ವಿದ್ಯಾರ್ಥಿಗಳ ಮಾನಸಿಕ ಸಮಸ್ಯೆಗಳಿಗೆ 'ಪ್ರಧಾನ ಕಾರಣ': ಮುಂಬೈ ಐಐಟಿ ಎಸ್‌ಸಿ/ಎಸ್‌ಟಿ ಸೆಲ್ ಸಮೀಕ್ಷೆ

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ), ಬಾಂಬೆಯ ಪರಿಶಿಷ್ಟ ಜಾತಿ/ಬುಡಕಟ್ಟು ವಿದ್ಯಾರ್ಥಿ ಕೋಷ್ಠ(ಸೆಲ್) ನಡೆಸಿದ ಸಮೀಕ್ಷೆಯ ಪ್ರಕಾರ, ಕ್ಯಾಂಪಸ್‌ನಲ್ಲಿ ಮೀಸಲಾತಿ ವರ್ಗದ ವಿದ್ಯಾರ್ಥಿಗಳು ಎದುರಿಸುತ್ತಿರುವ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಜಾತಿ ತಾರತಮ್ಯವು ಪ್ರಧಾನ ಕಾರಣ".

ಕಳೆದ ವರ್ಷ ಜೂನ್‌ನಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ಭಾಗವಹಿಸಿದ ಸುಮಾರು ನಾಲ್ಕನೇ ಒಂದು ಭಾಗದಷ್ಟು ಪರಿಶಿಷ್ಟ ಜಾತಿ/ಬುಡಕಟ್ಟು ವಿದ್ಯಾರ್ಥಿಗಳು ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ ಎಂದು ತಿಳಿದು ಬಂದಿದೆ. ಅವರಲ್ಲಿ 7.5% ದಷ್ಟು ವಿದ್ಯಾರ್ಥಿಗಳು ಸ್ವಯಂ–ಹಾನಿಯ ಪ್ರವೃತ್ತಿಯನ್ನು ತೋರುವಷ್ಟು ತೀವ್ರವಾದ ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದು ಆತ್ಮಹತ್ಯೆಯ ಪ್ರಯತ್ನವನ್ನೂ ಒಳಗೊಳ್ಳುತ್ತದೆ ಎಂಬುದನ್ನು ಗಮನಿಸಬಹುದು.

ಪರಿಶಿಷ್ಟ ಜಾತಿ/ಬುಡಕಟ್ಟು ವಿದ್ಯಾರ್ಥಿ ಕೋಷ್ಠ, 2022 ರಲ್ಲಿ ಎರಡು ಸಮೀಕ್ಷೆಗಳನ್ನು ನಡೆಸಿತು. ಫೆಬ್ರವರಿಯಲ್ಲಿ ನಡೆದ ಮೊದಲ ಸಮೀಕ್ಷೆಯು ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ಕ್ಯಾಂಪಸ್ ಜೀವನದ ಮತ್ತು ಅವರು ಎದುರಿಸುತ್ತಿರುವ ಸವಾಲುಗಳ ಒಳನೋಟಗಳನ್ನು ಪಡೆಯಲು ದತ್ತಾಂಶಗಳನ್ನು ಸಂಗ್ರಹಿಸುವ ಗುರಿಯನ್ನು ಹೊಂದಿದ್ದರೆ, ಜೂನ್‌ನಲ್ಲಿ ನಡೆಸಲಾದ ಎರಡನೇ ಸಮೀಕ್ಷೆಯು ಮೀಸಲು ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಮೇಲೆ ಕೇಂದ್ರೀಕರಿಸಿತ್ತು ಎಂದು ವರದಿಯಾಗಿದೆ (ನ್ಯೂಸ್ ಕ್ಲಿಕ್, ಮಾರ್ಚ್ 13).

ಈ ಸಮೀಕ್ಷೆಗಳು ಇತ್ತೀಚೆಗೆ, ಫೆಬ್ರವರಿ 12 ರಂದು ಈ ಉನ್ನತ ಶಿಕ್ಷಣ ಸಂಸ್ಥೆಯ 18 ವರ್ಷದ ವಯಸ್ಸಿನ ದಲಿತ ವಿದ್ಯಾರ್ಥಿ ದರ್ಶನ್ ಸೋಲಂಕಿಯ ಸಾವಿನ ಹಿನ್ನೆಲೆಯಲ್ಲಿ ಮಹತ್ವ ಪಡೆದಿದೆ. ಆತ ತನ್ನ ಸೆಮಿಸ್ಟರ್ ಪರೀಕ್ಷೆಗಳು ಮುಗಿದ ಮರುದಿನ ಐಐಟಿ ಬಾಂಬೆಯ ಹಾಸ್ಟೆಲ್ ಬ್ಲಾಕ್‌ನ ಏಳನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದ.

ಆತನ ಸಾವಿಗೆ ಕ್ಯಾಂಪಸ್ ನಲ್ಲಿರುವ ತಾರತಮ್ಯದ ವಾತಾವರಣ ಕಾರಣ ಎಂಬ ತೀವ್ರ ಆರೋಪದ ಹಿನ್ನೆಲೆಯಲ್ಲಿ ಐಐಟಿ, ಬಾಂಬೆ ನೇಮಿಸಿದ ತನಿಖಾ ಸಮಿತಿ ಆತನ ಆತ್ಮಹತ್ಯೆಗೆ ಜಾತಿ ತಾರತಮ್ಯ ಕಾರಣವಲ್ಲ, ಶೈಕ್ಷಣಿಕವಾಗಿ ತನ್ನ ಪರಿಸ್ಥಿತಿ ಹದಗೆಡುತ್ತಿದೆ ಎಂಬ ತೀವ್ರ ನಿರಾಸೆ ಕಾರಣವಾಗಿರಬಹುದು ಎಂದು ತನ್ನ ಮಧ್ಯಂತರ ವರದಿಯಲ್ಲಿ ಹೇಳಿತ್ತು.

ಇದನ್ನು ಬಲವಾಗಿ ತಿರಸ್ಕರಿಸುವುದಾಗಿ ಹೇಳಿರುವ ಐಐಟಿ, ಬಾಂಬೆಯ ಅಂಬೇಡ್ಕರ್ ಪೆರಿಯಾರ್ ಫುಲೆ ಸ್ಟಡಿ ಸರ್ಕಲ್ **ಇದು "ಒಂದು ವೈಜ್ಞಾನಿಕ ಶಿಕ್ಷಣ ಸಂಸ್ಥೆಯ ಅತ್ಯಂತ ಅವೈಜ್ಞಾನಿಕ ದಸ್ತಾವೇಜು"** ಎಂದು ಬಲವಾಗಿ ಟೀಕಿಸಿದೆ.

ಮೇಲೆ ಹೇಳಿದ ಸಮೀಕ್ಷೆಗಳು ಇದನ್ನು ಪುಷ್ಟೀಕರಿಸುವಂತೆ ಕಾಣುತ್ತದೆ. ಇವು ದರ್ಶನ್ ಸೋಲಂಕಿಯ ಆತ್ಮಹತ್ಯೆಯ ಎಷ್ಟೋ ಮೊದಲು ನಡೆಸಿದ ಸಮೀಕ್ಷೆಗಳು ಎನ್ನುವುದು ಕೂಡ ಗಮನಾರ್ಹ. ಈಗ ಆತನ ಸಾವಿನ ನಂತರ ಬೆಳಕಿಗೆ ಬಂದಿದೆ.

ಸುಮಾರು 2,000 ದಷ್ಟಿರುವರುವ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಲ್ಲಿ 388 ವಿದ್ಯಾರ್ಥಿಗಳು ಫೆಬ್ರವರಿ ಸಮೀಕ್ಷೆಯಲ್ಲಿ ಮತ್ತು 134 ವಿದ್ಯಾರ್ಥಿಗಳು ಜೂನ್ ಸಮೀಕ್ಷೆಯಲ್ಲಿ ಭಾಗವಹಿಸಿದ್ದರು ಎಂದು ತಿಳಿದು ಬಂದಿದೆ. ಜೂನ್ 2022 ರ ಸಮೀಕ್ಷೆಯ ಪ್ರಕಾರ ಈ ಕ್ಯಾಂಪಸ್ ನಲ್ಲಿ 23.5% ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಮಾನಸಿಕ ಆರೋಗ್ಯ ಸಹಾಯದ ಅಗತ್ಯವಿದೆ, ಆದರೆ ಈ ಸಮೀಕ್ಷೆಯಲ್ಲಿ ಭಾಗವಹಿಸಿದ 27.4ಶೇ.ದಷ್ಟು ವಿದ್ಯಾರ್ಥಿಗಳಿಗೆ ಸಂಸ್ಥೆಯು ಒದಗಿಸುವ ಮಾನಸಿಕ ಆರೋಗ್ಯ ಸೇವೆಗಳಲ್ಲಿ ನಂಬಿಕೆಯ ಕೊರತೆ ಕಂಡುಬಂದಿದೆ.

ತಮ್ಮ ಜಾತಿಯನ್ನು ಕಂಡುಹಿಡಿಯುವ ಉದ್ದೇಶದಿಂದ ಸಹ–ವಿದ್ಯಾರ್ಥಿಗಳು ತಮ್ಮ ಪ್ರವೇಶ ಪರೀಕ್ಷೆಯ ರ್‍ಯಾಂಕ್ ಕೇಳಿದ್ದಾರೆ ಎಂದು 37% ಕ್ಕೂ ಹೆಚ್ಚು ದಲಿತ ಮತ್ತು ಆದಿವಾಸಿ ವಿದ್ಯಾರ್ಥಿಗಳು ಈ ಸಮೀಕ್ಷೆಯಲ್ಲಿ ತಿಳಿಸಿದ್ದಾರೆ. (ಸ್ಕ್ರಾಲ್.ಇನ್, ಮಾರ್ಚ್12)

ಸಮೀಕ್ಷೆಯಲ್ಲಿ ಭಾಗವಹಿಸಿದ 388 ವಿದ್ಯಾರ್ಥಿಗಳ ಪೈಕಿ 77 ವಿದ್ಯಾರ್ಥಿಗಳು ಕ್ಯಾಂಪಸ್ ನಲ್ಲಿ ತಾವು ಅಧ್ಯಾಪಕರು ಮತ್ತು ಸಹ–ವಿದ್ಯಾರ್ಥಿಗಳಿಂದ ತಾರತಮ್ಯಕ್ಕೆ ಒಳಗಾಗಿರುವುದಾಗಿ ಹೇಳಿದರು.

ಕ್ಯಾಂಪಸ್ ನಲ್ಲಿ ಮೇಲ್ವರ್ಗದ ವಿದ್ಯಾರ್ಥಿಗಳು ಜಾತಿವಾದಿ ಅಥವಾ ಮೀಸಲಾತಿ ವಿರೋಧಿ ತಮಾಷೆಗಳು, ವ್ಯಂಗ್ಯೋಕ್ತಿಗಳು, ಅಥವಾ ಹಾಡುಗಳನ್ನು ಬಹಿರಂಗವಾಗಿ ಹಂಚಿಕೊಂಡಿದ್ದಾರೆ ಎಂದು 93 ವಿದ್ಯಾರ್ಥಿಗಳು ಹೇಳಿದ್ದಾರೆ. ಕನಿಷ್ಠ ಒಂಬತ್ತು ವಿದ್ಯಾರ್ಥಿಗಳು ಅಧ್ಯಾಪಕರಿಂದಲೇ ತಮ್ಮ ಜಾತಿಯ ಬಗ್ಗೆ ವ್ಯಂಗ್ಯೋಕ್ತಿಗಳನ್ನು ಎದುರಿಸಿದ್ದಾರೆ.

ಮೇಲ್ಜಾತಿಯ ಸಹಪಾಠಿಯೊಬ್ಬ ಕಂಪ್ಯೂಟರ್ ಅಪ್ಲಿಕೇಷನ್‌ಗಳ ಬಗ್ಗೆ ಅನುಮಾನ ವ್ಯಕ್ತಪಡಿಸಿದಾಗ ಆತನನ್ನು "ಮೀಸಲು ಕೋಟಾ" ಗೆ ಸೇರಿದವನು ಎಂದು ತಮಾಷೆ ಮಾಡಿದ ಘಟನೆಯ ಅನುಭವವನ್ನು ಒಬ್ಬ ವಿದ್ಯಾರ್ಥಿ ತಿಳಿಸಿದ. ವಿಷಯದ ಜ್ಞಾನದ ಕೊರತೆ ದಲಿತ /ಆದಿವಾಸಿ ವಿದ್ಯಾರ್ಥಿಗಳ ಲಕ್ಷಣ ಎಂದೇ ಮೇಲ್ಜಾತಿ ಸಹಪಾಠಿಗಳು ತಮ್ಮ ವಾಟ್ಸಾಪ್ ಗ್ರೂಪ್‌ನಲ್ಲಿ ಹೇಳುತ್ತಾರೆ.

ಸಮೀಕ್ಷೆಗಳಲ್ಲಿ ಪ್ರತಿಕ್ರಿಯಿಸಿದ ಸುಮಾರು 26% ವಿದ್ಯಾರ್ಥಿಗಳು ತಮ್ಮ ಜಾತಿಯನ್ನು ತಿಳಿದುಕೊಳ್ಳುವ ಉದ್ದೇಶದಿಂದ ತಮ್ಮ ಉಪನಾಮವನ್ನು ಕೇಳಿದ್ದಾರೆ ಎಂದು ಹೇಳಿದ್ದಾರೆ.

ಈ ಸಮೀಕ್ಷೆಗಳಲ್ಲದೆ ಎಸ್‌ಸಿ–ಎಸ್‌ಟಿ ವಿದ್ಯಾರ್ಥಿ ಕೋಷ್ಠ ದಲಿತ ಮತ್ತು ಆದಿವಾಸಿ ಸಮುದಾಯದ ವಿದ್ಯಾರ್ಥಿಗಳು ತಮ್ಮ ಜಾತಿ ತಾರತಮ್ಯದ ಅನುಭವಗಳನ್ನು ಹಂಚಿಕೊಳ್ಳುವ ಬಹಿರಂಗ ಸಭೆಯನ್ನು ನಡೆಸಿತು. ಇದರಲ್ಲಿಯೂ ಸಹಪಾಠಿಗಳಿಂದ ಮತ್ತು ಅಧ್ಯಾಪಕರಿಂದ ತಾರತಮ್ಯದ ಹಲವು ಉದಾಹರಣೆಗಳು ಬೆಳಕಿಗೆ ಬಂದಿದ್ದವು.


ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ಸೆಲ್ ನಡೆಸಿದ ಈ ಸಮೀಕ್ಷೆಗಳಿಗೆ ಪ್ರತಿಕ್ರಿಯಿಸುತ್ತ ಐಐಟಿ ಬಾಂಬೆ ತಮಗೆ ಇನ್ನೂ ಸಮೀಕ್ಷೆಯ ಫಲಿತಾಂಶಗಳು ತಲುಪಿಲ್ಲ, ಆದರೆ ಸಮೀಕ್ಷೆಗಳಲ್ಲಿ ಎದ್ದಿರುವ ಸಮಸ್ಯೆಗಳನ್ನು ಪರಿಹರಿಸಲು ಎಸ್‌ಸಿ/ಎಸ್‌ಟಿ ವಿದ್ಯಾರ್ಥಿ ಕೋಷ್ಠವು ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಹೇಳಿದೆ.

ಎನ್‌ಸಿಎಸ್‌ಟಿ ನಿರ್ದೇಶನ

ಈ ನಡುವೆ ರಾಷ್ಟ್ರೀಯ ಪರಿಶಿಷ್ಟ ಬುಡಕಟ್ಟುಗಳ ಆಯೋಗ (ಎನ್‌ಸಿಎಸ್‌ಟಿ) ಐಐಟಿ, ಬಾಂಬೆ ಗೆ ಎಚ್ಚರಿಕೆ ನೀಡಿ ತಕ್ಷಣವೇ ಅದು ದಲಿತ ವಿದ್ಯಾರ್ಥಿಗಳ ವಿರುದ್ಧ ತಾರತಮ್ಯದ ಬಗ್ಗೆ ತನ್ನನ್ನು ಸಂವೇದನಾಶೀಲ ಗೊಳಿಸಿಕೊಳ್ಳಬೇಕು, ವಿದ್ಯಾರ್ಥಿ ಸಂಘಟನೆಗಳಲ್ಲಿ , ಬೋಧಕ ಸಂರಚನೆಗಳಲ್ಲಿ ಮತ್ತು ಮಾನಸಿಕ ಸಲಹೆಗಾರರ ನಡುವೆ ಅವರ ಪ್ರಾತಿನಿಧ್ಯವನ್ನು ತಕ್ಷಣವೇ ಖಾತ್ರಿ ಪಡಿಸಬೇಕು ಎಂದು ನಿರ್ದೇಶನ ನೀಡಿದೆ ಮತ್ತು ಬಹಿರಂಗವಾಗಿಯೇ ತನ್ನ ಜಾತಿವಾದಿ ಮತ್ತು ಮೀಸಲಾತಿ–ವಿರೋಧಿ ನಿಲುವನ್ನು ವ್ಯಕ್ತಪಡಿಸುತ್ತಿರುವ ಪ್ರಮುಖ ಮಾನಸಿಕ ಸಲಹೆಗಾರರಾದ ಹಿಮಾ ಅನರೆಡಿ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳು (ಅತ್ಯಾಚಾರ ತಡೆ) ಕಾಯ್ದೆಯ ಅಡಿಯಲ್ಲಿ ಎಫ್‌ಐಆರ್ ದಾಖಲಿಸಬೇಕು ನಿರ್ದೇಶನ ನೀಡಿದೆ ಎಂದು ವರದಿಯಾಗಿದೆ. (ಸಬ್‌ರಂಗ್, ಮಾರ್ಚ್ 25)

NEW No. MAG(3)/NPP/205/2021-2022
JANASHAKTHI KANNADA VARA PATRIKE MARCH 27-APRIL 2, 2023 Price: Rs. 10/- Date of Publication: 24 MARCH 2023 RNI No. KARKAN /2006/17926 Posted on 27-03-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

ಮಾರ್ಕ್ಸ್‌ವಾದ 'ಅನ್ಯ' ತತ್ತ್ವಶಾಸ್ತ್ರವೇ?



ಕೆಲವರು ಕೆಲವು ವಿಚಾರಗಳತ್ತ ಬೊಟ್ಟು ಮಾಡಿ, "ಇದು ಪರದೇಶದ ಚಿಂತನೆ, ಇದು ಪರದೇಶದ ತತ್ವ", "ಅವುಗಳು ನಮ್ಮ ದೇಶಕ್ಕೆ ಹೊಂದಿಕೆಯಾಗುವುದಿಲ್ಲ" ಎಂದು ಹೇಳುತ್ತಾರೆ. ಪ್ರತಿಯೊಂದು ದೇಶದ ತತ್ವಾದರ್ಶಗಳನ್ನು ಅಧ್ಯಯನ ಮಾಡಿದವರಂತೆ ಇಂಥವರು ಹೇಳಿತ್ತಿರುವುದು ಸತ್ಯ ಎಂದು ನಂಬುವ ಮುಗ್ಧರೂ ಇದ್ದಾರೆ. ಈ ವಿಚಾರಗಳು ಅವೈಜ್ಞಾನಿಕ ಮತ್ತು ನಿಜ ಜೀವನಕ್ಕೆ ಅನ್ವಯಿಸುವುದಿಲ್ಲ ಎಂದು ಹೇಳುವ ಮೂಲಕ, ಕೆಲವು ಸಿದ್ಧಾಂತಗಳ ಬಗ್ಗೆ ಜನರಲ್ಲಿ ದ್ವೇಷದ ಭಾವನೆಗಳನ್ನು ಹುಟ್ಟುಹಾಕುತ್ತ, ರಾಜಕೀಯ ಲಾಭ ಪಡೆಯುವ ಪ್ರಯತ್ನ ಮಾಡುತ್ತಾರೆ. ದೇಶದೊಳಗೆ ಜನರ ರಾಷ್ಟ್ರೀಯತೆಯ ಭಾವನೆಗಳನ್ನು ಕೆರಳಿಸುವ ಪ್ರಯತ್ನದ ಭಾಗವಾಗಿಯೂ ಈ ರೀತಿ ಮಾಡುತ್ತಾರೆ. ಕೆಲವರು ಮಾರ್ಕ್ಸ್‌ವಾದವನ್ನು ಯುರೋಪಿಯನ್ ತತ್ವಶಾಸ್ತ್ರ ಎಂದು ಹೇಳುತ್ತಾ, ಮಾರ್ಕ್ಸ್‌ವಾದದ ಅಭ್ಯಾಸವನ್ನು "ನಮ್ಮ ಪಾಶ್ಚಿಮಾತ್ಯ ಗುಲಾಮಗಿರಿಯ ಅಭಿವ್ಯಕ್ತಿ" ಎಂದು ಖಂಡಿಸುತ್ತಾರೆ. ಇನ್ನೂ ಕೆಲವರು ಮಾರ್ಕ್ಸ್ ವಾದಿಗಳನ್ನು ಕುರಿತು "ಭಾರತೀಯ ಪ್ರಾಧ್ಯಾಪಕರು ಯುರೋಪಿಯನ್ ತತ್ವಶಾಸ್ತ್ರವನ್ನು ಹೆಚ್ಚು ಗೌರವಿಸುತ್ತಾರೆ ಎಂಬುದು ನೋವಿನ ಸಂಗತಿ" ಎಂದು ಅವರು ವಿಷಾದಿಸುತ್ತಾರೆ.

ಇತಿಹಾಸದ ಬಗೆಗಿನ ಅಜ್ಞಾನ

ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಮಾನವರು ತಮ್ಮ ಬದುಕಿನ ಅಭಿವೃದ್ಧಿಗೆ ಮತ್ತು ಆರ್ಥಿಕ ಅಗತ್ಯಗಳಿಗೆ ಸಹಾಯ ಮಾಡುವ ಆಲೋಚನೆಗಳನ್ನು, ಅವು ಜಗತ್ತಿನ ಯಾವ ಮೂಲೆಯಲ್ಲಿದ್ದರೂ ಅವುಗಳನ್ನು ತಮ್ಮದಾಗಿಸಿಕೊಂಡು ಬದುಕುತ್ತಿದ್ದಾರೆ. ಅದರಲ್ಲೂ ಜನರು ರಾಷ್ಟ್ರೀಯ ಭೇದವಿಲ್ಲದೆ ವಿಜ್ಞಾನ, ಉತ್ಪಾದನೆ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅನೇಕ ವಿಷಯಗಳನ್ನು ಸ್ವೀಕರಿಸಿ, ಅವುಗಳನ್ನು ತಮ್ಮ ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿರುವ ಜನರ ವಲಸೆಯು ಈ ಪರಸ್ಪರ ವಿನಿಮಯಕ್ಕೆ ಪ್ರಮುಖ ಕಾರಣವಾಗಿದೆ. ಅವರು ವಾಸಿಸುವ ಪ್ರದೇಶದಲ್ಲಿ ಸಂಕಷ್ಟ ಎದುರಾದಾಗ, ಅಲ್ಲಿ ಜೀವನ ನಡೆಸಲು ಸಾಧ್ಯವಾಗದಾಗ, ತಮ್ಮ ಸಾಕು ಪ್ರಾಣಿಗಳೊಂದಿಗೆ ದೂರದ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ.

ಯುರೋಪ್, ಏಷ್ಯಾ ಮತ್ತು ಆಫ್ರಿಕಾದಲ್ಲಿ ಕೃಷಿ ಮಾಡಲು ಸಾಧ್ಯವಿರುವ ಸ್ಥಳಗಳಿಗೆ ಜನರು ವಲಸೆ ಹೋಗಿ ನೆಲೆಸಿದರು. ಅವರು ಹೋಗುವಾಗ ತಮ್ಮ ನಾಗರೀಕತೆಯ ಕೆಲವು ಅಂಶಗಳನ್ನು ತಮ್ಮೊಂದಿಗೆ ತೆಗೆದುಕೊಂಡು ಹೋದರು. ತಾವು ಕೊಂಡುಹೋದ ಉತ್ಪಾದನೆಯ ಸಾಧನಗಳ ಬಳಕೆಯ ಜೊತೆಗೆ, ತಾವು ವಲಸೆ ಹೋದ ಹೊಸ ಪ್ರದೇಶಗಳಲ್ಲಿ ಅದಾಗಲೇ ಅಲ್ಲಿರುವ ಸಾಧನಗಳನ್ನೂ ಬಳಕೆ ಮಾಡುತ್ತಾ, ಅಲ್ಲಿನ ಜನರೊಂದಿಗೆ ಸಹಬಾಳ್ವೆ ನಡೆಸಿದರು. ಆದ್ದರಿಂದ ಮಾನವನ ಇತಿಹಾಸದುದ್ದಕ್ಕೂ ನಾಗರಿಕತೆಗಳ ಹರಡುವಿಕೆ ಮುಂದುವರೆದಿದೆ. ಇದನ್ನು ನೋಡದಿರುವುದು ಇತಿಹಾಸದ ಬಗೆಗಿನ ಅಜ್ಞಾನವಷ್ಟೆ. ಸಾವಿರಾರು ವರ್ಷಗಳಿಂದ ಪ್ರಪಂಚದ ಅನೇಕ ಭಾಗಗಳಿಂದ ಅನೇಕ ಚಿಂತನೆಗಳು ಮತ್ತು ಜೀವನ ವಿಧಾನಗಳನ್ನು ಅಭಿವೃದ್ಧಿಪಡಿಸಿದ ಮತ್ತು ಅಳವಡಿಸಿಕೊಂಡ ಇತಿಹಾಸವನ್ನು ಭಾರತ ಹೊಂದಿದೆ. ಅಂತೆಯೇ, ಇಪ್ಪತ್ತನೇ ಶತಮಾನದ ಆರಂಭದಲ್ಲಿ ಭಾರತದಲ್ಲಿ ಮಾರ್ಕ್ಸ್ವಾದವು ಹರಡಲು ಪ್ರಾರಂಭಿಸಿತು.

ಭಾರತದಲ್ಲಿ ಮಾರ್ಕ್ಸ್‌ವಾದ

ಭಾರತದಲ್ಲಿ ಮಾರ್ಕ್ಸ್ ವಾದವು ಹರಡಲು ಪ್ರಾರಂಭಿಸಿದಾಗ, ಅದನ್ನು ಅಧ್ಯಯನ ಮಾಡಿದ ಮಾರ್ಕ್ಸ್ ವಾದಿಗಳು, ಮಾರ್ಕ್ಸ್ ಜನಿಸಿದ ಜರ್ಮನಿ ಅಥವಾ ಯುರೋಪಿನ ಬಗ್ಗೆ ಮಾತ್ರ ಚಿಂತನೆ ಮಾಡಲಿಲ್ಲ. ಅವರು ಭಾರತೀಯ ಸಮಸ್ಯೆಗಳ ಬಗ್ಗೆ ಚಿಂತನೆ ಮಾಡಿದರು. ಅವರು ಬಡರೈತರ ಗ್ರಾಮೀಣ ಜೀವನ ಮತ್ತು ನಗರಗಳಲ್ಲಿನ ಕಾರ್ಮಿಕರ ಸಂಕಷ್ಟಗಳ ಜೀವನದ ಕುರಿತು ಚಿಂತಿಸಿದರು. ವಸಾಹತುಶಾಹಿ ಶೋಷಣೆಯ ನೀತಿಯನ್ನು ಕೊನೆಗೊಳಿಸದೆ ಇವರ ಈ ಸಂಕಷ್ಟಗಳನ್ನು ತೊಡೆದುಹಾಕಲು ಸಾಧ್ಯವಿಲ್ಲ ಎಂದು ಅವರು ಕಂಡುಕೊಂಡರು. ಈ ಪರಿಸ್ಥಿತಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಮಾರ್ಕ್ಸ್ ವಾದವು ಅವರಿಗೆ ದಾರಿದೀಪವಾಗಿ ಕಂಡಿತು.

ಸಮಾಜವನ್ನು ವರ್ಗದ ನೆಲೆಯಲ್ಲಿ ವಿಶ್ಲೇಷಿಸುವ ಮಾರ್ಕ್ಸ್ ವಾದಿ ಐತಿಹಾಸಿಕ ಭೌತವಾದವು ಅವರಿಗೆ ಮಾರ್ಗದರ್ಶನ ನೀಡಿತು. ಹೀಗೆ ಮಾರ್ಕ್ಸ್ ವಾದಿ ದೃಷ್ಟಿಕೋನದಿಂದ ಭಾರತ ದೇಶದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿದ್ದರಿಂದ ಅಂದಿನ ಕಮ್ಯುನಿಸ್ಟರು ಬ್ರಿಟಿಷರ ಆಡಳಿತದ ವಿರುದ್ಧ ಆಂಶಿಕ ಹಕ್ಕುಗಳ ಹೋರಾಟ ಫಲಕಾರಿಯಾಗುವುದಿಲ್ಲ ಎಂಬ ನಿರ್ಧಾರಕ್ಕೆ ಬಂದು, ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಮತ್ತು ಸಂಪೂರ್ಣ ವಿಮೋಚನೆಯನ್ನು ಬಯಸಿದರು. ನಂತರ ಆ ಘೋಷಣೆ ಜನರ ಘೋಷಣೆಯಾಯಿತು. ಆರಂಭದಲ್ಲಿ ಕಮ್ಯುನಿಸ್ಟರ ಈ ನಿಲುವನ್ನು ವಿರೋಧಿಸಿದ ಕಾಂಗ್ರೆಸ್ ಕೂಡ ನಂತರ ಇದನ್ನು ಒಪ್ಪಿಕೊಂಡಿತು. ಅಂದಿನ ಬ್ರಿಟಿಷ್ ಸರ್ಕಾರಕ್ಕೆ ಭಾರತೀಯ ಕಮ್ಯುನಿಸ್ಟರ ಈ ಘೋಷಣೆಯು ಒಂದು ದೊಡ್ಡ ಬೆದರಿಕೆಯಾಗಿ ಕಂಡಿತು. ಕಮ್ಯುನಿಸ್ಟರ ವಿರುದ್ಧ ಅನೇಕ ಷಡ್ಯಂತ್ರದ ಪ್ರಕರಣಗಳನ್ನು ದಾಖಲಿಸಲಾಯಿತು, ಬ್ರಿಟೀಷರು ಕಮ್ಯುನಿಸ್ಟರನ್ನು ಬೇಟೆಯಾಡಿದರು. ಆಗ ಮಾರ್ಕ್ಸ್ ವಾದವನ್ನು ವಿದೇಶಿ ತತ್ವಚಿಂತನೆ ಎಂದು ತಿರಸ್ಕರಿಸಿದ್ದರೆ, ಭಾರತೀಯ ವಿಮೋಚನಾ ಚಳವಳಿಗೆ ಸರಿಯಾದ ಆದರ್ಶ ದೃಷ್ಟಿ ಇರುತ್ತಿರಲಿಲ್ಲ.

ಅದೇ ಸಮಯದಲ್ಲಿ, "ಅನ್ಯ ತತ್ವಶಾಸ್ತ್ರ" ವೆಂದು ಮಾರ್ಕ್ಸ್ ವಾದವನ್ನು ದ್ವೇಷಿಸುತ್ತಿದ್ದ RSS ನಂತಹ ಚಳುವಳಿಗಳು, ವಸಾಹತುಶಾಹಿ ಶೋಷಣೆಯಿಂದ ಸಂಕಷ್ಟದಲ್ಲಿ ಬದುಕುತ್ತಿದ್ದ ಜನರ ಬಗ್ಗೆ ಕಾಳಜಿ ವಹಿಸಲಿಲ್ಲ. ವ್ಯತಿರಿಕ್ತವಾಗಿ ಆರ್.ಎಸ್.ಎಸ್. ನವರು ಭಾರತದಲ್ಲಿ ಬ್ರಿಟೀಷರ ಆಳ್ವಿಕೆಯನ್ನು ಮುಂದುವರೆಸುವ ಉದ್ದೇಶದಿಂದ ಸ್ವಾತಂತ್ರ್ಯ ಹೋರಾಟದಿಂದ ದೂರ ಉಳಿದರು. ಮಾರ್ಕ್ಸ್ ವಾದಿ ಚಿಂತನೆಯು ಜರ್ಮನಿಯಲ್ಲಿ ಹುಟ್ಟಿರಬಹುದು. ಇದು ಇಂಗ್ಲೆಂಡಿನಲ್ಲಿ ಅಭಿವೃದ್ಧಿಗೊಂಡಿರಬಹುದು. ಫ್ರಾನ್ಸ್ ನಲ್ಲಿ ದೊಡ್ಡ ಸದ್ದು ಮಾಡಿರಬಹುದು. ಆದರೆ ಅದು ಎಲ್ಲಿಗೆ ಹೋದರೂ, ಆಯಾ ರಾಷ್ಟ್ರದ ಸ್ವಭಾವಕ್ಕೆ ಅನುಗುಣವಾಗಿ ಜನರ ವಿಮೋಚನೆಗೆ ಸರಿಯಾದ ಪರಿಹಾರಗಳನ್ನು ಕಂಡುಹಿಡಿಯಲು ಮಾರ್ಕ್ಸ್ವಾದವು ಸಹಾಯ ಮಾಡುತ್ತದೆ.

ಮಾರ್ಕ್ಸ್ ವಾದದ ವಿಶಿಷ್ಟ ಲಕ್ಷಣ

ಮಾರ್ಕ್ಸ್ ವಾದದ ವಿಶಿಷ್ಟತೆಯೆಂದರೆ, ಯಾವುದೇ ದೇಶದಲ್ಲಿ ಮಾರ್ಕ್ಸ್ ವಾದಿ ಚಳುವಳಿ ಕಾಣಿಸಿಕೊಂಡರೂ, ಅದು ತಕ್ಷಣವೇ ವರ್ಗ ದೃಷ್ಟಿಕೋನವನ್ನು ಪಡೆಯುತ್ತದೆ. ಮಾರ್ಕ್ಸ್ ವಾದವು ಆ ದೇಶದಲ್ಲಿ ಪ್ರಬಲ ವರ್ಗಗಳು ಮತ್ತು ತುಳಿತಕ್ಕೆ ಒಳಗಾದ ವರ್ಗಗಳು ಎಂಬ ಎರಡು ವರ್ಗಗಳಲ್ಲಿ, ತುಳಿತಕ್ಕೊಳಗಾದ ವರ್ಗಗಳ ಪರವಾಗಿ ಚಳುವಳಿ ಮತ್ತು ಹೋರಾಟಗಳನ್ನು ಕಂಡುಕೊಳ್ಳುವ ತತ್ವಶಾಸ್ತ್ರವಾಗಿ ವಿಕಸನಗೊಳ್ಳುತ್ತದೆ. ಮಾರ್ಕ್ಸ್ ವಾದವು ಆಳುವ ವರ್ಗದ ಪರಿಸ್ಥಿತಿಗಳನ್ನು ಮತ್ತು ತುಳಿತಕ್ಕೊಳಗಾದ ವರ್ಗಗಳ ಪರಿಸ್ಥಿತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಮೂಲಕ ಹೋರಾಟದ ತಂತ್ರವನ್ನು ಅಭಿವೃದ್ಧಿಪಡಿಸುತ್ತದೆ. ಈ ಅವಲಂಬನೆಯು ಮಾರ್ಕ್ಸ್ ವಾದದ ವಿಶಿಷ್ಟ ಲಕ್ಷಣವಾಗಿದೆ. ಮಾರ್ಕ್ಸ್ ವಾದವು ಕಾರ್ಮಿಕ ವರ್ಗವನ್ನು ಅವಲಂಬಿಸಿರುವ ಮತ್ತು ಆ ವರ್ಗದ ಪರವಾಗಿ ನಿಲ್ಲುವ ಲಕ್ಷಣವನ್ನು ಹೊಂದಿದೆ. ಮಾರ್ಕ್ಸ್ವಾದವು ಮಧ್ಯಮ ಮಾರ್ಗದಲ್ಲಿ ನಿಂತು ನಟಿಸುವ ತತ್ವಶಾಸ್ತ್ರವಲ್ಲ. ಇದಕ್ಕಾಗಿಯೇ ಮಾರ್ಕ್ಸ್ ವಾದವನ್ನು ನಿರಂತರವಾಗಿ ವಿರೋಧಿಸಲಾಗುತ್ತದೆ ಮತ್ತು ನಿಂದಿಸಲಾಗುತ್ತಿದೆ. ಮಾರ್ಕ್ಸ್ ವಾದಿ ವಿರೋಧಿಗಳ ಆಕ್ರೋಶಕ್ಕೆ ಮುಖ್ಯ ಕಾರಣವೆಂದರೆ ಮಾರ್ಕ್ಸ್ ವಾದವು ಶ್ರಮಜೀವಿಗಳೊಂದಿಗೆ ದೃಢವಾಗಿ ನಿಲ್ಲುತ್ತದೆ ಮತ್ತು ಅದು ತಟಸ್ಥವಾಗಿದ್ದುಕೊಂಡು ಯಾರಿಗೂ ಮೋಸ ಮಾಡುವುದಿಲ್ಲ,

ಆಗಿನ ಸೋವಿಯತ್ ಒಕ್ಕೂಟದಲ್ಲಿ ಹುಟ್ಟಿಕೊಂಡ ಮಾರ್ಕ್ಸ್ ವಾದಿ ವಿಚಾರಗಳು, ಆಫ್ರಿಕನ್ ಮಾರ್ಕ್ಸ್ ವಾದ, ಏಷ್ಯನ್ ಮಾರ್ಕ್ಸ್ ವಾದದಂತಹ ಭೂದೃಶ್ಯವನ್ನು ಕೇಂದ್ರೀಕರಿಸುವ ಮಾರ್ಕ್ಸ್ ವಾದಿ ಚರ್ಚೆಗಳು ನಡೆದಿವೆ. ಈಗಲೂ ನಡೆಯುತ್ತಿವೆ. ಮಾರ್ಕ್ಸ್ ವಾದವನ್ನು ವಿರೂಪಗೊಳಿಸುವ ತಪ್ಪು ವಿಚಾರಗಳ ವಿರುದ್ಧ ಸೈದ್ಧಾಂತಿಕ ಹೋರಾಟವೂ ಇದೆ. ಇವೆಲ್ಲವೂ ಮಾರ್ಕ್ಸ್ ವಾದಕ್ಕೆ ಮತ್ತಷ್ಟು ಶ್ರೀಮಂತಿಕೆಯನ್ನು ನೀಡಿದೆ. ವರ್ಗ ವಿಮೋಚನೆಯು ಪ್ರತಿಯೊಂದು ದೇಶದ ವಿಶಿಷ್ಟತೆಗಳೊಂದಿಗೆ ಕೈಜೋಡಿಸುತ್ತದೆ. ಇದು ಮಾರ್ಕ್ಸ್ ವಾದದ ವಿಶ್ವ ಕಾರ್ಯಸೂಚಿಯೊಂದಿಗೆ ಹೊಂದಿಕೊಂಡಿದೆ. ಮಾನವ ಇತಿಹಾಸದ ಈ ಕ್ಷಣದಲ್ಲಿ, ಮಾನವೀಯತೆಯು ಐತಿಹಾಸಿಕ ಕರ್ತವ್ಯದೊಂದಿಗೆ ಪ್ರಯಾಣಿಸುತ್ತಿದೆ. ಆ ಕರ್ತವ್ಯವೆಂದರೆ ಬಂಡವಾಳಶಾಹಿಯನ್ನು ಕೊನೆಗೊಳಿಸುವುದು. ಇದಕ್ಕಾಗಿ ದುಡಿಯುವ ವರ್ಗಗಳು ರಾಷ್ಟ್ರೀಯ ರಾಜಕೀಯ ಪ್ರಜ್ಞೆಯೊಂದಿಗೆ ಒಂದಾಗಬೇಕು. ಮಾರ್ಕ್ಸ್ ವಾದವೇ ಇದಕ್ಕೆ ಮಾರ್ಗದರ್ಶಿ. ಇದು ವಿದೇಶಿ ತತ್ವವೋ ಅಥವಾ ರಾಷ್ಟ್ರೀಯ ತತ್ವವೋ ಎಂದು ಮಾತನಾಡುವುದು ಅನಗತ್ಯ.

–ನಮ್ಮ ವರದಿಗಾರರಿಂದ



ಬೆಂಗಳೂರಿನಲ್ಲಿ ಸೌಹಾರ್ದ ಯುಗಾದಿ ಆಚರಿಸಲಾಯಿತು

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**